ಏಪ್ರಿಲ್ 2017 ₹ 15/-

# ಯುಗರಶ್ಮಿ

## ತ್ರೈಮಾಸಿಕ




- ಇಸ್ಲಾಮ್ ಧರ್ಮದ ಬಗ್ಗೆ ವಾಸ್ತವಿಕವಾಗಿಯೂ ಭಯಪಡಬೇಕಾಗಿದೆಯೋ?
- ಜಾಗತಿಕ ಶಾಂತಿ ಸ್ಥಾಪನೆಗೆ ಸುವರ್ಣ ತತ್ವಗಳು
- ಇಸ್ಲಾಮ್ ಧರ್ಮದಲ್ಲಿ ವಿವಾಹ ವಿಚ್ಛೇದನ ನಿಯಮ
- ಖಾತಮುಲ್ ಅಂಬಿಯಾ ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಶ್ರೇಷ್ಠತೆ
- ನೋಬೆಲ್ ವಿಜೇತನನ್ನು ತಡವಾಗಿ ಗೌರವಿಸಲಾಯಿತು

"ನೀವು ಮನುಷ್ಯ ವಂಶದ ಒಳಿತಿಗಾಗಿ ಸೃಷ್ಟಿಸಲ್ಪಟ್ಟ ಅತಿ ಉತ್ಕೃಷ್ಟ ಸಮುದಾಯವಾಗಿದ್ದೀರಿ. ನೀವು ಒಳಿತನ್ನು ಉಪದೇಶಿಸುತ್ತೀರಿ; ಕೆಡುಕನ್ನು ತಡೆಯುತ್ತೀರಿ ಮತ್ತು ಅಲ್ಲಾಹನನ್ನು ನಂಬುತ್ತೀರಿ."
– ಪವಿತ್ರ ಖುರ್‌ಆನ್ (3:111)

ಯುಗರಶ್ಮಿ

ವಿಷಯ ಸೂಚಿಕೆ — ಪುಟ


* ತಪ್ಪು ಗ್ರಹಿಕೆ ನಿವಾರಣೆ 1
* ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
* ಇಸ್ಲಾಮ್ ಧರ್ಮದ ಬಗ್ಗೆ ವಾಸ್ತವಿಕವಾಗಿಯೂ ಭಯಪಡಬೇಕಾಗಿದೆಯೇ? 3
* ಜಾಗತಿಕ ಶಾಂತಿ ಸ್ಥಾಪನೆಗೆ ಸುವರ್ಣ ತತ್ವಗಳು 9
* ಇಸ್ಲಾಮ್ ಧರ್ಮದಲ್ಲಿ ವಿವಾಹ ವಿಚ್ಛೇದನ ನಿಯಮ 16
* ಖಾತಮುಲ್ ಅಂಬಿಯಾ (ಪ್ರವಾದಿಗಳ ಮುದ್ರೆ) ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶ್ರೇಷ್ಠತೆ 26
* ನೋಬೆಲ್ ವಿಜೇತನನ್ನು ತಡವಾಗಿ ಗೌರವಿಸಲಾಯಿತು 29
* ಕವನ * ಪ್ರತಿಭೆ 31
* ಓದಿದ್ದು
  * ಕ್ರಿಸ್‌ಮಸ್ ಯಾವ ದಿನ ? 32
  * ರಾಮ, ಕೃಷ್ಣ, ವಾಲ್ಮೀಕಿ ಮಾಂಸಾಹಾರಿಗಳು * ಮಾಂಸಾಹಾರ: ಬನ್ನಂಜೆಯವರೇ ಸಮರ್ಥಿಸಿಲ್ಲವೇ? 34
  * ಸದ್ದಾಂ ಇದ್ದಿದ್ದರೆ ಐಸಿಸ್ ಹುಟ್ಟುತ್ತಿರಲಿಲ್ಲ
  * ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಪಾದ್ರಿಗೆ ಇಮ್ಮಡಿ ಜೀವಾವಧಿ ಶಿಕ್ಷೆ * ಪ್ರತಿಕ್ರಿಯೆ 35
* ವಾರ್ತೆಗಳು 36
* ಸಂಪಾದಕರಿಗೆ ಪತ್ರ 39
* ನಿಧನ ವಾರ್ತೆಗಳು 40
* ಅಹ್ಮದಿಯರಿಗೆ ಸುತ್ತೋಲೆ 42


ಮುಖಪುಟ ಚಿತ್ರ: ಇಹ್‌ಸಾನ್ ಮಸ್ಜಿದ್ – ಮನ್ಹೀಮ್, ಜರ್ಮನಿ


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–

ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575 001.

بسم الله الرحمن الرحيم
نحمده ونصلي على رسوله الكريم

# ಯುಗರಶ್ಮಿ

ಎಪ್ರಿಲ್ 2017

*ಸಂಪಾದಕ : ಮುಹಮ್ಮದ್ ಯೂಸುಫ್*

| | | | |
|---|---|---|---|
| ಆರಂಭ : 1975 | ಸಂಪುಟ : 34 | ಶಹಾದತ್ : 1396 ಹಿಜರೀ ಶಮ್ಸೀ | ಸಂಚಿಕೆ : 1 |

## ತಪ್ಪು ಗ್ರಹಿಕೆ ನಿವಾರಣೆ

ಹಝ್ರತ್ ಯೇಸು ಮಸೀಹರ(ಅ) ಆದ್ಯಕಾಲ ಜೀವಿತದ ಮತ್ತು ಅಂತಿಮ ಕಾಲ ಜೀವಿತದ ಕುರಿತು ಮುಸ್ಲಿಮರು ಮತ್ತು ಕ್ರೈಸ್ತ ಧರ್ಮದ ಬಹುತೇಕ ಪಂಗಡಗಳು ಹೊಂದಿರುವ ಆಪತ್ಕಾರಿ ತಪ್ಪು ಗ್ರಹಿಕೆಗಳನ್ನು ಸರಿಯಾದ ಮತ್ತು ಅತ್ಯಂತ ಪರಿಪೂರ್ಣವಾದ ಚಾರಿತ್ರಿಕ ಸಾಕ್ಷ್ಯಗಳಿಂದ ಮತ್ತು ಅನ್ಯ ಜನಾಂಗಗಳ ಪುರಾತನ ದಾಖಲೆಗಳ ಮೂಲಕ ದೂರೀಕರಿಸಲಿಕ್ಕಾಗಿ ಈ ಗ್ರಂಥವನ್ನು ಬರೆಯಲಾಗಿದೆ. ಅವರ ತಪ್ಪು ಗ್ರಹಿಕೆಗಳು ಏಕದೇವ ವಿಶ್ವಾಸಕ್ಕೆ ಹಾನಿಕರವಾಗಿದೆಯಲ್ಲದೆ ಇದರ ಅತ್ಯಂತ ಕೆಟ್ಟ ಮತ್ತು ವಿಷಕಾರಿ ಪ್ರಭಾವವು ಈ ದೇಶದ ಮುಸ್ಲಿಮರ ಸ್ವಭಾವ ಗುಣಗಳ ಮೇಲೆ ನಿರಂತರವಾಗಿ ಗೋಚರಿಸುತ್ತಾ ಇದೆ. ಇಂತಹ ನಿರಾಧಾರ ಕಥೆಗಳನ್ನು ನಂಬುವುದರಿಂದ ಕೆಟ್ಟ ಸ್ವಭಾವ, ಹಗೆತನ, ಹೃದಯ ಕಾಠಿಣ್ಯ, ದಯಾಹೀನತೆಗಳಂತಹ ಆಧ್ಯಾತ್ಮಿಕ ರೋಗಗಳು ಬಹುತೇಕ ಮುಸ್ಲಿಮ್ ವಿಭಾಗಗಳಲ್ಲಿ ಹಬ್ಬುತ್ತಾ ಹೋಗುತ್ತಿವೆ. ಸಹಾನುಭೂತಿ, ದಯೆ, ನ್ಯಾಯಪಾಲನೆ, ವಿನಯ ಮೊದಲಾದ ಪರಿಶುದ್ಧ ಮಾನವೀಯ ಗುಣಗಳು ಅವರಿಂದ ದಿನಂಪ್ರತಿ ಕಡಿಮೆಯಾಗುತ್ತಾ ಹೋಗುತ್ತಿದ್ದು ಈ ಸದ್ಗುಣಗಳೆಲ್ಲ ಅವರಿಂದ ವಿದಾಯ ಹೊಂದಲು ಸಿದ್ಧವಾಗಿವೆ. ಕಠಿಣ ಹೃದಯ ಮತ್ತು ಕೆಟ್ಟ ಸ್ವಭಾವ ಹೊಂದಿರುವ ಬಹುತೇಕ ಮುಸ್ಲಿಮರು ಹೇಗಿರುವರೆಂದರೆ ಅವರ ಮತ್ತು ಕ್ರೂರ ಮೃಗಗಳ ಮಧ್ಯೆ ಪ್ರಾಯಶಃ ಬಹಳ ಕಡಿಮೆ ವ್ಯತ್ಯಾಸ ಇದೆ ಎಂದು ತೋರುತ್ತದೆ. ಜೈನ ಮತ ವಿಶ್ವಾಸಿಯಾದ ಮನುಷ್ಯ ಅಥವಾ ಬುದ್ಧ ಮತದ ಅನುಯಾಯಿ ಒಂದು ಸೊಳ್ಳೆಯನ್ನಾಗಲಿ ಕ್ರಿಮಿಕೀಟವನ್ನಾಗಲಿ ಕೊಲ್ಲುವುದರಿಂದ ತನ್ನನ್ನು ರಕ್ಷಿಸಿಕೊಳ್ಳುತ್ತಾನೆ ಮತ್ತು ಅವುಗಳನ್ನು ಹತ್ಯೆ ಮಾಡುವ ಬಗ್ಗೆ ಭಯಪಡುತ್ತಾನೆ. ಆದರೆ ಮುಸ್ಲಿಮರಾದ ನಮ್ಮಲ್ಲಿ ಬಹುತೇಕ ಎಂತಹ ಜನರಿರುವರೆಂದರೆ ಅನ್ಯಾಯದಿಂದ ಒಬ್ಬನನ್ನು ಕೊಲ್ಲುವಾಗ ಮತ್ತು ನಿರಪರಾಧಿಯ ಜೀವ ಹರಣ ಮಾಡುವಾಗ ಕೂಡ ಪರಮ ಶಕ್ತಿಶಾಲಿಯಾದ ದೇವನ ಶಿಕ್ಷೆಯನ್ನು ಅವರು ಭಯಪಡುವುದಿಲ್ಲ ಎಂಬುದು ದುಃಖಕರವಾಗಿದೆ. ಭೂಲೋಕದ ಎಲ್ಲ ಪ್ರಾಣಿಗಳಿಗಿಂತ ಮನುಷ್ಯನ ಜೀವವು ಬಹಳ ಹೆಚ್ಚು ಶ್ರೇಷ್ಠವಾದುದೆಂದು ದೇವನು ಹೇಳಿರುವನು.

ಇಂತಹ ಹೃದಯ ಕಾಠಿಣ್ಯ, ದಯಾಹೀನತೆ ಮತ್ತು ಕಠೋರತೆಗೆ ಕಾರಣವೇನು? ಬಾಲ್ಯದಿಂದಲೇ ಇಂತಹ ಕಥೆಗಳನ್ನೂ ಅವಾಸ್ತವಿಕವಾಗಿ ಜಿಹಾದಿನ ವಿಷಯವನ್ನೂ ಮುಸ್ಲಿಮರ ಕಿವಿಗಳಿಗೆ ಹಾಕಿ ಅದನ್ನು ಅವರ ಹೃದಯಗಳಲ್ಲಿ ಇರಿಸಲಾಗುತ್ತಿದೆ. ಇವುಗಳ ಕಾರಣದಿಂದ ಕ್ರಮೇಣ ಅವರ ಸುಸ್ವಭಾವಗುಣಗಳು ಮೃತಾವಸ್ಥೆಗೆ ತಲಪುತ್ತವೆ. ಅವರ ಹೃದಯಗಳು ಅವರು ದ್ವೇಷಿಸಬೇಕಾದ ಸಂಗತಿಗಳನ್ನು ಮನವರಿಕೆ ಮಾಡಿಕೊಳ್ಳಲು ಅಸಮರ್ಥವಾಗುತ್ತವೆ. ಜಾಗರೂಕನಾಗಿರದ ಒಬ್ಬ ವ್ಯಕ್ತಿಯನ್ನು ಕೊಂದು ಅವನ ಕುಟುಂಬವನ್ನು ನಾಶಕ್ಕೊಳಪಡಿಸುವವನು ತನ್ನ ಬಗ್ಗೆ ತಾನು ಬಹಳ ಪುಣ್ಯದಾಯಕವಾದ ಕೆಲಸ ಮಾಡಿರುವೆನೆಂದೂ ತಾನು ತನ್ನ ಸಮುದಾಯವು ಹೆಮ್ಮೆಪಡುವ ಕೆಲಸ ನಿರ್ವಹಿಸಿರುವೆನೆಂದೂ ಭಾವಿಸುತ್ತಾನೆ. ಇಂತಹ ಕೆಟ್ಟ ಕೆಲಸಗಳನ್ನು ತಡೆಯುವುದನ್ನು

## ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಒಂದು ಹಿಡಿ ಅನ್ನ ತಿಂದು ತನ್ನನ್ನು ಸ್ತುತಿಸುವ ಮತ್ತು ನೀರು ಕುಡಿದು ತನಗೆ ಸ್ತುತಿ ಹೇಳುವ ಒಬ್ಬ ದಾಸನ ಕುರಿತು ಖಂಡಿತವಾಗಿಯೂ ಅಲ್ಲಾಹನು ಸಂಪ್ರೀತನಾಗುವನು. (ಬುಖಾರಿ)
- ದಾನಧರ್ಮಗಳನ್ನು ಮರಳಿ ಪಡೆಯುವವನು ವಾಂತಿಮಾಡಿದ್ದನ್ನು ಪುನಃ ತಿನ್ನುವ ನಾಯಿಗೆ ಸಮಾನ. (ಬುಖಾರಿ, ಮುಸ್ಲಿಂ)
- ಮೂವರಿದ್ದರೆ, ಮೂರನೆಯವನನ್ನು ಬಿಟ್ಟು ಇಬ್ಬರು ಪರಸ್ಪರ ಗುಟ್ಟಾಗಿ ಸಂಭಾಷಣೆ ಮಾಡಬಾರದು. (ಬುಖಾರಿ, ಮುಸ್ಲಿಂ)
- ನೀವು ಪರಸ್ಪರ ಅತಿಕ್ರಮಣ ಮಾಡದೆಯೂ ಪರಸ್ಪರ ಸ್ಪರ್ಧಿಸದೆಯೂ ವಿನಯದಿಂದ ವರ್ತಿಸಬೇಕೆಂದು ನನಗೆ ಅಲ್ಲಾಹನು ಅರುಹಿದ್ದಾನೆ. (ಮುಸ್ಲಿಂ)
- ನಿನ್ನ ಸಹೋದರನ ಕಷ್ಟಕಾರ್ಪಣ್ಯದಲ್ಲಿ ನೀನು ಸಂತೋಷ ಪ್ರಕಟಿಸಬಾರದು. ಹಾಗೆ ಮಾಡಿದರೆ ಅಲ್ಲಾಹು ಅವನನ್ನು ಅನುಗ್ರಹಿಸಿ ನಿನ್ನನ್ನು ಕಷ್ಟಕ್ಕೊಳಪಡಿಸುವನು. (ತಿರ್ಮಿದೀ)

ಉಪದೇಶಿಸುವ ಪ್ರವಚನಗಳು ನಮ್ಮ ದೇಶದಲ್ಲಿ ನೀಡಲ್ಪಡುವುದಿಲ್ಲವಾದುದರಿಂದಲೂ ಅಥವಾ ಇಂತಹ ಪ್ರವಚನಗಳನ್ನು ಅಪರೂಪವಾಗಿಯೇ ನೀಡಲಾಗುತ್ತಿರುವುದರಿಂದಲೂ ಹೀಗೆ ಸಂಭವಿಸುತ್ತದೆ. ಆದುದರಿಂದ ಸಾಮಾನ್ಯ ಜನರ ಯೋಚನೆಗಳು ಇಂತಹ ಹಿಂಸಾತ್ಮಕ ಪ್ರವೃತ್ತಿಗಳ ಕಡೆಗೆ ಬಾಗಿಕೊಂಡಿರುತ್ತವೆ.

ನಾನು ಇದರ ಮೊದಲು ಹಲವು ಸಾರಿ ನನ್ನ ಸಮುದಾಯದ ಸ್ಥಿತಿಯ ಬಗ್ಗೆ ಆತಂಕಗೊಂಡು ಉರ್ದು, ಫಾರ್ಸೀ ಮತ್ತು ಅರಬಿ ಭಾಷೆಗಳಲ್ಲಿ ಗ್ರಂಥಗಳನ್ನು ಬರೆದು ಹೀಗೆ ಸ್ಪಷ್ಟಪಡಿಸಿರುವೆನು: ಮುಸ್ಲಿಮರಲ್ಲಿ ಪ್ರಚಲಿತವಾಗಿರುವ ಜಿಹಾದಿನ ಕುರಿತು ನಿಲುವು, ರಕ್ತ ಪಿಪಾಸು ಇಮಾಮ್ ಮಹ್‌ದಿಯ ಆಗಮನದ ಬಗ್ಗೆ ಪ್ರತೀಕ್ಷೆ, ಅನ್ಯ ಜನಾಂಗದವರನ್ನು ದ್ವೇಷಿಸುವ ಮನೋಭಾವ, ಇವುಗಳೆಲ್ಲ ಸಂಕುಚಿತ ದೃಷ್ಟಿಯನ್ನು ಹೊಂದಿದ ಮುಸ್ಲಿಮ್ ಮತಪಂಡಿತರ ತಪ್ಪು ಗ್ರಹಿಕೆಗಳ ಪರಿಣಾಮಗಳಾಗಿವೆ. ಆತ್ಮರಕ್ಷಣೆಗೋಸ್ಕರ ಮಾಡುವ ಯುದ್ಧ ಅಥವಾ ದೌರ್ಜನ್ಯಗಾರರನ್ನು ಶಿಕ್ಷಿಸಲು ಮಾಡುವ ಯುದ್ಧ ಅಥವಾ ಸ್ವಾತಂತ್ರ್ಯವನ್ನು ಸಂರಕ್ಷಿಸಲು ಮಾಡುವ ಯುದ್ಧ ಇವುಗಳ ಹೊರತು ಬೇರೆ ರೀತಿಯ ಯುದ್ಧಗಳನ್ನು ಇಸ್ಲಾಮ್ ಧರ್ಮವು ಅನುಮತಿಸುವುದಿಲ್ಲ. ಧರ್ಮ ಪ್ರಚಾರಕ್ಕಾಗಿ ಯುದ್ಧ ಮಾಡುವುದನ್ನು ಇಸ್ಲಾಮ್ ಯಾವುದೇ ರೀತಿಯಲ್ಲಿ ಅನುಮತಿಸುವುದಿಲ್ಲ. ಶತ್ರುಗಳ ಆಕ್ರಮಣದಿಂದ ಜೀವಹಾನಿ ಸಂಭವಿಸುವ ಸಾಧ್ಯತೆ ಇರುವಾಗ ಮಾಡಲಾಗುವ ಯುದ್ಧವು ಆತ್ಮರಕ್ಷಣೆಗಾಗಿ ಮಾಡುವ ಯುದ್ಧವಾಗಿದೆ.

ಇಸ್ಲಾಮ್ ಧರ್ಮವು ಅಂಗೀಕರಿಸುವ ಮೇಲೆ ವಿವರಿಸಲಾದ ಮೂರು ರೀತಿಯ ಯುದ್ಧಗಳನ್ನು ಶರಈ ಜಿಹಾದ್ (ಧರ್ಮ ಸಂಹಿತೆಯು ಅಂಗೀಕರಿಸುವ ಯುದ್ಧ) ಎಂದೆನ್ನಲಾಗುತ್ತಿದೆ. ಈ ಯುದ್ಧಗಳ ಹೊರತು ಧರ್ಮ ಪ್ರಚಾರಕ್ಕಾಗಿ ಯಾವುದೇ ರೀತಿಯಲ್ಲಿ ಮಾಡುವ ಯುದ್ಧವು ಇಸ್ಲಾಮ್‌ನಲ್ಲಿ ಧರ್ಮಬದ್ಧವಲ್ಲ. ಈ ವಿಷಯಕ್ಕೆ ಸಂಬಂಧಿಸಿ ಗ್ರಂಥಗಳನ್ನು ಬರೆದು ನಾನು ಬಹಳ ಹಣ ಖರ್ಚು ಮಾಡಿ ಈ ದೇಶದಲ್ಲಿಯೂ ಅರಬ್, ಶಾಮ್ (ಸಿರಿಯಾ) ಮತ್ತು ಖುರಾಸಾನ್ ದೇಶಗಳಲ್ಲಿಯೂ ವಿತರಣೆ ಮಾಡಿರುವೆನು. ಆದರೆ ದೇವನ ಅನುಗ್ರಹದಿಂದ ಈಗ ಬಲಯುತವಾದ ಮತ್ತು ಸ್ಪಷ್ಟವಾದ ಸಾಕ್ಷ್ಯಗಳು, ನಿಖರವಾದ ದಾಖಲೆಗಳು ಮತ್ತು ಚಾರಿತ್ರಿಕ ಸಾಕ್ಷ್ಯಾಧಾರಗಳು ನನಗೆ ದೊರೆತಿವೆ. ಅವುಗಳ ಸಹಾಯದಿಂದ ಮಿಥ್ಯ ಮತ್ತು ನಿರಾಧಾರ ವಿಶ್ವಾಸಗಳನ್ನು ಜನರ ಹೃದಯಗಳಿಂದ ಹೊರ ಹಾಕಲು ಸಹಾಯಕವಾಗುವುದೆಂದು ಅವುಗಳಿಂದ ಹೊರಹೊಮ್ಮುತ್ತಿರುವ ಸತ್ಯದ ಕಿರಣಗಳು ನನಗೆ ಶುಭವಾರ್ತೆ ನೀಡುತ್ತಿವೆ. ಬೇಗನೆ ಅವುಗಳ ಪ್ರಕಟಣೆಯ ನಂತರ ಮುಸ್ಲಿಮರ ಹೃದಯಗಳಲ್ಲಿ ಈ ವಿಶ್ವಾಸಗಳ ವಿರುದ್ಧ ಒಂದು ಆಶ್ಚರ್ಯಕರವಾದ ಬದಲಾವಣೆ ಉಂಟಾಗಲಿದೆ. ಅತ್ಯಂತ ದೃಢವಾಗಿ ಹೀಗೆ ಪ್ರತೀಕ್ಷಿಸಲಾಗುತ್ತಿದೆ: ಇಸ್ಲಾಮ್ ಧರ್ಮದ ಸಾತ್ವಿಕರಾದ ಜನರ ಹೃದಯಗಳಿಂದ ತಾಳ್ಮೆ, ವಿನಯ ಮತ್ತು ದಯಾರ್ದ್ರತೆಯ ಸುಂದರ ಮತ್ತು ಸಿಹಿಯಾದ ಕಾರಂಜಿಗಳು ಹೊರ ಹರಿಯುವುವು. ಅವರು ಆಧ್ಯಾತ್ಮಿಕವಾಗಿ ಬದಲಾವಣೆ ಹೊಂದುವುದರಿಂದ ದೇಶದಲ್ಲಿ ಅತ್ಯಂತ ಒಳ್ಳೆಯ ಮತ್ತು ಅನುಗ್ರಹಕರವಾದ ಪ್ರಭಾವವು ಬೀರಲ್ಪಡುವುದು. ಕ್ರೈಸ್ತ ಧರ್ಮದ ಸಂಶೋಧಕರು ಮತ್ತು ಇತರ ಎಲ್ಲ ಸತ್ಯಾನ್ವೇಷಿಗಳು ನನ್ನ ಈ ಗ್ರಂಥದಿಂದ ಲಾಭ ಪಡೆಯುವರು ಎಂದು ನಾನು ದೃಢವಾಗಿ ಭಾವಿಸುತ್ತೇನೆ.

ನಾನು ಈ ಮೊದಲು ಹೇಳಿದಂತೆ ನನ್ನ ಗ್ರಂಥದ ಮೂಲೋದ್ದೇಶ ಮುಸ್ಲಿಮರ ಮತ್ತು ಕ್ರೈಸ್ತರ ನಂಬಿಕೆಗಳಲ್ಲಿ ಪ್ರವೇಶಿಸಿರುವ ತಪ್ಪುಗಳನ್ನು ಸರಿಪಡಿಸುವುದಾಗಿದೆ. **(ಮಸೀಹ್ ಹಿಂದುಸ್ತಾನ್ ಮೆ)**

**–ಹಝ್ರತ್ ಮಿರ್ಝಾ ಗುಲಾಂ ಅಹ್ಮದ್,** ಅಹ್ಮದಿಯಾ ಮುಸ್ಲಿಂ ಜಮಾಅತ್ ಸ್ಥಾಪಕರು

# ಇಸ್ಲಾಮ್ ಧರ್ಮದ ಬಗ್ಗೆ ವಾಸ್ತವಿಕವಾಗಿಯೂ ಭಯಪಡಬೇಕಾಗಿದೆಯೋ ?



**2016 ಮೇ 9ರಂದು ಡೆನ್‌ಮಾರ್ಕ್ ದೇಶದ ಕೋಪನ್ ಹೇಗನ್ ನಗರದಲ್ಲಿ ಜರಗಿಸಲಾದ ಸ್ವಾಗತ ಸಮಾರಂಭದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಪಂಚಮ ಖಲೀಫರೂ ಜಾಗತಿಕ ಇಮಾಮರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಮಾಡಿದ ಭಾಷಣ. ಈ ಸಮಾರಂಭದಲ್ಲಿ ರಾಜಕೀಯ ಧುರೀಣರೂ ವಿಶ್ವವಿದ್ಯಾಲಯಗಳ ಮುಖ್ಯಸ್ಥರೂ ಸಾಮಾಜಿಕ ನಾಯಕರೂ ಉಪಸ್ಥಿತರಿದ್ದರು.**

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಖಲೀಫರು ಹೀಗೆ ಹೇಳಿದರು:

ಎಲ್ಲ ಆದರಣೀಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು– ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲಿರಲಿ.

ಮೊತ್ತಮೊದಲು ನಾನು ಎಲ್ಲ ಅತಿಥಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನಮ್ಮ ಆಮಂತ್ರಣವನ್ನು ಸ್ವೀಕರಿಸಿ ನೀವು ಈ ಸಮಾರಂಭಕ್ಕೆ ಆಗಮಿಸಿರುವಿರಿ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಸ್ಲಾಮ್ ಧರ್ಮದ ಒಂದು ಪಂಗಡವಾಗಿದೆ. ಅದರ ಉದ್ದೇಶ ಲಕ್ಷ್ಯಗಳು ಅತ್ಯಂತ ಸ್ಪಷ್ಟವಾಗಿವೆ. ನಾವು ಮಾನವರನ್ನು ಸೃಷ್ಟಿಕರ್ತನೂ ಸರ್ವಶಕ್ತನೂ ಆಗಿರುವ ದೇವನ ಕಡೆಗೆ ತರಲು ಪ್ರಯತ್ನಿಸುತ್ತಿದ್ದೇವೆ. ಎಲ್ಲ ಜನರಿಗೆ ತಮ್ಮ ಸಹ ಜೀವಿಗಳಾದವರೊಂದಿಗೆ ಇರುವ ಹೊಣೆಗಾರಿಕೆಗಳ ಕಡೆಗೆ ಗಮನ ಹರಿಯಿಸಿ ಒಬ್ಬರಿನ್ನೊಬ್ಬರೊಂದಿಗೆ ಪ್ರೀತಿ, ಕಾರುಣ್ಯ ಮತ್ತು ಗೌರವದೊಂದಿಗೆ ವರ್ತಿಸುವ ಆವಶ್ಯಕತೆಯನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಿದ್ದೇವೆ. ಲೋಕದಲ್ಲಿ ಸತ್ಯವಾದ ಮತ್ತು ದೀರ್ಘಕಾಲ ನೆಲೆನಿಲ್ಲುವ ಶಾಂತಿ ಸ್ಥಾಪಿತವಾಗಬೇಕೆಂದು ನಾವು ಆಶಿಸುತ್ತೇವೆ. ಅಹ್ಮದೀ ಮುಸ್ಲಿಮರಾದ ನಾವು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರನ್ನು ಪವಿತ್ರ ಖುರ್‌ಆನ್ ಮತ್ತು ಇಸ್ಲಾಮಿನ ಪವಿತ್ರ ಪೈಗಂಬರರು(ಸ) ಭವಿಷ್ಯ ನುಡಿದ ಪ್ರಕಾರ ಆಗಮಿಸಿದ ವಾಗ್ದತ್ತ ಮಸೀಹ್ ಎಂದೂ ಇಮಾಮ್ ಮಹ್‌ದೀ ಎಂದೂ ನಂಬುತ್ತೇವೆ.

ಪವಿತ್ರ ಖುರ್‌ಆನ್ ಮತ್ತು ಇಸ್ಲಾಮಿನ ಪವಿತ್ರ ಪೈಗಂಬರರು(ಸ) ವಾಗ್ದತ್ತ ಮಸೀಹರ(ಅ) ಸತ್ಯತೆಗೆ ಸಾಕ್ಷ್ಯಗಳಾಗುವ ಕೆಲವು ದೃಷ್ಟಾಂತಗಳನ್ನು ಪ್ರಸ್ತಾಪಿಸಿದ್ದಾರೆ. ಈ ಭವಿಷ್ಯವಾಣಿಗಳು ನಮ್ಮ ಜಮಾಅತಿನ ಸ್ಥಾಪಕರ ಸತ್ಯತೆಗೆ ಸಾಕ್ಷ್ಯಗಳಾಗಿ ಪ್ರಕಟಗೊಂಡಿದೆ ಎಂದು ನಾವು ನಂಬುತ್ತೇವೆ. ಕೆಲವು ದೃಷ್ಟಾಂತಗಳು ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಆಗಮಿಸಲಿರುವ ಕಾಲದಲ್ಲಿ ಲೋಕದಲ್ಲಿ ಸಂಭವಿಸುವ ಅಭಿವೃದ್ಧಿಯ ಕಡೆಗೆ ಸೂಚಿಸುತ್ತಿದ್ದುವು. ಉದಾಹರಣೆಗೆ, ಒಂದು ಭವಿಷ್ಯವಾಣಿಯಲ್ಲಿ ಹೀಗೆ ಹೇಳಲಾಗಿದೆ: ವಾಗ್ದತ್ತ ಮಹಾನುಭಾವರು ಆಗಮಿಸುವ ಕಾಲದಲ್ಲಿ ಲೋಕದಲ್ಲಿ ತಂತ್ರಜ್ಞಾನ ಮತ್ತು ಸಂಪರ್ಕ ಮಾಧ್ಯಮಗಳು ಎಷ್ಟು ಪ್ರಗತಿ ಹೊಂದಿರುವುದೆಂದರೆ ಆ ಕಾಲದಲ್ಲಿ ಪತ್ರಿಕೆಗಳು ಮತ್ತು ಇತರ ಸಂಪರ್ಕ ಜಾಲ ತಾಣಗಳು ಅಭಿವೃದ್ಧಿಗೊಂಡು ಲೋಕದ ವಿವಿಧ ಭಾಗಗಳಲ್ಲಿರುವ ಜನರು ಒಟ್ಟಿಗೆ ಒಂದೇ ಸಮಯದಲ್ಲಿ ಸೇರಿಸಲ್ಪಡುವರು.

ವಾಗ್ದತ್ತ ಮಸೀಹರ ಆಗಮನದ ಕಾಲದಲ್ಲಿ ಆಕಾಶದಲ್ಲಿ ಕಾಣಿಸಿಕೊಳ್ಳುವ ಒಂದು ಮಹತ್ವಪೂರ್ಣ ದೃಷ್ಟಾಂತದ ಬಗ್ಗೆ ಸಹ

ಇಸ್ಲಾಮಿನ ಪವಿತ್ರ ಪೈಗಂಬರರು[ಸ] ಭವಿಷ್ಯ ನುಡಿದಿರುವರು. ರಮಝಾನ್ ತಿಂಗಳಲ್ಲಿ ನಿಗದಿತ ದಿನಾಂಕಗಳಲ್ಲಿ ಸೂರ್ಯನಿಗೂ ಚಂದ್ರನಿಗೂ ಸಂಭವಿಸುವ ಗ್ರಹಣಗಳ ಬಗ್ಗೆ ಆ ಭವಿಷ್ಯವಾಣಿ ಹೇಳುತ್ತದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ತಾನು ವಾಗ್ದತ್ತ ಮಸೀಹ್, ಮಹ್‌ದೀ ಎಂದು ವಾದಿಸಿದ ನಂತರ ಈ ದೃಷ್ಟಾಂತ 1894ರಲ್ಲಿ ಪೂರ್ವಾರ್ಧ ಗೋಳದಲ್ಲೂ 1895 ಪಶ್ಚಿಮಾರ್ಧ ಗೋಳದಲ್ಲಿಯೂ ಕಾಣಿಸಿಕೊಂಡಿತು.

ಪವಿತ್ರ ಖುರ್‌ಆನಿನ ಮತ್ತು ಪವಿತ್ರ ಪೈಗಂಬರರ[ಸ] ಭವಿಷ್ಯವಾಣಿಗಳು ಸ್ಪಷ್ಟವಾಗಿ ಈಡೇರಿದುದನ್ನು ಕಂಡು ಅಹ್ಮದೀ ಮುಸ್ಲಿಮರಾದ ನಾವು ನಮ್ಮ ಜಮಾಅತಿನ ಸ್ಥಾಪಕರಾದ ಖಾದಿಯಾನಿನ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅವರನ್ನು ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದೀ ಎಂದು ನಂಬುತ್ತೇವೆ. ಸತ್ಯವಾದ ಮತ್ತು ತೇಜೋಮಯವಾದ ಇಸ್ಲಾಮ್ ಧರ್ಮ ತತ್ವಗಳನ್ನು ಲೋಕಕ್ಕೆ ತಲಪಿಸುವ ಸತ್ಯದ ಸಂಜ್ಞಾ ಜ್ಯೋತಿಯೋಪಾದಿಯಾಗಿ ಅವರು ಆಗಮಿಸಿದರೆಂದು ನಾವು ನಂಬುತ್ತೇವೆ. ಶಾಂತಿಯುತವಾಗಿ ಜೀವಿಸಬೇಕೆಂದು ಅವರು ಲೋಕದ ಜನರೊಂದಿಗೆ ವಿನಂತಿಸಿಕೊಂಡರು ಮತ್ತು ಅವರು ತನ್ನ ಅನುಯಾಯಿಗಳಲ್ಲಿ ಮಾನವರ ಬಗ್ಗೆ ಸಹಾನುಭೂತಿ ಮತ್ತು ಕಾರುಣ್ಯವನ್ನು ಉಂಟುಮಾಡಿದರು.

ವಾಗ್ದತ್ತ ಮಸೀಹ್[ಅ] ಒಮ್ಮೆ ಹೀಗೆ ಹೇಳಿದರು: "ಮಾನವರನ್ನು ಪ್ರೀತಿಸುವುದು ಮತ್ತು ಅನ್ಯರಿಗೆ ಕಾರುಣ್ಯದೋರುವುದು ದೇವಾರಾಧನೆಯ ಒಂದು ಮಹತ್ವಪೂರ್ಣ ವಿಧಾನವಾಗಿದೆ ಮತ್ತು ಅದು ಸರ್ವಶಕ್ತನ ಸಂಪ್ರೀತಿಯನ್ನೂ ಪಾರಿತೋಷಿಕವನ್ನೂ ಗಳಿಸುವ ಮಾರ್ಗವಾಗಿದೆ."

ನಮ್ಮ ನಂಬಿಕೆ ಏನೆಂದರೆ ಇಸ್ಲಾಮ್ ಹೀಗೆ ಕಲಿಸುತ್ತದೆ: ಒಬ್ಬ ಮುಸ್ಲಿಮನು ಮಾನವರ ಹಕ್ಕುಗಳನ್ನು ಈಡೇರಿಸುವ ತನಕ ಅವನು ಅಥವಾ ಆಕೆ ಸರ್ವಶಕ್ತನಾದ ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸಲಾರ. ನಿಶ್ಚಯವಾಗಿಯೂ ಕೆಲವು ಸಂದರ್ಭಗಳಲ್ಲಿ ಸಹಜೀವಿಗಳಿಗೆ ಸಲ್ಲಿಸಬೇಕಾದ ಹಕ್ಕುಗಳು ಸರ್ವಶಕ್ತನಾದ ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳ ಮೇಲೆ ಆದ್ಯತೆ ಪಡೆಯುತ್ತವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಇಸ್ಲಾಮ್ ಪ್ರತಿಪಾದಿಸುವುದೇನೆಂದರೆ ಒಬ್ಬನು ಅನ್ಯರ ಹಕ್ಕುಗಳನ್ನು ಅವರು ಯಾರೆಂದು ಗಣಿಸದೆ ಮತ್ತು ಯಾವ ಧರ್ಮದವರೆಂದು ಗಣಿಸದೆ ಈಡೇರಿಸುತ್ತಾ ಇದ್ದರೆ ಆತ ಅಥವಾ ಆಕೆ ನೈಜ ಮುಸ್ಲಿಮ್ ಎಂದು ಗುರುತಿಸಲ್ಪಡುವನು. ವಾಗ್ದತ್ತ ಮಸೀಹರು 1908ರಲ್ಲಿ ನಿಧನ ಹೊಂದಿದಾಗ ಖಿಲಾಫತ್ ವ್ಯವಸ್ಥೆ ಅವರ ಉತ್ತರಾಧಿಕಾರಿಯಾಗಿ ಸ್ಥಾಪಿಸಲ್ಪಟ್ಟಿತು. ಅದರ ಉದ್ದೇಶಲಕ್ಷ್ಯ, ಹಿಂದೆ ಮತ್ತು ಇಂದು ವಾಗ್ದತ್ತ ಮಸೀಹರ ಆಗಮನದ ಉದ್ದೇಶವಾದ ಇಸ್ಲಾಮಿನ ನೈಜ ತತ್ವಗಳನ್ನು ಲೋಕದ ಎಲ್ಲ ಕಡೆಗಳಲ್ಲಿ ಪ್ರಚಾರ ಮಾಡುವುದಾಗಿದೆ. ನಾನು ಇಸ್ಲಾಮಿನ ನೈಜ ತತ್ವಗಳಲ್ಲಿ ಕೆಲವನ್ನು ವಿವರಿಸುವೆನು ಮತ್ತು ಇಸ್ಲಾಮ್ ಧರ್ಮದ ಬಗ್ಗೆ ಇರುವ ಸಾಮಾನ್ಯ ತಪ್ಪು ಗ್ರಹಿಕೆಗಳನ್ನು ನೀಗಿಸಲು ಪ್ರಯತ್ನಿಸುವೆನು.

ಇಸ್ಲಾಮ್ ಧರ್ಮ ಎಲ್ಲ ವಿಧಗಳ ದ್ವೇಷ, ಹಗೆತನ ಮತ್ತು ಅಸೂಯೆಯನ್ನು ತ್ಯಜಿಸಲು ಮಾನವರಿಗೆ ಉಪದೇಶ ನೀಡುತ್ತದೆ ಹಾಗೂ ಪ್ರೀತಿ ಮತ್ತು ಪರಸ್ಪರ ಗೌರವಿಸುವ ಪತಾಕೆಯಡಿಯಲ್ಲಿ ಒಗ್ಗೂಡಲು ಹೇಳುತ್ತದೆ. ಸಮಾಜದ ಎಲ್ಲ ಹಂತಗಳಲ್ಲಿ ಶಾಂತಿ ಮತ್ತು ನ್ಯಾಯವನ್ನು ಎಲ್ಲ ಜನಸಮೂಹಗಳಲ್ಲಿಯೂ ಸ್ಥಾಪಿಸಲು ಹೇಳುತ್ತದೆ. ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 9ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ: "ಎಲೈ ಸತ್ಯ ವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ."

ಮುಸ್ಲಿಮರು ಎಲ್ಲರೊಂದಿಗೆ, ಅವರ ವಿರೋಧಿಗಳೊಂದಿಗೆ ಕೂಡ ಉತ್ತಮವಾಗಿಯೂ ನ್ಯಾಯಯುತವಾಗಿಯೂ ವರ್ತಿಸಬೇಕೆಂದು ಪವಿತ್ರ ಖುರ್‌ಆನಿನ ಈ ವಚನದಲ್ಲಿ ಅಲ್ಲಾಹನು ಮುಸ್ಲಿಮರಿಗೆ ಆಜ್ಞಾಪಿಸಿದ್ದಾನೆ. ಆದುದರಿಂದ ಇಸ್ಲಾಮ್ ಯಾವುದೇ ಸಂದರ್ಭದಲ್ಲಿಯೂ ಕ್ರೌರ್ಯವನ್ನೂ ಅನ್ಯಾಯ ವರ್ತನೆಯನ್ನೂ ಅನುಮತಿಸುವುದಿಲ್ಲ. ಇಸ್ಲಾಮಿನ ಪವಿತ್ರ ಪೈಗಂಬರರು[ಸ] ಲೋಕದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಹಿಷ್ಣುತೆಯ ಅತ್ಯಂತ ಉನ್ನತವಾದ ಮಟ್ಟವನ್ನು ಸ್ಥಾಪಿಸಿದರೆಂಬುದು ನಿಸ್ಸಂಶಯವಾಗಿದೆ.

ಒಂದು ಮುಖ್ಯ ಉದಾಹರಣೆ, ಪವಿತ್ರ ಪೈಗಂಬರರು[ಸ] ವರ್ಷಗಟ್ಟಲೆ ಹಿಂಸಾಚಾರವನ್ನು ತನ್ನ ಸ್ವಂತ ಪಟ್ಟಣವಾದ ಮಕ್ಕದಲ್ಲಿ ಅನುಭವಿಸಿದ ನಂತರ ಮದೀನಕ್ಕೆ ವಲಸೆ ಹೋಗಿ ಅಲ್ಲಿದ್ದ ಯಹೂದಿ ಮತ್ತು ಅನ್ಯ ಜನಾಂಗದವರೊಂದಿಗೆ ಗೌರವಪೂರ್ಣವಾಗಿ ವರ್ತಿಸಿದ ರೀತಿಯಾಗಿದೆ. ಮದೀನದ ಬಹುಸಂಖ್ಯಾತರಾದ ನಿವಾಸಿಗಳು ಇಸ್ಲಾಮ್ ಧರ್ಮವಲಂಬಿಗಳಾದುದರಿಂದ ಅವರು ಪವಿತ್ರ ಪೈಗಂಬರರನ್ನು[ಸ] ಸ್ವಾಗತಿಸಿ, ಅವರನ್ನು ತಮ್ಮ ಆಧ್ಯಾತ್ಮಿಕ ನಾಯಕರನ್ನಾಗಿ ಅಂಗೀಕರಿಸಿದರಲ್ಲದೆ ತಮ್ಮ ರಾಜ್ಯದ ಸರಕಾರದ ನೇತಾರನನ್ನಾಗಿಯೂ ಆಯ್ಕೆ ಮಾಡಿದರು.

ಮದೀನದಲ್ಲಿ ಗಣನೀಯ ಸಂಖ್ಯೆಯಲ್ಲಿ ಯಹೂದಿಯರೂ ಮುಸ್ಲಿಮೇತರರೂ ಇದ್ದರು. ರಾಜ್ಯದ ನೇತಾರನಾಗಿ ಆಯ್ಕೆಗೊಂಡ ನಂತರ ಪವಿತ್ರ ಪೈಗಂಬರರು[ಸ] ಯಹೂದಿಯರೊಂದಿಗೆ ಮತ್ತು ಇತರ ಗುಂಪುಗಳೊಂದಿಗೆ ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಹಿಷ್ಣುತೆಯ ತತ್ವಗಳ ಮೇಲೆ ಆಧಾರಿತವಾದ ಒಂದು ಒಪ್ಪಂದ ಮಾಡಿಕೊಂಡರು. ಈ ಒಪ್ಪಂದ ಪ್ರಕಾರ ಯಹೂದಿಯರ ಮತ್ತು ಇತರ ಮುಸ್ಲಿಮೇತರರ

ಧಾರ್ಮಿಕ ಸ್ವಾತಂತ್ರ್ಯವನ್ನು ರಕ್ಷಿಸುವುದಾಗಿ ಇಸ್ಲಾಮಿನ ಪವಿತ್ರ ಪೈಗಂಬರರು(ಸ) ಖಾತರಿ ನೀಡಿದ್ದರು.

ಪವಿತ್ರ ಪೈಗಂಬರರು(ಸ) ಈ ಒಪ್ಪಂದದ ಶರತ್ತುಗಳನ್ನು ಎಂದೂ ಉಲ್ಲಂಘಿಸಲಿಲ್ಲ ಎಂದು ಚರಿತ್ರೆ ಸಾಬೀತುಗೊಳಿಸುತ್ತದೆ. ಅವರ ಆಡಳಿತೆಯಲ್ಲಿ ಮುಸ್ಲಿಮೇತರರ ಧಾರ್ಮಿಕ ಹಕ್ಕುಗಳು ಮತ್ತು ಸ್ವಾತಂತ್ರ್ಯ ಯಾವಾಗಲೂ ಸಮರ್ಥಿಸಲ್ಪಟ್ಟಿತು. ಇಸ್ಲಾಮ್ ಸೆಮಿಟಿಕ್ ವಿರೋಧಿಯಾಗಿದೆ ಮತ್ತು ಧಾರ್ಮಿಕ ತಾರತಮ್ಯತೆ ಪ್ರತಿಪಾದಿಸುತ್ತದೆ ಎಂಬ ಆಕ್ಷೇಪವನ್ನು ಇದು ಅಲ್ಲಗಳೆಯುತ್ತದೆ. ಪವಿತ್ರ ಪೈಗಂಬರರು(ಸ) ಪ್ರಕಟಿಸಿದ ಉದಾತ್ತ ಸ್ವಭಾವಗುಣದ ಇನ್ನೊಂದು ಉದಾಹರಣೆ, ನಜ್‌ರಾನಿನ ಕ್ರೈಸ್ತರ ಒಂದು ಪ್ರತಿನಿಧಿ ಸಂಘ ಅವರನ್ನು ಸಂದರ್ಶಿಸಲು ಬಂದಾಗ ಅವರು ಪ್ರಾರ್ಥಿಸಲು ಬಯಸುತ್ತಾರೆ ಎಂದು ತಿಳಿದಾಗ ಅವರು ತನ್ನ ಮಸ್‌ಜಿದ್‌ನಲ್ಲಿ ತಮ್ಮ ಕ್ರೈಸ್ತ ನಂಬಿಕೆ ಮತ್ತು ಆಚಾರ ಪ್ರಕಾರ ಪ್ರಾರ್ಥಿಸಲು ಅನುಮತಿಸಿದರು.

ಇಸ್ಲಾಮಿನ ವಿರುದ್ಧ ಮಾಡಲಾಗುವ ಇನ್ನೊಂದು ದೋಷಾರೋಪ ಅದು ಖಡ್ಗದ ಮೂಲಕ ಬಲಾತ್ಕಾರದಿಂದ ಪ್ರಚರಿಸಲ್ಪಟ್ಟಿತು ಎಂದಾಗಿದೆ. ಈ ಆಕ್ಷೇಪ ಸಂಪೂರ್ಣವಾಗಿ ಆಧಾರ ರಹಿತವಾಗಿದೆ ಮತ್ತು ಇದು ಸತ್ಯದಿಂದ ದೂರವಿರುವುದಾಗಿದೆ. ಪವಿತ್ರ ಪೈಗಂಬರರ(ಸ) ಕಾಲದಲ್ಲಿ ನಡೆದ ಯುದ್ಧಗಳು ಮತ್ತು ಅನಂತರ ನೇರಮಾರ್ಗವಲಂಬಿಗಳಾದ ಅವರ ಖಲೀಫರ ಕಾಲದಲ್ಲಿ ನಡೆದ ಯುದ್ಧಗಳು ಅವರ ಮೇಲೆ ಶತ್ರುಗಳಿಂದ ಹೇರಲ್ಪಟ್ಟವುಗಳಾಗಿದ್ದುವು. ಮುಸ್ಲಿಮರ ಮೇಲೆ ಯುದ್ಧಗಳು ಹೇರಲ್ಪಟ್ಟ ಸಂದರ್ಭಗಳಲ್ಲಿಯೂ ಮುಸ್ಲಿಮರು ಅನ್ಯಧರ್ಮೀಯರ ಆರಾಧನಾಲಯಗಳನ್ನು ಮತ್ತು ಅವರ ಆದರಣೀಯರನ್ನು ಸಂರಕ್ಷಿಸಲು ಮತ್ತು ಗೌರವಿಸಲು ಪ್ರಯತ್ನಿಸುತ್ತಿದ್ದರು.

ಹೀಗಿದ್ದರೂ ಇಂದಿನ ಲೋಕದಲ್ಲಿ ಪವಿತ್ರ ಪೈಗಂಬರರ(ಸ) ಅನುಗ್ರಹೀತ ಗುಣಸ್ವಭಾವಗಳನ್ನು ಹತ್ಯೆ ಮಾಡಲಾಗುತ್ತಿದೆ. ಡೆನ್‌ಮಾರ್ಕ್‌ನಲ್ಲಿ ಸಹ ಕೆಲವು ವರ್ಷಗಳ ಹಿಂದೆ ಇಸ್ಲಾಮಿನ ಪೈಗಂಬರರನ್ನು(ಸ) ಅಪಹಾಸ್ಯ ಮಾಡುವ ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಿ ಅವರನ್ನೊಬ್ಬ ಸಾಮ್ರಾಜ್ಯಶಾಹಿ ನಾಯಕನೆಂದೂ ಯುದ್ಧಮಗ್ನನಾದ ಯುದ್ಧ ಪ್ರಿಯನೆಂದೂ ಚಿತ್ರಿಸಲಾಗಿತ್ತು.

ಪವಿತ್ರ ಪೈಗಂಬರ್(ಸ) ಬಗ್ಗೆ ಈ ಅನ್ಯಾಯ ಭರಿತ ಚಿತ್ರಣ ಚರಿತ್ರೆಗೂ ಸತ್ಯಕ್ಕೂ ವಿರುದ್ಧವಾಗಿದೆ. ವಾಸ್ತವಿಕವಾದುದೇನೆಂದರೆ, ಶಾಂತಿಯನ್ನು ಮತ್ತು ಮಾನವರ ಹಕ್ಕುಗಳನ್ನು ಸ್ಥಾಪಿಸುವ ದೃಢ ನಿರ್ಧಾರಕ್ಕೆ ಅವರು ಅಡಿಯಾಳಾಗಿದ್ದರು.

ಸರ್ವಶಕ್ತನಾದ ಅಲ್ಲಾಹನು ಪವಿತ್ರ ಪೈಗಂಬರರಿಗೆ(ಸ) ಮಕ್ಕದವರ ವಿರುದ್ಧ ಪ್ರತಿರೋಧಾತ್ಮಕ ಯುದ್ಧ ಮಾಡಲು ಅನುಮತಿ ನೀಡಿದಾಗ ಅದರ ಉದ್ದೇಶ ಕೇವಲ ಇಸ್ಲಾಮ್ ಧರ್ಮವನ್ನು ಮಾತ್ರ ಸಂರಕ್ಷಿಸುವುದಾಗಿರಲಿಲ್ಲ. ಅದರ ಉದ್ದೇಶ ಎಲ್ಲ ಧರ್ಮಗಳನ್ನು ಸಂರಕ್ಷಿಸುವುದಾಗಿತ್ತು. ಇದೇ ವಿಷಯವನ್ನು ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 40–41ರಲ್ಲಿ ಅಲ್ಲಾಹನು ಪ್ರಸ್ತಾಪಿಸಿ ಹೀಗೆ ಘೋಷಿಸಿದ್ದಾನೆ: ಆಕ್ರಮಣಗಾರರನ್ನು ತಡೆಯದಿದ್ದರೆ ಅವರು ನಿಷ್ಕಳಂಕ ಮುಸ್ಲಿಮರನ್ನು ಆಕ್ರಮಿಸುವುದಕ್ಕೆ ತಮ್ಮನ್ನು ಸೀಮಿತಗೊಳಿಸಲಾರರು. ಅವರು ಎಲ್ಲ ವಿಧಗಳ ಧರ್ಮವನ್ನು ನಾಶಮಾಡಲು ಉದ್ಯುಕ್ತರಾಗುವರು. ಅಲ್ಲಾಹನು ಸ್ಪಷ್ಟವಾಗಿ ಹೀಗೆ ಹೇಳಿದ್ದಾನೆ: ಮಕ್ಕದವರು ಎಸಗುವ ದೌರ್ಜನ್ಯಗಳನ್ನು ತಡೆಯದಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ದೇವಾಲಯಗಳೂ ಮಸ್‌ಜಿದ್‌ಗಳೂ ಇತರ ಆರಾಧನಾಲಯಗಳೂ ಸುರಕ್ಷಿತವಾಗಲಾರವು.

ಪವಿತ್ರ ಖುರ್‌ಆನಿನ ಈ ವಚನಗಳು ಸ್ಪಷ್ಟವಾಗಿ ಹೇಳುವುದೇನೆಂದರೆ, ಮುಸ್ಲಿಮರಿಗೆ ಪ್ರತಿರೋಧಾತ್ಮಕ ಯುದ್ಧ ಮಾಡಲು ಅಲ್ಲಾಹನು ಅನುಮತಿ ನೀಡಿದುದರ ಉದ್ದೇಶ ಎಲ್ಲ ಧರ್ಮಗಳನ್ನೂ ಎಲ್ಲ ನಂಬಿಕೆಗಳನ್ನೂ ಸಂರಕ್ಷಿಸುವುದಾಗಿತ್ತು. ಅದರ ಉದ್ದೇಶ ನೆಲವನ್ನು ಸ್ವಾಧೀನ ಪಡಿಸುವುದಾಗಲಿ, ದೌರ್ಜನ್ಯವನ್ನು ವ್ಯಾಪಿಸುವುದಾಗಲಿ ಆಗಿರಲಿಲ್ಲ. ಈ ವಾಸ್ತವಿಕ ಕಾರಣದಿಂದ, ಇಸ್ಲಾಮಿನ ಶತ್ರುಗಳು ಪವಿತ್ರ ಪ್ರವಾದಿಯ ವಿರುದ್ಧ, ಅವರು ಅಧಿಕಾರ ದಾಹಿಯಾಗಿದ್ದರೆಂದೂ ಸಾಮ್ರಾಜ್ಯ ಸ್ಥಾಪನೆಯ ಹಂಬಲ ಹೊಂದಿದ್ದರೆಂದೂ ಆಕ್ಷೇಪಿಸುವಾಗ ನೈಜ ಮುಸ್ಲಿಮರಿಗೆ ಅತ್ಯಂತ ದುಃಖವಾಗುತ್ತದೆ.

ಪವಿತ್ರ ಪೈಗಂಬರರು(ಸ) ಅಧಿಕಾರ ಮೋಹಿಯಾಗಿರಲಿಲ್ಲ. ಅವರು ಇಸ್ಲಾಮ್ ಧರ್ಮವನ್ನು ಬಲಾತ್ಕಾರದಿಂದ ಹಬ್ಬಿಸಲು ಮತ್ತು ಯಾರನ್ನಾದರೂ ಬಲಾತ್ಕಾರದಿಂದ ಮುಸ್ಲಿಮನನ್ನಾಗಿ ಮಾಡಲು ಯಾವುದೇ ಯುದ್ಧವನ್ನು ಮಾಡಿರಲಿಲ್ಲ. ಅವರ ಏಕಮಾತ್ರ ಉದ್ದೇಶಲಕ್ಷ್ಯ ಶಾಂತಿ ಸ್ಥಾಪನೆ ಮತ್ತು ಸಾರ್ವತ್ರಿಕ ಧಾರ್ಮಿಕ ಸ್ವಾತಂತ್ರ್ಯದ ಸ್ಥಾಪನೆಯಾಗಿತ್ತು. ಆದುದರಿಂದ ನೈಜ ಮುಸ್ಲಿಮನ ಹೊಣೆಗಾರಿಕೆ ಎಲ್ಲ ಧರ್ಮಗಳ ಮೌಲ್ಯಗಳನ್ನು ಸಂರಕ್ಷಿಸುವುದಾಗಿದೆ – ಕ್ರೈಸ್ತ ಧರ್ಮವಾಗಲಿ, ಯಹೂದಿ ಧರ್ಮವಾಗಲಿ ಅಥವಾ ಬೇರೆ ಯಾವುದೇ ಧರ್ಮವಾಗಿರಲಿ.

ಪವಿತ್ರ ಪೈಗಂಬರರು(ಸ) ಉಪದೇಶಿಸಿದುದೇನೆಂದರೆ, ಯುದ್ಧದಲ್ಲಿ ನೇರವಾಗಿ ಭಾಗವಹಿಸುವವರೊಂದಿಗೆ ಮಾತ್ರ ಹೋರಾಡಬೇಕು. ನಿರಪರಾಧಿಯಾದ ಯಾರನ್ನೂ ಆಕ್ರಮಿಸಬಾರದು ಎಂದು ಅವರು ಬಲವತ್ತಾದ ಆಜ್ಞೆ ನೀಡಿದ್ದರು. ಮಹಿಳೆಯರನ್ನು, ಮಕ್ಕಳನ್ನು ಮತ್ತು ವೃದ್ಧರನ್ನು ಎಂದೂ ಆಕ್ರಮಿಸಬಾರದೆಂದು ಆಜ್ಞಾಪಿಸಿದ್ದರು. ಧಾರ್ಮಿಕ ನಾಯಕರನ್ನೂ ಪುರೋಹಿತರನ್ನೂ ಆರಾಧನಾಲಯಗಳನ್ನೂ ಆಕ್ರಮಿಸಬಾರದೆಂದು ಅವರು ಉಪದೇಶಿಸಿದ್ದರು. ಇಸ್ಲಾಮಿಗೆ ಧರ್ಮ ಪರಿವರ್ತನೆ ಮಾಡಲು ಯಾರನ್ನೂ ಬಲಾತ್ಕಾರ ಮಾಡಬಾರದೆಂದು ಸಹ ಪವಿತ್ರ ಪೈಗಂಬರರು(ಸ) ಕಲಿಸಿದ್ದರು.

ಇಂತಹ ಉದಾತ್ತ ಉಪದೇಶಗಳಿರುವಾಗ ನಾವು ದುಃಖಕರವಾಗಿ ವೀಕ್ಷಿಸುವುದೇನೆಂದರೆ, ಇಂದಿನ ಕಾಲದಲ್ಲಿ ನಡೆಯುವ ಯುದ್ಧಗಳಲ್ಲಿ ಅವ್ಯವಸ್ಥಿತ ಗುಂಡು ಹಾರಿಸುವಿಕೆ ಮತ್ತು ಬಾಂಬು ದಾಳಿ ನಡೆಯುತ್ತದೆ. ಸುರಕ್ಷಿತರಲ್ಲದ ನಾಗರಿಕರಾದ ಮಹಿಳೆಯರು, ಮಕ್ಕಳು ಮತ್ತು ವೃದ್ಧರು ನಿರ್ದಯವಾಗಿ ಕೊಲ್ಲಲ್ಪಡುತ್ತಿದ್ದಾರೆ. ಇಂತಹ ಬರ್ಬರ

ಯುದ್ಧ ಮಾಡುವ ಮುಸ್ಲಿಮರು ತಮ್ಮ ಧರ್ಮವನ್ನು ಅಪಕೀರ್ತಿಗೆ ಗುರಿಪಡಿಸುತ್ತಿದ್ದಾರೆ. ಅವರನ್ನು ತೀವ್ರವಾಗಿ ಖಂಡಿಸಬೇಕಾಗಿದೆ.

ಮುಸ್ಲಿಮರಲ್ಲಿ ಇಂತಹ ಅಜ್ಞಾನ ಸ್ಥಿತಿ ಮತ್ತು ಕೆಡುಕು ಸಂಭವಿಸುವಂತಹದೇ ಆಗಿತ್ತು. ಏಕೆಂದರೆ ಮುಸ್ಲಿಮರ ಈ ಸ್ಥಿತಿಯ ಬಗ್ಗೆ ಪವಿತ್ರ ಪೈಗಂಬರರು(ಸ) ಭವಿಷ್ಯ ನುಡಿದಿದ್ದರು. ಮುಸ್ಲಿಮರು ತಮ್ಮ ಧರ್ಮ ತತ್ವಗಳನ್ನು ಸಂಪೂರ್ಣವಾಗಿ ಮರೆತು ಬಿಡುವರೆಂದು ಅವರು ಹೇಳಿದ್ದರು. ಇಂತಹ ಕಾಲಘಟ್ಟದಲ್ಲಿ ವಾಗ್ದತ್ತ ಮಸೀಹರನ್ನು(ಅ) ಅಲ್ಲಾಹನು ಇಸ್ಲಾಮನ್ನು ಪುನಶ್ಚೇತನಗೊಳಿಸಲು ಮತ್ತು ಇಸ್ಲಾಮಿನ ನೈಜ ತತ್ವಗಳನ್ನು ಅನುಸರಿಸುವ ಸಾತ್ವಿಕರ ಜಮಾಅತನ್ನು ಸ್ಥಾಪಿಸಲು ಕಳುಹಿಸುವನೆಂದೂ ಪವಿತ್ರ ಪೈಗಂಬರರು(ಸ) ಭವಿಷ್ಯ ನುಡಿದಿದ್ದರು.

ಆದರೆ ಮುಸ್ಲಿಮೇತರ ಲೋಕ ಸಂಪೂರ್ಣವಾಗಿ ನಿಷ್ಕಳಂಕ ಅಥವಾ ನಿರ್ದೋಷಿ ಎಂದು ಹೇಳಲಾಗದು. ಕೆಲವು ಮುಸ್ಲಿಮೇತರ ಶಕ್ತಿಶಾಲಿ ದೇಶಗಳು ತಾವು ಶಾಂತಿ ಸ್ಥಾಪನೆಗೋಸ್ಕರ ಹೋರಾಡುತ್ತಿದ್ದೇವೆ ಎಂದು ಹೇಳುತ್ತಿದ್ದರೂ ಅವರು ಸಹ ನಿರಪರಾಧಿ ನಾಗರಿಕರನ್ನು ಲೋಕದ ವಿವಿಧ ಭಾಗಗಳಲ್ಲಿ ಅವ್ಯವಸ್ಥಿತ ಯುದ್ಧಗಳ ಮೂಲಕ ಕೊಲ್ಲುವ ಅಪರಾಧಿಗಳಾಗಿದ್ದಾರೆ.

ಸತ್ಯವೇನೆಂದರೆ, ಇಂದಿನ ಕಾಲದ ಮುಸ್ಲಿಮ್ ಸರಕಾರಗಳು ಇಸ್ಲಾಮಿನ ನೈಜ ತತ್ವಗಳಾದ ಪ್ರಾಮಾಣಿಕತೆ, ಸತ್ಯಸಂಧತೆ ಮತ್ತು ಸರ್ವರಿಗೂ ನ್ಯಾಯ ನೀಡುವಿಕೆ ಪ್ರಕಾರ ಅಧಿಕಾರ ಚಲಾಯಿಸುತ್ತಾ ಇಲ್ಲ.

ಇಸ್ಲಾಮಿನ ನೈಜ ತತ್ವಗಳನ್ನು ಎಲ್ಲೆಲ್ಲಿ ಮತ್ತು ಯಾವಾಗವೆಲ್ಲ ಅನುಷ್ಠಿಸಲಾಯಿತೋ ಅವುಗಳ ಸೌಂದರ್ಯ ಮತ್ತು ಔದಾರ್ಯವನ್ನು ಎಲ್ಲರೂ ಮೆಚ್ಚಿದ್ದರು. ಉದಾಹರಣೆಗೆ, ಪವಿತ್ರ ಪೈಗಂಬರರ ದ್ವಿತೀಯ ಖಲೀಫರಾದ ಹಝ್ರತ್ ಉಮರ್‌ರವರ(ರ) ಆಡಳಿತ ಕಾಲದಲ್ಲಿ ಇಸ್ಲಾಮ್ ಸಿರಿಯಾ ದೇಶದಲ್ಲಿ ಹರಡಿತು ಮತ್ತು ಅಲ್ಲಿ ಮುಸ್ಲಿಮ್ ಸರಕಾರ ಸ್ಥಾಪಿಸಲ್ಪಟ್ಟಿತು. ಆಡಳಿತ ರೀತಿಯ ಭಾಗವಾಗಿ ಕ್ರೈಸ್ತ ನಾಗರಿಕರಿಂದ ಒಂದು ತೆರಿಗೆಯನ್ನು ವಸೂಲು ಮಾಡಲಾಯಿತು. ಆದರೆ, ನಂತರ ಈ ವಸೂಲಾದ ಹಣವನ್ನು ಅವರಿಗೆ ಮರಳಿ ನೀಡಲಾಯಿತು. ಏಕೆಂದರೆ ರೋಮನ್ ಸರಕಾರ ಆ ದೇಶವನ್ನು ಸ್ವಾಧೀನಪಡಿಸಿತ್ತು ಮತ್ತು ಮುಸ್ಲಿಮ್ ಅಧಿಕಾರಿಗಳಿಗೆ ನಾಗರಿಕರನ್ನು ರಕ್ಷಿಸಲು ಮತ್ತು ಅವರಿಗೆ ಅವರ ಹಕ್ಕುಗಳನ್ನು ಕೊಡಲು ಸಾಧ್ಯವಾಗಿರಲಿಲ್ಲ.

ಮುಸ್ಲಿಮರಿಗೆ ಆ ದೇಶವನ್ನು ಬಿಟ್ಟು ಹೋಗದಿರಲು ಸಾಧ್ಯವಿರಲಿಲ್ಲ. ಈ ಕಾರಣದಿಂದ ಅವರ ಆಡಳಿತೆಯಲ್ಲಿ ಜೀವಿಸಿದ್ದ ಮುಸ್ಲಿಮೇತರರಿಗೆ ಬಹಳ ದುಃಖವಾಯಿತು. ಅವರು ಭಾವೋದ್ವೇಗಭರಿತರಾಗಿ ಮುಸ್ಲಿಮರೊಂದಿಗೆ, ಮರಳಿ ಬರಲು ಅಪೇಕ್ಷಿಸಿದರು ಮತ್ತು ಅದಕ್ಕೋಸ್ಕರ ಹೃತ್ಪೂರ್ವಕವಾಗಿ ಪ್ರಾರ್ಥಿಸಿದರು. ಅವರು ಮುಸ್ಲಿಮ್ ಆಡಳಿತೆಗೋಸ್ಕರ ತಮ್ಮ ಅಭಿಲಾಷೆಯನ್ನು ಹಿಂಜರಿಯದೆ ಘೋಷಿಸಿದರು ಮತ್ತು ರೋಮನ್ ಸಾಮ್ರಾಜ್ಯದ ಅನ್ಯಾಯಗಳಿಂದ ರಕ್ಷಿಸಲು ಕೋರಿದರು.

ಅನಂತರ ಮುಸ್ಲಿಮರಿಗೆ ಆ ದೇಶಕ್ಕೆ ಮರಳಿ ಬರಲು ಸಾಧ್ಯವಾದಾಗ ಅವರ ಆಗಮನವನ್ನು ಸ್ವಾಗತಿಸಿದವರಲ್ಲಿ ಮೊದಲಿಗರು ಮುಸ್ಲಿಮೇತರರಾಗಿದ್ದರು. ಏಕೆಂದರೆ ತಮ್ಮ ಹಕ್ಕುಗಳು ಪುನಃ ಸಂರಕ್ಷಿಸಲ್ಪಡುವುವು ಎಂದು ಅವರು ನಂಬಿದ್ದರು. ಆದ್ಯಕಾಲೀನ ಮುಸ್ಲಿಮರು ನಿಶ್ಚಯವಾಗಿಯೂ ಪೂರ್ಣವಾಗಿ ಎಲ್ಲ ವಿಷಯಗಳಿಗೆ ಸಂಬಂಧಿಸಿ ನ್ಯಾಯಪಾಲನೆ ಮಾಡುವವರಾಗಿದ್ದರು. ಉದಾಹರಣೆಗೆ, ಇಸ್ಲಾಮಿನ ದ್ವಿತೀಯ ಖಲೀಫರಾಗಿದ್ದ ಹಝ್ರತ್ ಉಮರ್‌ರ(ರ) ಕಾಲದಲ್ಲಿ ಒಬ್ಬ ಮುಸ್ಲಿಮ್ ಮತ್ತು ಒಬ್ಬ ಯಹೂದಿ ಕಕ್ಷಿಗಳಾಗಿದ್ದ ಒಂದು ವ್ಯಾಜ್ಯವು ದಾಖಲಿಸಲ್ಪಟ್ಟಿತ್ತು. ಹಝ್ರತ್ ಉಮರ್(ರ) ಅವರಿಬ್ಬರ ವಾದಗಳನ್ನು ಆಲಿಸಿದ ನಂತರ ಯಹೂದಿಯ ಪರವಾಗಿ ತೀರ್ಪು ನೀಡಿದರು.

ಅನ್ಯರ ಭಾವನೆಗಳನ್ನು ಗೌರವಿಸುವುದು ಅತ್ಯಂತ ಆವಶ್ಯಕವಾಗಿದೆ ಎಂದು ಸಹ ಇಸ್ಲಾಮ್ ಉಪದೇಶಿಸುತ್ತದೆ. ಒಮ್ಮೆ ಪವಿತ್ರ ಪೈಗಂಬರರ(ಸ) ನಿಕಟ ಅನುಯಾಯಿ ಹಝ್ರತ್ ಅಬೂಬಕರ್(ರ) ಒಬ್ಬ ಯಹೂದಿಯೊಂದಿಗೆ ಇಸ್ಲಾಮಿನ ಪೈಗಂಬರರ ಸ್ಥಾನ ಹಝ್ರತ್ ಮೂಸಾ ಪ್ರವಾದಿಯ ಸ್ಥಾನಕ್ಕಿಂತ ಉನ್ನತವಾಗಿದೆ ಎಂದು ಹೇಳಿದ್ದರು. ಇದನ್ನು ಆಲಿಸಿದ ಯಹೂದಿ ಪವಿತ್ರ ಪೈಗಂಬರರಿಗೆ ದೂರು ನೀಡಿದರು. ಆಗ ಪವಿತ್ರ ಪೈಗಂಬರರು ಹಝ್ರತ್ ಅಬೂಬಕರರ ಹೇಳಿಕೆ ಬಗ್ಗೆ ಅತೃಪ್ತಿ ಸೂಚಿಸಿ ಅವರು ಯಹೂದಿಯ ಭಾವನೆಗಳನ್ನು ಗೌರವಿಸಬೇಕಾಗಿತ್ತೆಂದು ಹೇಳಿದರು.

ಹಝ್ರತ್ ಅಬೂಬಕರ್(ರ) ಹೇಳಿದುದು ಇಸ್ಲಾಮ್ ಧರ್ಮದ ನಂಬಿಕೆಗಳಿಗೆ ಅನುಸಾರವಾಗಿದ್ದರೂ ಪವಿತ್ರ ಪೈಗಂಬರರು(ಸ) ಹೀಗೆ ಹೇಳಿದರು: ಒಬ್ಬ ಯಹೂದಿಯ ಮುಂದೆ, ಅವನಿಗೆ ನೋವಾಗುವ ಕಾರಣ ಹಾಗೆ ಹೇಳಬಾರದು. ಪವಿತ್ರ ಪೈಗಂಬರರ ಈ ಉಪದೇಶ ಅತ್ಯಂತ ಗಾಢ ಪರಿಣಾಮ ಬೀರುವುದಾಗಿದೆ. ವಿವಿಧ ಧರ್ಮಗಳ ಮತ್ತು ನಂಬಿಕೆಗಳ ಜನರ ಮಧ್ಯೆ ಪರಸ್ಪರ ಶಾಂತಿ ಸ್ಥಾಪಿಸುವಂತಹದ್ದಾಗಿದೆ.

ಆದರೆ ಇಂದು ನಾವು ಕಾಣುವುದೇನೆಂದರೆ, ಅಭಿಪ್ರಾಯ ಸ್ವಾತಂತ್ರ್ಯದ ಹೆಸರಿನಲ್ಲಿ ಪ್ರವಾದಿಗಳನ್ನು ಮತ್ತು ಸಂತರನ್ನು ರೂಢಿಯಾಗಿ ಲೇವಡಿ ಮಾಡಲಾಗುತ್ತದೆ ಮತ್ತು ಅಪಹಾಸ್ಯಕ್ಕೆ ಗುರಿಪಡಿಸಲಾಗುತ್ತಿದೆ. ಅಂತಹ ಮಹಾನುಭಾವರನ್ನು ಮಿಲಿಯಗಟ್ಟಲೆ ಜನರು ಅನುಸರಿಸುತ್ತಿದ್ದರೂ ಇಂತಹ ನಿಂದನೆಗಳನ್ನು ಸಹಿಸಲಾಗದವರಾಗಿದ್ದರೂ ಹೀಗೆ ಮಾಡುತ್ತಿದ್ದಾರೆ. ನಾವು ವಾಸ್ತವಿಕವಾಗಿ ಲೋಕದಲ್ಲಿ ಶಾಂತಿಯನ್ನು ಆಶಿಸುವವರಾದರೆ ನಾವು ನಮ್ಮ ಮಾತುಗಳ ಮತ್ತು ಕೃತ್ಯಗಳ ಪರಿಣಾಮ ಏನಾಗಬಹುದೆಂದು ಯೋಚಿಸುವ ಆವಶ್ಯಕತೆ ಇದೆ. ನಾವು ಅನ್ಯರ ನಂಬಿಕೆಗಳನ್ನು ಮತ್ತು ಮೌಲ್ಯಗಳನ್ನು ಗೌರವಿಸುವವರಾಗಬೇಕು. ಲೋಕದ ವಿವಿಧ ಭಾಗಗಳಲ್ಲಿ ಸ್ಥಾಪಿಸಲಾದ ತಡೆಗಟ್ಟುಗಳನ್ನೂ ಶತ್ರುತ್ವ ಮತ್ತು ವಿರೋಧದ ಗೋಡೆಗಳನ್ನೂ ಕೆಡವಿ ಹಾಕಬೇಕು. ಖಂಡಿತವಾಗಿ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವುದು ಅತ್ಯಂತ ಸಂದಿಗ್ಧವಾದ ತುರ್ತು ಆವಶ್ಯಕತೆಯಾಗಿದೆ. ಇದು ನಮ್ಮ ಪ್ರಮುಖ ಅಭಿಲಾಷೆ ಮತ್ತು

ಉದ್ದೇಶ ಲಕ್ಷ್ಯವಾಗಿದೆ. ಕೆಲವು ಮುಸ್ಲಿಮರ ಹಗೆತನಭರಿತ ದುಷ್ಕೃತ್ಯಗಳು ಅನೇಕ ಸಂಘರ್ಷಗಳಿಗೆ ಇಂದಿನ ಕಾಲದಲ್ಲಿ ಕಾರಣವಾಗಿವೆ ಎಂಬುದನ್ನು ನಿರಾಕರಿಸಲಾಗದು. ಆದರೆ ಸ್ಪಷ್ಟವಾಗಿ ತಿಳಿಯಬೇಕಾದುದು ಏನೆಂದರೆ ಅವರು ಇಂತಹ ಕ್ರೂರ ಕೃತ್ಯಗಳನ್ನು ಮಾಡುತ್ತಿರುವುದು ಅವರು ಇಸ್ಲಾಮಿನ ನೈಜ ತತ್ವಗಳಿಂದ ದೂರ ಸರಿದು ಹೋದುದರಿಂದಾಗಿದೆ. ಇದಲ್ಲದೆ ಕೆಲವು ಮುಸ್ಲಿಮೇತರ ಶಕ್ತಿ ರಾಷ್ಟ್ರಗಳು ತಮ್ಮ ಅನ್ಯಾಯಭರಿತ ಧೋರಣೆಗಳ ಮತ್ತು ಕೃತ್ಯಗಳ ಕಾರಣ ಸಂಘರ್ಷದ ಜ್ವಾಲೆಗೆ ಗಾಳಿ ಹಾಕುತ್ತಿದ್ದಾರೆ. ಒಬ್ಬನು ನ್ಯಾಯಪೂರ್ಣ ದೃಷ್ಟಿಯಿಂದ ಮತ್ತು ಪೂರ್ವಗ್ರಹ ಪೀಡಿತವಾಗದ ದೃಷ್ಟಿಯಿಂದ ಪವಿತ್ರ ಖುರ್‌ಆನಿನ ಉಪದೇಶಗಳನ್ನೂ ಪವಿತ್ರ ಪೈಗಂಬರರ(ಸ) ಜೀವಿತವನ್ನೂ ಮೌಲ್ಯಮಾಪನ ನಡೆಸುವವನಾದರೆ ಇಸ್ಲಾಮ್ ಶಾಂತಿಯನ್ನು ಪ್ರತಿಪಾದಿಸಿದ ಧರ್ಮವೆಂದು ಶೀಘ್ರವಾಗಿ ಕಾಣುವನು. ಪವಿತ್ರ ಪೈಗಂಬರರು(ಸ) ಶಾಂತಿಯನ್ನು ತನ್ನ ಶರೀರದ ಕಣಕಣಗಳಿಂದಲೂ ಆಶಿಸಿದ್ದರು. ಪವಿತ್ರ ಖುರ್‌ಆನ್ ಎಲ್ಲ ಮಾನವರನ್ನು ಪ್ರೀತಿಸುವ ಉಪದೇಶ ನೀಡುತ್ತದೆ ಎಂದು ಅವರು ಕಾಣುವರು.

ಇಂದು ನಾವು ವರ್ಧಿಸುತ್ತಿರುವ ಅಸ್ಥಿರತೆಯ ಮತ್ತು ಅನಿಶ್ಚಯತೆಯ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದೇವೆ. ಆದುದರಿಂದ ಲೋಕದ ಪ್ರತಿಯೊಂದು ಭಾಗದ ಪ್ರತಿಯೊಬ್ಬ ವ್ಯಕ್ತಿ ಶಾಂತಿ ಸ್ಥಾಪನೆಗೋಸ್ಕರ ವೈಯಕ್ತಿಕ ಹೊಣೆಗಾರಿಕೆಯನ್ನು ವಹಿಸಬೇಕಾಗಿದೆ. ಸಂಘರ್ಷಗಳು ಹೊತ್ತಿಕೊಂಡು ಲೋಕದ ಎಲ್ಲ ಭಾಗಗಳಲ್ಲೂ ಉರಿಯುತ್ತಿವೆ. ಆದುದರಿಂದ ದುರದೃಷ್ಟಕರವಾದ ಯುದ್ಧದ ಭೀತಿಯ ನೆರಳು ಕಾಣಿಸುತ್ತಿದೆ ಎಂಬುದರ ಬಗ್ಗೆ ಸಂಶಯವಿಲ್ಲ. ವಿವಿಧ ದೇಶಗಳ ಒಕ್ಕೂಟಗಳು ಮತ್ತು ಗುಂಪುಗಳು ವೇಗವಾಗಿ ನಮ್ಮ ಕಣ್ಣ ಮುಂದೆಯೇ ವೇಗವಾಗಿ ಸ್ಥಾಪಿಸಲ್ಪಡುತ್ತಿವೆ. ಆದುದರಿಂದ ನಾವು ಯೋಚಿಸಲು ನಿಲ್ಲದೆ ವಿನಾಶಕಾರಿ ತೃತೀಯ ಮಹಾ ಯುದ್ಧದ ಕಡೆಗೆ ಹುಚ್ಚುತನದಿಂದ ಮುಂದೆ ಸಾಗುತ್ತಿದ್ದೇವೆ ಎಂದು ನಾನು ಬಲವಾಗಿ ಭಯಪಡುತ್ತಿದ್ದೇನೆ.

ವಾಸ್ತವಿಕವಾಗಿ ಇಂತಹ ಒಂದು ಯುದ್ಧದ ಬೇರುಗಳು ಇಷ್ಟರಲ್ಲಿಯೇ ಸ್ಥಾಪಿತವಾಗಿವೆ ಎಂದು ಹೇಳಿದರೆ ತಪ್ಪಾಗಲಾರದು. ನಾವು ನಮ್ಮನ್ನು ರಕ್ಷಿಸಿಕೊಳ್ಳಲು ಬಯಸುವುದಾದರೆ ಮತ್ತು ನಮ್ಮ ಮಕ್ಕಳನ್ನೂ ಮುಂದಿನ ಪೀಳಿಗೆಗಳನ್ನೂ ಯುದ್ಧದ ನೋವಿನಿಂದಲೂ ಅದರ ವಿನಾಶಕಾರಿ ಪರಿಣಾಮಗಳಿಂದಲೂ ರಕ್ಷಿಸಲು ಬಯಸುವುದಾದರೆ ನಾವು ನಮ್ಮ ಸೃಷ್ಟಿಕರ್ತನಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ಮತ್ತು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಸಲ್ಲಿಸಬೇಕು. ನಾವು ಪರಸ್ಪರ ಒಬ್ಬರಿನ್ನೊಬ್ಬರನ್ನು ಗೌರವಿಸಬೇಕು ಮತ್ತು ಲಕ್ಷಿಸಬೇಕು. ಜಾತಿ, ಧರ್ಮ ವ್ಯತ್ಯಾಸ ಇದಕ್ಕೆ ಅಡ್ಡಿಯಾಗಬಾರದು.

ನಾವು ಒಬ್ಬರಿನ್ನೊಬ್ಬರ ಧಾರ್ಮಿಕ ಮತ್ತು ರಾಷ್ಟ್ರೀಯ ಭಾವನೆಗಳನ್ನು ಗೌರವಿಸಬೇಕು. ಇಂದಿನ ಕಾಲದ ಮುಸ್ಲಿಮ್ ಸರಕಾರಗಳು ತಮ್ಮ ಪ್ರಜೆಗಳನ್ನು ನಿರ್ಲಕ್ಷಿಸುತ್ತಿವೆ ಮತ್ತು ಅವರ ಹಕ್ಕುಗಳನ್ನು ಅನ್ಯಾಯದಿಂದ ಕಿತ್ತುಕೊಂಡಿವೆ. ಆ ಕಾರಣದಿಂದ ಉಗ್ರವಾದಿಗಳಾದ ಭೀಕರವಾದಿ ಗುಂಪುಗಳು ಇದರ ಲಾಭ ಪಡೆದು ಶಕ್ತಿಯನ್ನು ಗಳಿಸಿವೆ. ಈ ಗುಂಪುಗಳು ಮುಸ್ಲಿಮ್ ಲೋಕದಲ್ಲಿ ವಿನಾಶಕಾರಿ ಕೃತ್ಯಗಳನ್ನು ಮಾಡುತ್ತಿವೆಯಲ್ಲದೆ ತಮ್ಮ ಭೀಕರ ಜಾಲಗಳನ್ನು ಪಶ್ಚಿಮಕ್ಕೂ ಹರಡಿವೆ.

ಆದುದರಿಂದ ಇಸ್ಲಾಮ್ ಮತ್ತು ಮುಸ್ಲಿಮರ ಬಗ್ಗೆ ಭಯ ಬೇರೂರಿದೆ ಮತ್ತು ಅದು ವರ್ಧಿಸುತ್ತಾ ಇದೆ. ನಾನು ಇನ್ನೊಮ್ಮೆ ಸ್ಪಷ್ಟಪಡಿಸಲು ಬಯಸುತ್ತೇನೆ. ಮುಸ್ಲಿಮ್ ನಾಮಧೇಯ ಗುಂಪುಗಳು ಮಾಡುವ ಭೀಕರ ಕೃತ್ಯಗಳು ಇಸ್ಲಾಮ್ ಧರ್ಮದ ತತ್ವಗಳನ್ನು ಪ್ರತಿನಿಧೀಕರಿಸುವುದಿಲ್ಲ. ಅವರು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಹೊಂದಿದವರಾಗಿದ್ದಾರೆ.

ನಾನು ಮೇಲೆ ವಿವರಿಸಿದ ವಿಷಯಗಳ ಬೆಳಕಿನಲ್ಲಿ ನಾನು ಪಶ್ಚಿಮದ ನಾಯಕರನ್ನು ಮತ್ತು ರಾಜಕಾರಣಿಗಳನ್ನು ಒತ್ತಾಯಪಡಿಸುತ್ತಾ ಅಪೇಕ್ಷಿಸುವುದೇನೆಂದರೆ, ಅವರು ತಮ್ಮ ಹೊಣೆಗಾರಿಕೆಗಳನ್ನು ಅರಿತುಕೊಳ್ಳಬೇಕು. ತಮ್ಮ ಸ್ವಂತ ರಾಜಕೀಯ ಮತ್ತು ಆರ್ಥಿಕ ಲಾಭಕ್ಕೋಸ್ಕರ ಮಾತ್ರ ಮುಸ್ಲಿಮ್ ನಾಯಕರೊಂದಿಗೆ ಸಂಬಂಧ ಸ್ಥಾಪಿಸುವುದಕ್ಕೆ ಸೀಮಿತಗೊಳಿಸದೆ ಅವರು ತಮಗಿರುವ ಪ್ರಭಾವಗಳನ್ನು ಬಳಸಿ ನಿಷ್ಪಕ್ಷವಾಗಿ ಮುಸ್ಲಿಮ್ ಸರಕಾರಗಳಿಗೆ ಶಾಂತಿ ಸ್ಥಾಪಿಸಲು ಮಾರ್ಗದರ್ಶನ ಮತ್ತು ಸಹಾಯ ನೀಡಬೇಕು. ಹೀಗೆ ಮಾಡದಿದ್ದರೆ ಪಾಶ್ಚಿಮಾತ್ಯ ನಾಯಕರು ಸಹ ಜಾಗತಿಕ ಶಾಂತಿಯನ್ನು ಕೆಡಿಸುವವರ ಸಮಾನವಾಗಿ ಮುಸ್ಲಿಮರೊಂದಿಗೆ ಸೇರುತ್ತಾರೆ.

ಕಳೆದ ಒಂದು ವರ್ಷದಲ್ಲಿ ಬಹಳ ಸಂಖ್ಯೆಯಲ್ಲಿ ನಿರಾಶ್ರಿತರು ಯುರೋಪನ್ನು ಪ್ರವೇಶಿಸಿದ ಕಾರಣ ಯುರೋಪಿನ ಜನರಲ್ಲಿ ಭಯ ಮತ್ತು ಕಳವಳ ವರ್ಧಿಸುತ್ತಿದೆ. ನಾವು ಗಮನಿಸಬೇಕಾದುದೇನೆಂದರೆ, ನಿರಾಶ್ರಿತರಲ್ಲಿ ಬಹುಸಂಖ್ಯಾತರು ಪಶ್ಚಿಮದ ದೇಶಗಳಲ್ಲಿ ಆಶ್ರಯವನ್ನು ಅಪೇಕ್ಷಿಸಿದುದರ ಕಾರಣವೇನೆಂದರೆ ಅವರು ತಮ್ಮ ದೇಶಗಳಲ್ಲಿ ಕ್ರೌರ್ಯವನ್ನೂ ಧ್ವಂಸವನ್ನೂ ಅನುಭವಿಸಬೇಕಾಯಿತು. ಆದರೆ ಸತ್ಯವೇನೆಂದರೆ ಒಂದು ದೇಶವಾಗಲಿ ಅಥವಾ ಒಂದು ಭೂಖಂಡವಾಗಲಿ ತಮ್ಮ ದೇಶವನ್ನು ತ್ಯಜಿಸಿ ಓಡಿ ಬರುತ್ತಿರುವ ಮಿಲಿಯಗಟ್ಟಲೆ ನಿರಾಶ್ರಿತ ಜನರನ್ನು ತನ್ನಲ್ಲಿ ಸೇರಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿಲ್ಲ. ಆದುದರಿಂದ ಏಕಮಾತ್ರ ಪರಿಹಾರ ಮಾರ್ಗವೇನೆಂದರೆ ಈ ನಿರಾಶ್ರಿತರ ಸ್ವಂತ ದೇಶಗಳಲ್ಲಿ ಶಾಂತಿ ಸ್ಥಾಪನೆಗೆ ವಾಸ್ತವಿಕ ಪ್ರಯತ್ನ ಮಾಡಬೇಕು ಮತ್ತು ಅವರ ದೇಶದಲ್ಲಿ ನಡೆಯುತ್ತಿರುವ ದೌರ್ಜನ್ಯಗಳು ಕೊನೆಗೊಳ್ಳುವಂತೆ ಮಾಡಬೇಕು.

ಆದುದರಿಂದ ನಾನು ಇನ್ನೊಮ್ಮೆ ನಮ್ಮ ಅತಿಥಿಗಳೊಂದಿಗೆ, ವಿಶಿಷ್ಟವಾಗಿ ರಾಜಕಾರಣಿಗಳೊಂದಿಗೆ ಮತ್ತು ಪ್ರಭಾವಶಾಲಿ ಜನರೊಂದಿಗೆ ಆವಶ್ಯಪಡುತ್ತೇನೆ: ಅವರೆಲ್ಲರೂ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಾಗುವ ಸಂದರ್ಭಗಳನ್ನು ನಷ್ಟವಾಗದಂತೆ ನಿಗಾವಹಿಸಬೇಕು. ಏಕೆಂದರೆ ಬೇರೆ ದಾರಿ ಸಾಧ್ಯವೆಂದೆನಿಸುವುದಿಲ್ಲ. ನಾನು ಹಿಂದೆ ಹೇಳಿದ ಹಾಗೆ ತೃತೀಯ ಜಾಗತಿಕ ಮಹಾಯುದ್ಧ ವೇಗವಾಗಿ ಬರುತ್ತಾ ಇದೆ. ಅದನ್ನು ತಡೆಗಟ್ಟದಿದ್ದರೆ ಅದರ ವಿನಾಶಕಾರಿ


ಪರಿಣಾಮಗಳು ಖಂಡಿತವಾಗಿ ಪೀಳಿಗೆಗಳಲ್ಲಿ ಮುಂದುವರಿಯುವುವು. ಏಕೆಂದರೆ ಇಂದಿನ ಕಾಲದಲ್ಲಿ ಜಾಗತಿಕ ಮಹಾಯುದ್ಧ ನಡೆದರೆ ಅಣು ಅಸ್ತ್ರಗಳು ಬಳಸಲ್ಪಡುವ ಸಾಧ್ಯತೆಗಳು ಹೆಚ್ಚಿಗೆ ಇವೆ. ಇಂತಹ ಯುದ್ಧ ಪರಿಣಾಮ ಹೇಗಾಗುವುದೆಂದು ಊಹಿಸಲಾಗದು ಮತ್ತು ಮನವರಿಕೆ ಮಾಡಲು ಅಸಾಧ್ಯವೂ ಆಗಿದೆ.


ಲೋಕದ ಜನರಿಗೆ ಅಲ್ಲಾಹನು ಪ್ರಜ್ಞೆಯನ್ನೂ ಬುದ್ಧಿಯನ್ನೂ ದಯಪಾಲಿಸಲಿ. ಅವನು ತನ್ನ ಅಪರಿಮಿತ ದಯೆ ಮತ್ತು ಕಾರುಣ್ಯದ ಮೂಲಕ ನಮ್ಮನ್ನೆಲ್ಲ ರಕ್ಷಿಸುವವನಾಗಲಿ ಮತ್ತು ಮಾನವರೆಲ್ಲರೂ ಶಾಂತಿಯಿಂದಲೂ ಸೌಹಾರ್ದದಿಂದಲೂ ಜೀವಿಸಲು ಭಾಗ್ಯ ಹೊಂದುವವರಾಗಲಿ. ಪರಸ್ಪರ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಯಾವಾಗಲೂ ಈಡೇರಿಸುವವರಾಗಲಿ. ಇಂದಿನ ಕಾಲದ ಕಹಿ ಸಂಘರ್ಷಗಳಿಂದ ನಾವು ಹೊರಗೆ ಬರುವಂತಾಗಲಿ ಮತ್ತು ಪ್ರಕಾಶಮಾನವಾದ ಭವಿಷ್ಯತ್ ಕಾಲವನ್ನು ಕಾಣುವಂತಾಗಲಿ. ಎಲ್ಲ ಜನಾಂಗಗಳು ಮತ್ತು ಗುಂಪುಗಳು ಒಬ್ಬರಿನ್ನೊಬ್ಬರ ಸಮೀಪ ಪ್ರೀತಿಯಿಂದ ಜೀವಿಸುವವರಾಗಲಿ. ಅಲ್ಲಿ ಪ್ರೀತಿ, ಕರುಣೆ ಮತ್ತು ಮಾನವೀಯತೆ ಮೇಲಿನ ಸ್ಥಾನ ಪಡೆಯಲಿ. ಈ ಮಾತುಗಳೊಂದಿಗೆ ನಾನು ಇನ್ನೊಮ್ಮೆ ನಿಮಗೆ ಧನ್ಯವಾದಗಳನ್ನು, ನೀವು ನಮ್ಮೊಂದಿಗೆ ಬಂದು ಸೇರಿದುದಕ್ಕಾಗಿ ಅರ್ಪಿಸುತ್ತೇನೆ.

ನಿಮಗೆ ಧನ್ಯವಾದಗಳು.


**(The Review Of Religions – June 2016 ಸಂಚಿಕೆಯಿಂದ. ಭಾಷಾಂತರ: ಯಮ್. ಉಬೈದುಲ್ಲಾ)**


## NEW PUBLICATIONS




**Contact :**
NAZARAT NASHR-O-ISHA'AT
**Sadr Anjuman Ahmadiyya**
**(Publication Department)**
**Ahmadiyya Muslim Jama'at,**
**QADIAN – 143516 (Punjab)**
**Phone: 01872-500970.**



# ಜಾಗತಿಕ ಶಾಂತಿ ಸ್ಥಾಪನೆಗೆ ಸುವರ್ಣ ತತ್ವಗಳು




**ಯುನೈಟೆಡ್ ಕಿಂಗ್‌ಡಮ್‌ನ ಅಹ್ಮದಿಯಾ ಮುಸ್ಲಿಮ್ ಜಮಾಅತ್ ವತಿಯಿಂದ 12ನೇ ನ್ಯಾಶನಲ್ ಪೀಸ್ ಸಿಂಪೋಸಿಯಮ್ 2015 ಮಾರ್ಚ್ ದಿನಾಂಕ 14 ರಂದು ಶನಿವಾರ ಸೌತ್ ಲಂಡನ್‌ನಲ್ಲಿರುವ ಬೈತುಲ್ ಫುತೂಹ್ ಮಸ್‌ಜಿದ್‌ನಲ್ಲಿ ಜರಗಿತು. ಈ ಸಿಂಪೋಸಿಯಂನ ಚರ್ಚಾ ವಿಷಯ "ಧರ್ಮ, ಸ್ವಾತಂತ್ರ್ಯ ಮತ್ತು ಶಾಂತಿ" ಎಂದಾಗಿತ್ತು. ಪಾರ್ಲಿಮೆಂಟ್ ಸದಸ್ಯರು, ರಾಜಕಾರಣಿಗಳು, ರಾಯಭಾರಿಗಳು, ಧಾರ್ಮಿಕ ಮತ್ತು ಪೌರ ನಾಯಕರು ಸೇರಿ ಈ ಸಿಂಪೋಸಿಯಂನಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದರು.**

**ಈ ಸಮಾರಂಭದಲ್ಲಿ ಅಹ್ಮದಿಯಾ ಮುಸ್ಲಿಮ್ ಪ್ರೈಝ್ ಫೋರ್ ದಿ ಎಡ್‌ವಾನ್ಸ್‌ಮೆಂಟ್ ಆಫ್ ಪೀಸ್ (ಅಹ್ಮದಿಯಾ ಜಮಾಅತಿನ ಶಾಂತಿ ಬಹುಮಾನ) ಭಾರತದ ಸಿಂಧುತಾಯಿ ಸಪ್ಕಲ್‌ರವರಿಗೆ, ವಸತಿ ರಹಿತ ಅನಾಥರಿಗೆ ಅವರು ಮಾಡಿದ ಸ್ಫೂರ್ತಿದಾಯಕ ಸೇವೆಗೋಸ್ಕರ ನೀಡಲಾಯಿತು. ಈ ಸಿಂಪೋಸಿಯಂನ ಪ್ರಮುಖ ಭಾಷಣವನ್ನು ಅಹ್ಮದಿಯಾ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಮಾಡಿದರು.**

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಪಂಚಮ ಖಲೀಫರು ಹೀಗೆ ಹೇಳಿದರು:

ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು– ನಿಮಗೆ ಅಲ್ಲಾಹನಿಂದ ಶಾಂತಿ ಮತ್ತು ಅನುಗ್ರಹ ಸುರಿಸಲ್ಪಡಲಿ. ಮೊದಲನೆಯದಾಗಿ, ಇಲ್ಲಿಗೆ ಆಗಮಿಸಿದ ಎಲ್ಲ ಗಣ್ಯ ಅತಿಥಿಗಳಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

ಈ ವರ್ಷ ಪೀಸ್ ಸಿಂಪೋಸಿಯಂ, ಕಳೆದ ವರ್ಷ ಜರಗಿದ ಪೀಸ್ ಸಿಂಪೋಸಿಯಂ ನಂತರ ಕೇವಲ ಐದು ತಿಂಗಳ ಕಾಲದ ಬಿಡುವಿನ ನಂತರ ಜರಗಿಸಲ್ಪಡುತ್ತಿದೆ. ಆದುದರಿಂದ ಅಲ್ಪ ಕಾಲಾವಧಿಯ ನಂತರ ಪುನಃ ನಮ್ಮ ಆಹ್ವಾನವನ್ನು ಸ್ವೀಕರಿಸಿದ ನಮ್ಮ ಹಳೆಯ ಸ್ನೇಹಿತರಿಗೆ ನಾನು ವಿಶಿಷ್ಟವಾಗಿ ಕೃತಜ್ಞನಾಗಿದ್ದೇನೆ. ನೀವು ನಮ್ಮ ಆಹ್ವಾನವನ್ನು ಸ್ವೀಕರಿಸಿದುದಕ್ಕೆ ಒಂದು ಕಾರಣವಾಗಿರುವುದು ಲೋಕದಲ್ಲಿ ಶಾಂತಿ ಸ್ಥಾಪನೆ ಮಾಡುವ ಬಗ್ಗೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನಿಲುವು ಮತ್ತು ಅದು ಮಾಡುವ ಪ್ರಯತ್ನಗಳ ಬಗ್ಗೆ ನೀವು ಆಲಿಸಲು ಬಯಸುತ್ತಿರುವುದೆಂದು ನಾನು ನಂಬುತ್ತೇನೆ.

ಕಳೆದ ಪೀಸ್ ಸಿಂಪೋಸಿಯಂನಲ್ಲಿ ಪ್ರಸ್ತಾಪಿಸಲಾದ ವಿಷಯಗಳಿಗೆ ಯಾವುದಾದರೂ ಸಕಾರಾತ್ಮಕ ಪ್ರತಿಕ್ರಿಯೆ ಉಂಟಾಗಿದೆಯೋ ಎಂದು ನಿಮ್ಮವರಲ್ಲಿ ಕೆಲವರು ತಿಳಿದುಕೊಳ್ಳಲು ಆಸಕ್ತರಾಗಿರಬಹುದೆಂದು ಸಹ ನಾನು ಗ್ರಹಿಸುತ್ತೇನೆ. ಇಂತಹ ವಿಷಯಗಳಿಗೆ ಸಂಬಂಧಿಸಿ ತೀವ್ರ ಆಸಕ್ತಿ ಹೊಂದುವುದು ಉತ್ತಮವಾಗಿದೆ. ಶಾಂತಿ ಸ್ಥಾಪನೆಗೆ ಮಾಡುವ ಪ್ರತಿಯೊಂದು ಪರಿಶ್ರಮ ಜಯಶಾಲಿಯಾಗಬೇಕೆಂದೂ ಅನುಗ್ರಹಿಸಲ್ಪಡಬೇಕೆಂದೂ ಎಲ್ಲ ಜನರು ನಿಶ್ಚಯವಾಗಿಯೂ ಆಶಿಸಬೇಕಾಗಿದೆ. ನಮ್ಮ ಪ್ರಯತ್ನಗಳು ಯಾವುದಾದರೂ ಸಕಾರಾತ್ಮಕ ಪರಿಣಾಮ ಬೀರುವುದೆಂದು ನಾನು ನಿಶ್ಚಯವಾಗಿಯೂ ಪ್ರತೀಕ್ಷಿಸುತ್ತಿದ್ದೇನೆ. ನಾವೆಲ್ಲರೂ ಶಾಂತಿಯನ್ನು ಒಗ್ಗೂಡಿ ಆಶಿಸುತ್ತಿದ್ದರೂ ವಾಸ್ತವಿಕ ಸ್ಥಿತಿ ಏನೆಂದರೆ ಲೋಕವು ಇನ್ನಷ್ಟು ಹೆಚ್ಚು ಸಂಘರ್ಷಗಳ ಕಡೆಗೆ, ಅಸ್ತವ್ಯಸ್ತೆ ಮತ್ತು ಅಂಧಕಾರದ ಕಡೆಗೆ ಮುನ್ನುಗ್ಗುತ್ತಾ ಇದೆ. ನಮ್ಮ ಕಳೆದ ವರ್ಷದ ಸಿಂಪೋಸಿಯಂ ನಂತರ ದೂರದಿಂದ ಒಂದು ಬೆಳಕಿನ ಕಿರಣ ಮಿನುಗುತ್ತಿರುವುದು ದೃಶ್ಯವಾಗಿರುವುದು ಒಂದು ಸಕಾರಾತ್ಮಕ ಬೆಳವಣಿಗೆಯಾಗಿದೆ ಮತ್ತು ಅದು ಜಾಗರೂಕತೆಯಿಂದ ಕೂಡಿದ ಶುಭ ಪ್ರತೀಕ್ಷೆಗೆ ಅನುಕೂಲವಾಗಿದೆ.

ಕಳೆದ ವರ್ಷದ ಪೀಸ್ ಸಿಂಪೋಸಿಯಂನಲ್ಲಿ ನಾನು ಪ್ರಸ್ತಾಪಿಸಿದ ಒಂದು ವಿಷಯ ಐಎಸ್‌ಐಎಸ್ ಅಥವಾ ಐಎಸ್‌ನಂತಹ ಭೀಕರ ಗುಂಪುಗಳಿಗೆ ನೀಡಲಾಗುವ ಸಾಂಪತ್ತಿಕ ಸಹಾಯವನ್ನು ಮತ್ತು ಅವರಿಗೆ ಸರಬರಾಜು ಮಾಡಲಾಗುತ್ತಿರುವ ಸಾಮಗ್ರಿಗಳ ಪೂರೈಕೆಯನ್ನು ಲೋಕವು ತುರ್ತಾಗಿ ತಡೆಗಟ್ಟಬೇಕು ಎಂದಾಗಿತ್ತು. ಕಳೆದ ಕೆಲವು ತಿಂಗಳಲ್ಲಿ ಈ ನಿಟ್ಟಿನಲ್ಲಿ ವಾಸ್ತವಿಕ ಪ್ರಯತ್ನಗಳು ನಡೆದಿವೆ. ಆದರೆ ಈ ಪ್ರಯತ್ನಗಳಿಗೆ ನಾನು ಕಾರಣವೆಂದಾಗಲೀ ಈ ವಿಷಯದ ಬಗ್ಗೆ ನಾನು ಗಮನ ಹರಿಸಿದ ಕಾರಣದಿಂದ ಹೀಗೆ ಸಂಭವಿಸಿತು ಎಂದಾಗಲೀ ನಾನು ವಾದಿಸುವುದಿಲ್ಲ.

ಉದಾಹರಣೆಗೆ, ಸಂಯುಕ್ತರಾಷ್ಟ್ರ ಸಂಘದ ಸೆಕ್ಯುರಿಟಿ ಕೌನ್ಸಿಲ್ ಐಎಸ್‌ಐಎಸ್‌ಗೆ ಧನ ಸಹಾಯ ಮಾಡುವುದನ್ನು ಖಂಡಿಸಿ ಒಮ್ಮತದಿಂದ ಠರಾವನ್ನು ಫೆಬ್ರವರಿಯಲ್ಲಿ ಅಂಗೀಕರಿಸಿತು. ಈ ಭೀಕರ ಗುಂಪಿನಿಂದ ನ್ಯಾಯ ವಿರುದ್ಧವಾಗಿ ತೈಲವನ್ನು ಖರೀದಿಸುವ ಮತ್ತು ವಾಣಿಜ್ಯ ವ್ಯವಹಾರ ನಡೆಸುವವರ ವಿರುದ್ಧ ಪ್ರತಿಬಂಧಗಳನ್ನು ಹೇರಲು ನಿರ್ಧರಿಸಿತು. ಈ ಠರಾವನ್ನು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳಿಸಿದರೆ, ನಾನು ಹಿಂದೆ ಹೇಳಿದ ಹಾಗೆ ಐಎಸ್‌ಐಎಸ್ ಎಂಬ ಭೀಕರ ಗುಂಪನ್ನು ಸೋಲಿಸಿ ಅದರ ಕ್ರೌರ್ಯಕೃತ್ಯಗಳನ್ನು ಕೊನೆಗೊಳಿಸಲು ವರ್ಷಗಳು ಬೇಕಾಗಿಲ್ಲ, ತಿಂಗಳುಗಳು ಸಾಕು. ಎಲ್ಲ ಮುಸ್ಲಿಮ್ ದೇಶಗಳು ಮತ್ತು ಅವರ ಮಿತ್ರ ದೇಶಗಳು ವಾಸ್ತವಿಕವಾಗಿ ಜಾಗತಿಕ ಶಾಂತಿಯನ್ನು ಸ್ಥಾಪಿಸಲು ಆಶಿಸಿದರೆ ಈ ಕ್ರಮಗಳನ್ನು ಜಾರಿಗೊಳಿಸಲು ತಮ್ಮ ಪೂರ್ಣ ಸಾಮರ್ಥ್ಯದೊಂದಿಗೆ ಪ್ರಯತ್ನಿಸಬೇಕು. ಈ ಕ್ರಮಗಳಿಗೆ ಪೂರ್ಣ ಸಹಾಯ ನೀಡುವುದು ಮತ್ತು ಅವುಗಳ ಬಗ್ಗೆ ಬದ್ಧರಾಗುವುದು ಮುಸ್ಲಿಮ್ ದೇಶಗಳ ಭಾರವಾದ ಜವಾಬ್ದಾರಿಯಾಗಿದೆ. ಇದಕ್ಕೆ ಕಾರಣವೇನೆಂದರೆ, ಐಎಸ್‌ಐಎಸ್ ಸ್ಥಾಪಿಸಿದ ತಥಾಕಥಿತ ಸರಕಾರ ಅಥವಾ ರಾಜ್ಯ ಅತ್ಯಂತ ಹೇಯ ಕ್ರೌರ್ಯಗಳನ್ನು ನಡೆಸುತ್ತಾ ಇದೆಯಲ್ಲದೆ ಅದನ್ನು ಇಸ್ಲಾಮ್ ಧರ್ಮದ ಹೆಸರಿನಲ್ಲಿ ನಡೆಸುತ್ತಿದೆ. ಅವರ ಕೃತ್ಯಗಳು ನೈಜ ಮುಸ್ಲಿಮರಿಗೆ ಅತ್ಯಂತ ದುಃಖದಾಯಕವಾಗಿವೆ. ಏಕೆಂದರೆ ಅವರು ನಡೆಸುವ ಹೇಯ ಕೃತ್ಯಗಳಿಗೆ ಇಸ್ಲಾಮ್‌ನೊಂದಿಗೆ ಯಾವ ಸಂಬಂಧವೂ ಇಲ್ಲ ಎಂದು ನೈಜ ಮುಸ್ಲಿಮರಿಗೆ ತಿಳಿದಿರುತ್ತದೆ.

ಇತ್ತೀಚೆಗೆ ಒಬ್ಬ ಫ್ರೆಂಚ್ ಪತ್ರಕರ್ತ, ಐಎಸ್‌ಐಎಸ್‌ನಿಂದ ಹತ್ತು ತಿಂಗಳ ಕಾಲ ಬಂಧಿತನಾಗಿ ಬಿಡುಗಡೆ ಹೊಂದಿದ್ದನು. ತನ್ನ ಬಂಧನದ ಕಾಲಾವಧಿಯಲ್ಲಿ ತಾನು ಪವಿತ್ರ ಖುರ್‌ಆನಿನ ಒಂದೇ ಒಂದು ಪ್ರತಿಯನ್ನು ಕಾಣಲಿಲ್ಲ ಎಂದು ತನ್ನ ಬಂಧನ ಕಾಲದ ಬಗ್ಗೆ ಪ್ರಸ್ತಾಪಿಸುತ್ತಾ ಆತನು ಹೇಳಿದನು. ಜನರನ್ನು ತಲೆಗಡಿದು ಕೊಲ್ಲುವ ಮತ್ತು ಇತರ ಕ್ರೌರ್ಯಕೃತ್ಯಗಳನ್ನು ಹೇಗೆ ಸಮರ್ಥಿಸುತ್ತೀರಿ ಎಂದು ವಿಚಾರಿಸಿದಾಗ ಉತ್ತರ ದೊರಕಲಿಲ್ಲ ಎಂದೂ ಆ ಪತ್ರಕರ್ತ ಹೇಳಿದನು. ಭೀಕರ ಗುಂಪಿನವರು ಹೇಳಿದರು: ನಾವು ನಮ್ಮ ಇಚ್ಛೆ ಪ್ರಕಾರ ವರ್ತಿಸುತ್ತೇವೆ. ಹಾಗೆಯೇ ಮುಂದೆ ಸಹ ವರ್ತಿಸುವೆವು.

ಯುನೈಟೆಡ್ ಕಿಂಗ್‌ಡಮ್ ವಿಶಿಷ್ಟವಾಗಿ ಕಳವಳಗೊಳ್ಳಬೇಕಾಗಿದೆ. ಏಕೆಂದರೆ ಪತ್ರಕರ್ತನ ಹೇಳಿಕೆ ಪ್ರಕಾರ ಬ್ರಿಟನ್‌ನಿಂದ ಸಿರಿಯಾ ದೇಶಕ್ಕೆ ತೆರಳಿದ ಭೀಕರವಾದಿಗಳು ಅತ್ಯಂತ ತೀವ್ರರೂಪದ ಕ್ರೌರ್ಯಕೃತ್ಯಗಳನ್ನು ನಡೆಸುತ್ತಿದ್ದಾರೆ. ಅವರು ಇತರ ಭೀಕರವಾದಿಗಳಿಗಿಂತ ಹೆಚ್ಚು ನಿರ್ದಯರಾಗಿ ವರ್ತಿಸುವವರಾಗಿದ್ದಾರೆ.

ಈ ವಿಷಯವು ಬ್ರಿಟಿಷ್ ಸರಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಪುರುಷ ಮತ್ತು ಸ್ತ್ರೀಯರಾದ ಯುವ ಜನರು ತೀವ್ರವಾದಿಗಳಾಗಿ ಪರಿಣಮಿಸಿ ಸಿರಿಯಾ ಅಥವಾ ಇರಾಖ್‌ಗೆ ಪ್ರಯಾಣಿಸಿರುವುದಾಗಿ ಅಥವಾ ವಿವಿಧ ಭಯೋತ್ಪಾದಕ ಅಪರಾಧಗಳನ್ನು ಮಾಡಿದುದಕ್ಕಾಗಿ ಬಂಧಿಸಲ್ಪಟ್ಟ ಬಗ್ಗೆ ಸಾಮಾನ್ಯವಾಗಿ ಎಲ್ಲ ದಿನಗಳಲ್ಲೂ ವಾರ್ತೆಗಳು ಪ್ರಕಟವಾಗುತ್ತಿವೆ. ತೀವ್ರವಾದಿ ಬೆಳವಣಿಗೆ ಯುನೈಟೆಡ್ ಕಿಂಗ್‌ಡಮ್, ಯುರೋಪಿಗೆ ಮಾತ್ರವಲ್ಲ ನಿಶ್ಚಯವಾಗಿ ಲೋಕಕ್ಕೇ ಆತಂಕದಾಯಕವಾಗಿದೆ. ಆದುದರಿಂದ ಸರಕಾರಗಳು ತಮ್ಮ ಆತಂಕಗಳನ್ನು ಸೂಚಿಸುತ್ತಿರುವುದು ಸರಿಯಾದುದೇ ಆಗಿದೆ. ಈ ಸಮಸ್ಯೆಯನ್ನು ಪರಿಹರಿಸಲು ಇರುವ ಮಾರ್ಗಗಳ ಬಗ್ಗೆ ಅವು ಚರ್ಚೆ ನಡೆಸುತ್ತಾ ಇವೆ. ಆದರೆ ಸರಿಯಾದ ಮತ್ತು ಸೂಕ್ತವಾದ ರೀತಿಯಲ್ಲಿ ಅದನ್ನು ಎದುರಿಸಲು ಕ್ರಮಗಳನ್ನು ಇಷ್ಟರ ತನಕ ಕೈಗೊಂಡಿಲ್ಲ.

ಉದಾಹರಣೆಗೆ, ಬ್ರಿಟನಿನ ಪೋಲೀಸ್ ಮತ್ತು ರಹಸ್ಯ ವಿಭಾಗ ಹೀಗೆ ಸಮ್ಮತಿಸಿವೆ: ಸಿರಿಯಾ ಮತ್ತು ಇರಾಖ್‌ಗೆ ತೆರಳಿದ ತೀವ್ರವಾದಿಗಳ ಬಗ್ಗೆ ಸರಿಯಾದ ಪರಿವೀಕ್ಷಣೆ ನಡೆಸಲಾಗಿರಲಿಲ್ಲ. ಹಾಗೆ ಮಾಡಿದ್ದರೆ ಅವರು ಬ್ರಿಟನ್ ಬಿಟ್ಟು ಹೋಗುವುದನ್ನು ತಡೆಯಬಹುದಾಗಿತ್ತು.

ನಾನು ಹಿಂದೆ ಹೇಳಿದ ಹಾಗೆ ಇಂದಿನ ಪರಿಸ್ಥಿತಿಯ ಬಗ್ಗೆ ಕೇವಲ ಮುಸ್ಲಿಮ್ ಲೋಕ ಮಾತ್ರ ಚಿಂತಿತವಾದರೆ ಸಾಕಾಗಲಾರದು. ಇದು ಲೋಕವಿಡೀ ಆತಂಕ ಪಡಬೇಕಾದ ವಿಷಯವಾಗಿದೆ. ಏಕೆಂದರೆ ದೇಶಬಿಟ್ಟು ಹೋದ ತೀವ್ರವಾದಿಗಳು ತಮ್ಮ ದೇಶಕ್ಕೆ ಮರಳಿ ಬಂದರೆ ಅದರಿಂದ ಅಪಾಯಕರ ಪರಿಣಾಮಗಳು ಸಂಭವಿಸುವುವು. ಅದು ಸಮಾಜಕ್ಕೆ ಬೃಹತ್ತಾದ ವಿಪತ್ತನ್ನು ಉಂಟುಮಾಡುವುದು.

ಐಎಸ್‌ಐಎಸ್ ಬಗ್ಗೆ ಪ್ರತಿಕ್ರಿಯೆ ಸೂಚಿಸಿದ ಜಾಗತಿಕ ನಾಯಕರಾದ ಕೆಲವು ರಾಜಕಾರಣಿಗಳು ಮತ್ತು ಧಾರ್ಮಿಕ ನಾಯಕರ ಹೇಳಿಕೆಗಳು ಸಂತೋಷದಾಯಕವಾಗಿವೆ. ಅವರು ಬೆಂಕಿಗೆ ತೈಲ ಹಾಕುವ ಕೆಲಸ ಮಾಡಲಿಲ್ಲ. ಐಎಸ್‌ಐಎಸ್ ಮತ್ತು ಬೇರೆ ಭೀಕರವಾದಿ ಗುಂಪುಗಳು ನೈಜ ಇಸ್ಲಾಮ್ ಧರ್ಮ ತತ್ವಗಳನ್ನು ಪ್ರತಿನಿಧೀಕರಿಸುವುದಿಲ್ಲ ಎಂದು ಅವರು ಹೇಳಿದರು. ಉದಾಹರಣೆಗೆ, ಭೀಕರವಾದಿಗಳು ತಮ್ಮ ಧರ್ಮಕ್ಕೆ ದ್ರೋಹ ಮಾಡುತ್ತಾರೆಂದೂ ಅವರಿಗೆ ಇಸ್ಲಾಮ್‌ನೊಂದಿಗೆ ಯಾವುದೇ ಸಂಬಂಧವಿಲ್ಲವೆಂದೂ ವಾಶಿಂಗ್‌ಟನ್‌ನಲ್ಲಿ ಇತ್ತೀಚೆಗೆ ಮಾಡಿದ ಭಾಷಣದಲ್ಲಿ ಪ್ರೆಸಿಡೆಂಟ್ ಒಬಾಮ ಬಹಳ ಸ್ಪಷ್ಟವಾಗಿ ಹೇಳಿದರು. ಕೆಲವು ದಿವಸಗಳ ಹಿಂದೆ ನ್ಯೂಯೋರ್ಕ್ ನಗರದ ಕ್ಯಾಥೋಲಿಕ್ ಆರ್ಚ್ ಬಿಷಪ್, ಇಸ್ಲಾಮ್ ಐಎಎಸ್‌ಐಎಸ್‌ನಂತಹ ಭೀಕರ ಕೃತ್ಯಗಳನ್ನು ಸಮರ್ಥಿಸುತ್ತದೆ ಎಂಬ ಅಭಿಪ್ರಾಯವನ್ನು ಬಹಿರಂಗವಾಗಿ ಖಂಡಿಸಿ ಹೇಳಿಕೆ ನೀಡಿದರು.

ಇಲ್ಲಿ ಯುರೋಪಿನಲ್ಲಿ, ವಿಶಾಲ ಮನಸ್ಕರಾದ ಕೆಲವು ರಾಜಕಾರಣಿಗಳು ಮತ್ತು ಧಾರ್ಮಿಕ ನಾಯಕರು ಇಸ್ಲಾಮಿನ ಹೆಸರಲ್ಲಿ ತಪ್ಪಾಗಿ ಜರಗಿಸಲಾಗುತ್ತಿರುವ ಭೀಕರ ಕೃತ್ಯಗಳ ಬಗ್ಗೆ ಜವಾಬ್ದಾರಿ ಸಹಿತವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಉದಾಹರಣೆಗೆ, ಜನವರಿ ತಿಂಗಳಲ್ಲಿ ಭೀಕರವಾದಿಗಳು ಪ್ಯಾರಿಸ್ ನಗರದಲ್ಲಿ ಚಾರ್‌ಲೀ ಹೆಬ್‌ಡೋ ಪತ್ರಿಕೆಯ ಕಚೇರಿಯನ್ನು ಆಕ್ರಮಿಸಿದ ಬಗ್ಗೆ ತಮಗೆ ತಿಳಿದಿದೆ. ಅದು ಅತ್ಯಂತ ಭಯಾನಕ ಕೃತ್ಯವಾಗಿದ್ದು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾದ ಕೆಲಸವಾಗಿತ್ತು. ಆ ದಿನಗಳಲ್ಲಿ ಅಭಿಪ್ರಾಯ ಸ್ವಾತಂತ್ರ್ಯದ ವಿಷಯ ಚರ್ಚಿಸಲ್ಪಟ್ಟಾಗ ಪೋಪ್ ಫ್ರಾನ್ಸಿಸ್ ಹೇಳಿದರು– ನಾವು ಒಬ್ಬರಿನ್ನೊಬ್ಬರನ್ನು ಉದ್ರೇಕಿಸಬಾರದು ಮತ್ತು ಒಬ್ಬರಿನ್ನೊಬ್ಬರ ವಿಶ್ವಾಸವನ್ನು ಅಪಹಾಸ್ಯ ಮಾಡಬಾರದು. ಪ್ರತಿಯೊಂದು ಧರ್ಮದ ಘನತೆಯನ್ನು ಗೌರವಿಸಬೇಕೆಂದೂ ನಾವು ಸಾರ್ವತ್ರಿಕ ಹಿತಕ್ಕೋಸ್ಕರ ಮಾತನಾಡಬೇಕೆಂದೂ ಅವರು ಹೇಳಿದರು. ಅವರು ಸರಿಯಾಗಿಯೇ ಹೀಗೆ ಸಹ ಹೇಳಿದರು: ತನ್ನ ಒಬ್ಬ ಪ್ರಿಯ ಸ್ನೇಹಿತ ತನ್ನ ತಾಯಿಯ ವಿರುದ್ಧ ಒಂದು ಕೆಟ್ಟ ಶಬ್ದ ಹೇಳಿದರೆ ಅವನು ಅದಕ್ಕೆ ಬದಲಾಗಿ ಒಂದು ಗುದ್ದನ್ನು ಪ್ರತೀಕ್ಷಿಸಬೇಕು. ನನ್ನ ಸ್ವಂತ ಅಭಿಪ್ರಾಯವೇನೆಂದರೆ, ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಹಿಷ್ಣುತೆಯನ್ನು ಬೆಂಬಲಿಸಲು ಪೋಪ್ ನಡೆಸಿದ ಪ್ರಾಜ್ಞ ಪ್ರಯತ್ನ ಇದಾಗಿದೆ. ತೀವ್ರವಾದಿ ಕೃತ್ಯಗಳ ಬಗ್ಗೆ ಹೇಳುವುದಾದರೆ, ಅತ್ಯಂತ ಸ್ಪಷ್ಟಪಡಿಸಬೇಕಾದುದೇನೆಂದರೆ ಎಲ್ಲಿಯಾದರೂ ಯಾರಾದರೂ ಅವರ ದ್ವೇಷಭರಿತ ಕ್ರೂರ ಕೃತ್ಯಗಳನ್ನು ಮತ್ತು ಅನ್ಯಾಯಗಳನ್ನು ಇಸ್ಲಾಮಿನ ಹೆಸರಲ್ಲಿ ಸಮರ್ಥಿಸಿದರೆ ಅವರನ್ನು ಖಂಡಿಸಬೇಕು. ಇಸ್ಲಾಮಿನ ಯಥಾರ್ಥ ಮತ್ತು ಶಾಂತಿಯುತ ಉಪದೇಶಗಳಿಗೂ ಅಂತಹ ಕೃತ್ಯಗಳಿಗೂ ಯಾವುದೇ ಸಂಬಂಧವಿಲ್ಲವೆಂದು ಸ್ಪಷ್ಟಪಡಿಸಬೇಕು. ನಾನು ಹಿಂದೆ ಹೇಳಿದ ಹಾಗೆ ಧೋರಣೆಗಳನ್ನು ರೂಪಿಸುವವರು ಮತ್ತು ಸರಕಾರಗಳು ತೀವ್ರವಾದವನ್ನು ತಡೆಯಲು ಈಗ ಎಲ್ಲ ಆವಶ್ಯಕ ಕ್ರಮಗಳನ್ನು ಕೈಗೊಳ್ಳುತ್ತಾ ಇಲ್ಲ ಎಂದು ನಾನು ನಂಬುತ್ತೇನೆ.

ನನ್ನ ಅಭಿಪ್ರಾಯವೇನೆಂದರೆ ಮಹಾಶಕ್ತಿಶಾಲಿ ದೇಶಗಳು ಸ್ಥಳೀಯ ಸರಕಾರಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರಿಗೆ ಸಹಾಯ ನೀಡುವುದು, ಪರಸ್ಪರ ವಿಶ್ವಾಸಾರ್ಹವಾದ ಸಂಬಂಧ ಸ್ಥಾಪಿಸಲು ಪ್ರಯತ್ನಿಸುವುದು ಹೆಚ್ಚು ಪ್ರಯೋಜನಕರವಾಗಿದೆ. ನಿಕಟ ಸಹಕಾರ ಸ್ಥಾಪಿಸುವ ಮೂಲಕ ಮತ್ತು ಜೊತೆಗೂಡಿದ ತಂತ್ರಗಳ ಮೂಲಕ ತೀವ್ರವಾದ ಮತ್ತು ದ್ವೇಷಭರಿತ ತತ್ವಗಳ ಪ್ರಚಾರವನ್ನು ತಡೆಗಟ್ಟಬಹುದಾಗಿದೆ. ವಿದೇಶಗಳ ವಿದ್ರೋಹಿಗಳಿಗೆ ಸೈನಿಕ ತರಬೇತಿ ಮತ್ತು ಆಯುಧಗಳನ್ನು ನೀಡಿ ಸ್ಥಳೀಯ ಸರಕಾರಗಳ ವಿರುದ್ಧ ಹೋರಾಡಲು ಸಹಾಯ ಮಾಡುವುದಕ್ಕಿಂತ ಮೇಲೆ ವಿವರಿಸಿದಂತೆ ಮಾಡುವುದು ಹೆಚ್ಚು ಪರಿಣಾಮಕಾರಿಯಾಗಿದೆ. ಶಕ್ತಿಶಾಲಿ ರಾಷ್ಟ್ರಗಳ ಪ್ರಚಲಿತ ಧೋರಣೆ ಇಂದು ಜಾರಿಯಲ್ಲಿರುವ ಸಂಘರ್ಷಗಳನ್ನು ವರ್ಧಿಸುವಂತಹದು ಆಗಿದೆ. ಈ ಧೋರಣೆಯ ಅಪಾಯ ಮತ್ತು ಅವಿವೇಕತನವನ್ನು ನಾವು ಈಗಾಗಲೇ ಕಂಡಿದ್ದೇವೆ. ಸ್ವಲ್ಪ ಕಾಲದ ಹಿಂದೆ ಕೆಲವು ಶಕ್ತಿಶಾಲಿ ದೇಶಗಳು ಸಿರಿಯಾದ ವಿರೋಧಿ ಗುಂಪಿಗೆ ಸೈನಿಕ ತರಬೇತಿ ನೀಡಿದುವು. ಅನಂತರ ಈ ವಿದ್ರೋಹಿಗಳಲ್ಲಿ ಹಲವರು ತಮಗೆ ಹೊಸದಾಗಿ ಲಭಿಸಿದ ಆಯುಧಗಳೊಂದಿಗೆ ಭೀಕರವಾದಿ ಗುಂಪುಗಳೊಂದಿಗೆ ಸೇರಿರುವುದಾಗಿ ವರದಿಯಾಗಿದೆ. ಈ ಪೂರ್ವ ನಿದರ್ಶನವಿದ್ದರೂ ಸಾವಿರಾರು ಸಿರಿಯನ್ ವಿದ್ರೋಹಿಗಳಿಗೆ ಟರ್ಕಿ, ಖತರ್ ಮತ್ತು ಸೌದಿ ಅರೇಬಿಯದಲ್ಲಿ ಸೈನಿಕ ತರಬೇತಿ ನೀಡುವುದಾಗಿ ಘೋಷಿಸಲಾಗಿದೆ.

ಆದರೆ ನಾನು ನಂಬುವುದೇನೆಂದರೆ ಈ ಶಕ್ತಿಶಾಲಿ ದೇಶಗಳು ಸ್ಥಳೀಯ ಸರಕಾರಗಳೊಂದಿಗೆ ಸಂಬಂಧ ಸ್ಥಾಪಿಸಿ ತೀವ್ರವಾದವನ್ನು ಕೊನೆಗೊಳಿಸಲು ಅವರಿಗೆ ಸಹಾಯ ಮಾಡುತ್ತಿದ್ದರೆ ಅದು ಉತ್ತಮವಾಗುತ್ತಿತ್ತು. ಸ್ಥಳೀಯ ಸರಕಾರಗಳು ತಮ್ಮ ನಾಗರಿಕರಿಗೆ ಸೇವೆ ಸಲ್ಲಿಸುವುದಾಗಿ ಮತ್ತು ನಾಗರಿಕರ ಹಕ್ಕುಗಳನ್ನು ಯಾವುದೇ ರೀತಿಯಲ್ಲಿ ಕಸಿದುಕೊಳ್ಳಲಾಗದೆಂದು ಅವರಿಂದ ಖಾತರಿ ಪಡೆದ ನಂತರ ಈ ಸಹಾಯ ನೀಡಬಹುದಾಗಿದೆ. ಸಿರಿಯಾ, ಇರಾಖ್ ಮತ್ತು ಬೇರೆ ಕೆಲವು ದೇಶಗಳಲ್ಲಿ ಜನರು ತಮ್ಮ ಸರಕಾರಗಳ ವಿರುದ್ಧ ಹೋರಾಡಿದಾಗ ದೇಶದ ಕೆಲವು ಪ್ರದೇಶಗಳಲ್ಲಿ ಅಧಿಕಾರ ಶೂನ್ಯತೆ ತಲೆದೋರಿತು. ಈ ಪರಿಸ್ಥಿತಿಯನ್ನು ತೀವ್ರವಾದಿಗಳು ತಮ್ಮ ಪ್ರಯೋಜನಕ್ಕೆ ಬಳಸಿಕೊಂಡರು. ಆಂತರಿಕ ಕ್ಷೋಭೆ ಮತ್ತು ಅರಾಜಕತೆಯು ಆ ದೇಶಗಳಲ್ಲಿ ಭೀಕರವಾದಿ ಸಂಘಟನೆಗಳು ತಮ್ಮ ನೆಲೆಯೂರುವಂತೆ ಮಾಡಿದವು ಮತ್ತು ತಮ್ಮ ಬೆಳವಣಿಗೆಗೆ ಪರಿಪೂರ್ಣವಾಗಿ ಹಿತಕರವಾದ ಪರಿಸರವನ್ನು ನಿರ್ಮಿದವು. ನಾನು ಇದರ ಮೊದಲು ಹೇಳಿದ ಹಾಗೆ ಯುರೋಪು, ಆಸ್ಟ್ರೇಲಿಯಾ, ಚೀನದಿಂದಲೂ ಲೋಕದ ಬೇರೆ ಪ್ರದೇಶಗಳಿಂದಲೂ ಜನರು ತಮ್ಮ ದೇಶ ತೊರೆದು ಐಎಸ್‌ಐಎಸನ್ನು ಸೇರಲು ಹೊರಟಿದ್ದಾರೆ. ಅದರ ದೂರಗಾಮಿ ಪರಿಣಾಮ ಯುರೋಪಿನಲ್ಲೂ ಪಶ್ಚಿಮದಲ್ಲೂ ಖಂಡಿತವಾಗಿಯೂ ಅನುಭವಕ್ಕೆ ಬರುವುದು. ಆದುದರಿಂದ ಇದು ಕೇವಲ ಮುಸ್ಲಿಮರಿಗೆ ಮಾತ್ರ ಆತಂಕಕಾರಿಯಾದ ವಿಷಯವಲ್ಲ. ಇದೊಂದು ಜಾಗತಿಕ ಸಮಸ್ಯೆಯಾಗಿದೆ ಮತ್ತು ಅದು ಲೋಕದಲ್ಲಿ ಸಂಘರ್ಷ ವರ್ಧಿಸಲು ಶಕ್ತಿ ಹೊಂದಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ತೀವ್ರವಾದವನ್ನು ತಡೆಯಲು ಮಾಡಲಾಗುತ್ತಿರುವ ಕ್ರಮಗಳು ಫಲಕಾರಿಯಾಗಿಲ್ಲ. ನಾವು ಲಿಬ್ಯಾ ದೇಶದ ಕಡೆಗೆ ನೋಡುವುದಾದರೆ, ಕೆಲವು ವರ್ಷಗಳ ಹಿಂದೆ ಕೆಲವು ಶಕ್ತಿಶಾಲಿ ದೇಶಗಳು ಸ್ಥಳೀಯ ವಿದ್ರೋಹಿಗಳಿಗೆ ಸಹಾಯ ನೀಡಿ ಗದ್ದಾಫಿಯನ್ನು ಅಧಿಕಾರಚ್ಯುತನನ್ನಾಗಿ ಮಾಡಿದುವು. ಆದರೆ ಇದರಿಂದ ಗಳಿಸಿದುದೇನು? ಲಿಬ್ಯಾ ದೇಶದ ಜನರಿಗೆ ಯಾವುದಾದರೂ ಲಾಭ ಅಥವಾ ಪ್ರಯೋಜನ ಉಂಟಾಯಿತೇ? ಖಂಡಿತವಾಗಿಯೂ ಇಲ್ಲ! ಆ ದೇಶವನ್ನು ಧ್ವಂಸಗೊಳಿಸಲಾಗಿದೆ, ವಿಭಜಿಸಲ್ಪಟ್ಟಿದೆ ಮತ್ತು ಹಾಳುಗೆಡವಲಾಗಿದೆ. ಅದು ಭೀಕರತೆ ಮತ್ತು ಅಸ್ಥಿರತೆ ಬೆಳವಣಿಗೆ ಹೊಂದುವ ಕ್ಷೇತ್ರವಾಗಿದೆ. ಗದ್ದಾಫಿಯು ಜನಿಸಿದ ಪಟ್ಟಣ ಸಹ ಈಗ ಐಎಸ್‌ಐಎಎಸ್‌ನೊಂದಿಗೆ ಜೋಡಣೆ ಹೊಂದಿರುವ ಉಗ್ರವಾದಿಗಳ ನಿಯಂತ್ರಣದಲ್ಲಿದೆ ಎಂದು ಹೇಳಲಾಗಿದೆ. ಈ ಪಟ್ಟಣ ಇಟೆಲಿಯ ಕರಾವಳಿಯಿಂದ ಕೇವಲ ಮುನ್ನೂರು

ಮೈಲು ದೂರದಲ್ಲಿದೆ. ವಿಶ್ಲೇಷಕರು ಹೇಳುವುದೇನೆಂದರೆ, ಈ ರೀತಿಯಲ್ಲಿ ಉಗ್ರವಾದಿಗಳು ಯುರೋಪಿನ ಮನೆಬಾಗಿಲನ್ನು ತಲಪಿದಂತೆ ಆಗಿದೆ.

ನಾವು ಪೂರ್ವ ಯುರೋಪಿನ ಕಡೆಗೆ ನೋಡುವುದಾದರೆ, ಅಲ್ಲಿಂದ ತೀವ್ರವಾದಿಗಳಾದ ವ್ಯಕ್ತಿಗಳು ಸಿರಿಯಾ ಮತ್ತು ಇರಾಖ್‌ಗೆ ಹೋಗುತ್ತಾರಲ್ಲದೆ ಅವರು ಉಗ್ರವಾದಿ ಗುಂಪುಗಳನ್ನು ಸೇರಲು ಅಫ್‌ಘಾನಿಸ್ಥಾನಕ್ಕೂ ಪಾಕಿಸ್ಥಾನಕ್ಕೂ ಹೋಗುತ್ತಾರೆ. ನಿಶ್ಚಯವಾಗಿಯೂ ಅಫ್‌ಘಾನಿಸ್ಥಾನ ಮತ್ತು ಪಾಕಿಸ್ಥಾನ ದೀರ್ಘಕಾಲದಿಂದ ಅತ್ಯಂತ ಅಸ್ಥಿರ ದೇಶಗಳಾಗಿವೆ. ಅಲ್ಲಿ ಭೀಕರವಾದ ಮತ್ತು ತೀವ್ರವಾದ ಜಾರಿಯಲ್ಲಿದೆ. ಇದು ನಿರಂತರವಾಗಿ ಬಹಳ ಆತಂಕಪಡಬೇಕಾದ ವಿಷಯವಾಗಿದೆ. ನಾವು ಆಫ್ರಿಕದ ಕಡೆಗೆ ನೋಡುವುದಾದರೆ, ಬೋಕೋ ಹರಾಮ್ ಮತ್ತು ಅಲ್ ಶಬಾಬ್‌ನಂತಹ ಉಗ್ರವಾದಿ ಗುಂಪುಗಳು ಸಂಪೂರ್ಣವಾಗಿ ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿ ವರ್ತಿಸುತ್ತಿವೆ ಮತ್ತು ಅತ್ಯಂತ ಬರ್ಬರ ಕ್ರೂರಕೃತ್ಯಗಳನ್ನು ನಡೆಸುತ್ತಿವೆ. ಇವುಗಳ ದೂರಗಾಮಿ ಪರಿಣಾಮಗಳು ಆಫ್ರಿಕನ್ ದೇಶಗಳಿಗೆ ಸೀಮಿತವಾಗಲಾರವು. ಅದರ ದುಷ್ಪರಿಣಾಮಗಳು ಲೋಕದಾದ್ಯಂತ ವ್ಯಾಪಿಸುವುವು.

ನಾವು ಅಸ್ತವ್ಯಸ್ತತೆಯನ್ನೂ ಸಂಘರ್ಷವನ್ನೂ ಕಾಣುವುದು ಮುಸ್ಲಿಮ್ ಲೋಕದಲ್ಲಿ ಮಾತ್ರವಲ್ಲ. ಉದಾಹರಣೆಗೆ, ಉಕ್ರೈನ್‌ಗೆ ಸಂಬಂಧಿಸಿದ ಪರಿಸ್ಥಿತಿ ಬಗ್ಗೆ ತೀರ್ಮಾನವಾಗಿಲ್ಲ ಮತ್ತು ಅದು ಬಹಳ ಅಪಾಯಕರವಾಗಿ ಮುಂದುವರಿಯುತ್ತಿದೆ. ತಾತ್ಕಾಲಿಕ ಕದನ ವಿರಾಮಕ್ಕೆ ಇತ್ತೀಚೆಗೆ ಒಪ್ಪಂದವಾಗಿದ್ದರೂ ಸಂಘರ್ಷವು ಮುಂದೆ ವರ್ಧಿಸುವ ಬಗ್ಗೆ ಮತ್ತು ಯುದ್ಧ ಸಂಭವಿಸುವ ಬಗ್ಗೆ ನಿರಾಕರಿಸಲಾಗದು. ಆ ಪ್ರದೇಶ ಒಡ್ಡುವ ಬೆದರಿಕೆಯನ್ನು ಪ್ರಮುಖ ಶಕ್ತಿ ರಾಷ್ಟ್ರಗಳು ಕಡಿಮೆ ಮಟ್ಟದಲ್ಲಿ ಅಂದಾಜು ಮಾಡುವುದು ಅವಿವೇಕತನವಾಗಿದೆ. ಶೀತಯುದ್ಧ ಕೊನೆಗೊಂಡು ಇಪ್ಪತ್ತೈದು ವರ್ಷಗಳ ನಂತರ ರಾಜಕೀಯ ಸಂಘರ್ಷಗಳು ಮತ್ತು ಇತರ ಗಂಭೀರ ವಿಷಯಗಳು ಆ ಪ್ರದೇಶವನ್ನು ಪುನಃ ಆವರಿಸಿರುವ ಬಗ್ಗೆ ಬಹಳ ಬರೆಯಲಾಗಿದೆ. ಆರ್ಥಿಕ ಪರಿಸ್ಥಿತಿ ಅವುಗಳಲ್ಲಿ ಒಂದಾಗಿದೆ ಮತ್ತು ಅದನ್ನು ನಿರ್ಲಕ್ಷಿಸಲಾಗದು.

ಗಮನಾರ್ಹವಾದ ಇನ್ನೊಂದು ವಿಷಯವೇನೆಂದರೆ ವಿವಿಧ ಸರಕಾರಗಳು ತಮ್ಮ ಸೈನ್ಯಕ್ಕೋಸ್ಕರ ಮಾಡುವ ಖರ್ಚು ವೆಚ್ಚಗಳು ವರ್ಧಿಸುತ್ತಾ ಇವೆ. ಉದಾಹರಣೆಗೆ, ಚೀನ ಸರಕಾರ ತನ್ನ ಮಿಲಿಟರಿ ಬಜೆಟನ್ನು ಬಹಳ ವಿಶಾಲವಾಗಿ ಮುಂದಿನ ವರ್ಷ ವರ್ಧಿಸುವುದಾಗಿ ಇತ್ತೀಚೆಗೆ ಘೋಷಿಸಿದೆ. ಆದರೆ ಚೀನದ ಮಿಲಿಟರಿ ಬಜೆಟ್ ಇತರ ದೊಡ್ಡ ದೇಶಗಳ ಮಿಲಿಟರಿ ಬಜೆಟ್‌ಗಿಂತ ಆಗ ಸಹ ಕಡಿಮೆಯೇ ಆಗಿರುವುದು. ನಾನು ಸೂಚಿಸುವ ವಿಷಯವೇನೆಂದರೆ, ತಮ್ಮ ಪ್ರತಿರೋಧ ವ್ಯವಸ್ಥೆಗೋಸ್ಕರ ಖರ್ಚು ಮಾಡುವುದರಲ್ಲಿ ಒಬ್ಬರಿನ್ನೊಬ್ಬರಿಗಿಂತ ಮೇಲಾಗಲು ಅವರು ಸ್ಪರ್ಧಿಸುತ್ತಿದ್ದಾರೆ. ಮಿಲಿಟರಿ ಬಜೆಟನ್ನು ವರ್ಧಿಸುವ ಈ ಓಟ ನಿಷ್ಕಾರಣವಾಗಿ ಅಲ್ಲ. ಅದಕ್ಕೆ ಉದ್ದೇಶಲಕ್ಷ್ಯಗಳಿವೆ. ನಮಗೆ ವಾಸ್ತವಿಕವಾಗಿ ಶಾಂತಿ ಲಭಿಸಬೇಕಾದರೆ ಸಂಯುಕ್ತರಾಷ್ಟ್ರ ಸಂಘ ಮತ್ತು ಶಕ್ತಿಶಾಲಿ ದೇಶಗಳು ತುರ್ತಾಗಿ ಈ ವಿಷಯಗಳನ್ನು ನ್ಯಾಯ ಮತ್ತು ಉತ್ತಮ ರೀತಿಯಲ್ಲಿ ನಿಭಾಯಿಸಬೇಕಾದುದು ಆವಶ್ಯಕವಾಗಿದೆ.

ಮಧ್ಯ ಪೂರ್ವದ ಪರಿಸ್ಥಿತಿಯ ಬಗ್ಗೆ ವೀಕ್ಷಿಸುವುದಾದರೆ, ಇಸ್ರಾಯೇಲ್ ಮತ್ತು ಪಾಲೆಸ್ತೀನ್ ಮಧ್ಯೆ ದ್ವೇಷ ಮತ್ತು ಹಗೆತನ ನಿರಂತರವಾಗಿ ವರ್ಧಿಸುತ್ತಾ ಇರುವುದಾಗಿ ಕಾಣುತ್ತೇವೆ. ಅನೇಕ ಮಧ್ಯ ವಿರಾಮಗಳ ನಂತರ ಈ ಹಗೆತನ ಬುದ್ಧಿಹೀನವಾದ ಹಿಂಸೆ ಮತ್ತು ರಕ್ತಪಾತವಾಗಿ ಸ್ಫೋಟಿಸುತ್ತದೆ. ಇಸ್ರಾಯೇಲ್ ಮತ್ತು ಇರಾನ್ ಮಧ್ಯದ ಸಂಬಂಧ ಸಹ ಅತ್ಯಂತ ಚಂಚಲವಾಗಿದೆ ಎಂದು ನಮಗೆ ತಿಳಿದಿದೆ.

ದೀರ್ಘಕಾಲದಿಂದ ದೇಶಗಳ ಮಧ್ಯೆ ವಿಶ್ವಾಸವು ಇಲ್ಲದುದರಿಂದ ಪರಸ್ಪರ ಹಗೆತನ ದಿನಂಪ್ರತಿ ವರ್ಧಿಸುವುದಾಗಿ ಕಾಣುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಲೋಕದ ಬಹುತೇಕ ಭಾಗವು ಅಸ್ತವ್ಯಸ್ತತೆಯಲ್ಲೂ ಸಂಘರ್ಷದಲ್ಲೂ ಆವರಿಸಲ್ಪಟ್ಟಿರುತ್ತದೆ. ಮಾನವರನ್ನು ಈ ಹತಾಶ ಪರಿಸ್ಥಿತಿಯಿಂದ ಮುಕ್ತರನ್ನಾಗಿ ಮಾಡಲು ಲೋಕವು ಪರಿಣಾಮಕಾರಿಯಾದ ಯೋಜನೆಯನ್ನು ಅಥವಾ ಉಪಾಯವನ್ನು ರೂಪಿಸುವುದರಲ್ಲಿ ಸೋತು ಹೋಗಿರುವುದು ವಿಷಾದಕರವಾಗಿದೆ.

ಸಂಘರ್ಷಗಳ ಮೂಲ ಕಾರಣಗಳು ಯಾವುವು ಎಂಬುದರ ಬಗ್ಗೆ ನಿರ್ಲಕ್ಷಿಸಲಾಗುತ್ತಿದೆ ಅಥವಾ ಅವುಗಳ ಬಗ್ಗೆ ಆವಶ್ಯವಾಗಿರುವಷ್ಟು ಶ್ರದ್ಧೆ ನೀಡುತ್ತಾ ಇಲ್ಲ. ಪ್ರತಿಯೊಂದು ದೇಶ ತನ್ನ ಧೋರಣೆ ಸರಿ ಎಂದೂ ಅನ್ಯರದು ತಪ್ಪೆಂದೂ ನಂಬುತ್ತಾ ಇದೆ. ಅನೇಕ ದೇಶಗಳು ಭಾವಿಸುವುದೇನೆಂದರೆ ಲೋಕದ ಬೇರೆ ಕಡೆಗಳಲ್ಲಿ ಸಂಭವಿಸುತ್ತಿರುವ ಘಟನೆಗಳು ತಮ್ಮನ್ನು ಬಾಧಿಸದು. ಇಂತಹ ನಂಬಿಕೆಗಳು ಮತ್ತು ಗ್ರಹಿಕೆಗಳು ತಪ್ಪಾಗಿವೆ ಮತ್ತು ಹಾನಿಕಾರವಾಗಿ ಪರಿಣಮಿಸುವವುಗಳಾಗಿವೆ. ಶಾಂತಿ ಸ್ಥಾಪನೆಗೆ ಪ್ರಯತ್ನಗಳನ್ನು ಮಾಡಿದರೂ ಅವುಗಳು ಹೆಚ್ಚಾಗಿ ನಿಷ್ಫಲವಾಗುತ್ತವೆ. ಏಕೆಂದರೆ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡ ಕಾರ್ಯವಿಧಾನಗಳಿಗೆ ಅನಾವಶ್ಯಕವಾಗಿ ದೀರ್ಘಕಾಲ ಬೇಕಾಗುತ್ತದೆ. ಆದುದರಿಂದ ನಾವು ನಮ್ಮ ಈಗಿನ ತುರ್ತು ಆವಶ್ಯಕತೆ ಬಗ್ಗೆ ಮನವರಿಕೆ ಮಾಡಬೇಕಾಗಿದೆ. ಯಾವುದಾದರೂ ಒಂದು ವಿಷಮ ಪರಿಸ್ಥಿತಿಯನ್ನು ಹತೋಟಿಗೆ ತರಲು ಯೋಜನೆ ಕೈಗೊಳ್ಳುವಾಗ ಅದಕ್ಕೆ ಅತ್ಯಂತ ಕನಿಷ್ಠ ಸಮಯವನ್ನು ನಿಗದಿಪಡಿಸಬೇಕಾಗಿದೆ.

ಪ್ರಾಮಾಣಿಕತೆ, ಭಾವೈಕ್ಯತೆ ಮತ್ತು ನ್ಯಾಯಗಳ ಬಲಿಷ್ಠ ಅಸ್ತಿಭಾರದ ಮೇಲೆ ಮಾತ್ರ ಶಾಂತಿಯನ್ನು ಸ್ಥಾಪಿಸಲು ಸಾಧ್ಯ ಎಂದು ನಾವು ಅಂಗೀಕರಿಸಬೇಕಾದುದು ಆವಶ್ಯಕವಾಗಿದೆ. ಇವುಗಳು ಶಾಂತಿಗೆ ಇರುವ ಕೀಲಿಗೈಗಳಾಗಿವೆ. ಪ್ರಾಮಾಣಿಕತೆ ಮತ್ತು ನ್ಯಾಯಪಾಲನೆ ರಹಿತವಾದ ಪರಿಹಾರ ಎಂದೂ ಪ್ರಯೋಜನಕರವಾಗದು.

ನಮ್ಮ ಜಮಾಅತ್ ಬಗ್ಗೆ ಹೇಳುವುದಾದರೆ ನಮಗೆ ಶಕ್ತಿಯಾಗಲಿ

ಜಾಗತಿಕ ಪ್ರಭಾವವಾಗಲಿ ಇಲ್ಲ. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಉದ್ದೇಶಲಕ್ಷ್ಯಗಳು ಪೂರ್ಣವಾಗಿ ಆಧ್ಯಾತ್ಮಿಕವಾಗಿದೆ. ನಾವು ಅಧಿಕಾರವನ್ನಾಗಲೀ ಸರಕಾರವನ್ನಾಗಲೀ ಆಶಿಸುವುದಿಲ್ಲ. ನಮಗೆ ಯಾವುದೇ ರಾಜಕೀಯ ಹಂಬಲವಾಗಲಿ, ಉದ್ದೇಶಲಕ್ಷ್ಯವಾಗಲಿ ಇಲ್ಲ. ಒಂದು ಧಾರ್ಮಿಕ ಸಂಘಟನೆ ಆಗಿರುವ ನಾವು ಆಶಿಸುವುದೇನೆಂದರೆ ಲೋಕವು ತನ್ನ ಸೃಷ್ಟಿಕರ್ತನನ್ನು ಗುರುತಿಸಬೇಕು ಮತ್ತು ಜನರು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿಕೊಡಬೇಕು ಎಂದು ಮಾತ್ರ. ಈ ಎರಡು ಉದ್ದೇಶಲಕ್ಷ್ಯಗಳನ್ನು ಈಡೇರಿಸಲು ನಾವು ನಮಗೆ ಸಾಧ್ಯವಿರುವ ಪ್ರಯತ್ನಗಳನ್ನು ಲೋಕದ ಎಲ್ಲ ಭಾಗಗಳಲ್ಲೂ ಮಾಡುತ್ತಿದ್ದೇವೆ. ಲೋಕದಲ್ಲಿ ಸಂಭವಿಸುತ್ತಿರುವ ಹಿಂಸಾಚಾರ ಮತ್ತು ಅಸ್ತವ್ಯಸ್ತತೆಗೆ ಇಸ್ಲಾಮ್ ಧರ್ಮ ತತ್ವಗಳೊಂದಿಗೆ ಯಾವ ಸಂಬಂಧವೂ ಇಲ್ಲವೆಂದು ನಾವು ಲೋಕದ ಜನರಿಗೆ ತಿಳಿಸಲು ಬಯಸುತ್ತೇವೆ.

ಲೋಕದಲ್ಲಿ ಶಾಂತಿ ಸ್ಥಾಪನೆ ಬಗ್ಗೆ ಇಸ್ಲಾಮ್ ಧರ್ಮದ ಕೆಲವು ಮೂಲತತ್ವಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಆದರೆ ಅದರ ಮೊದಲು ನಾನು ಒಂದು ವಿಷಯವನ್ನು ಸ್ಪಷ್ಟಪಡಿಸಲು ಬಯಸುತ್ತೇನೆ. ಇಂದಿನ ಲೋಕದ ಅಸ್ತವ್ಯಸ್ತತೆಗೆ ಇಸ್ಲಾಮ್ ಅಥವಾ ಮುಸ್ಲಿಮರು ಮಾತ್ರ ಕಾರಣ ಎಂದು ದೂಷಿಸಲಾಗದು. ಲೋಕದ ಅನೇಕ ಕಡೆಗಳಲ್ಲಿ ಅಶಾಂತಿಯನ್ನು ಹಬ್ಬಿಸಲು ಪ್ರಯತ್ನಿಸುವ ಅನೇಕ ಬೇರೆ ಕಾರಣಗಳು ಮತ್ತು ಘಟಕಗಳು ವಾಸ್ತವಿಕವಾಗಿ ಇವೆ. ನ್ಯಾಯ ಮತ್ತು ಪ್ರಾಮಾಣಿಕತೆಗೆ ಆದ್ಯತೆ ನೀಡಿದರೆ ಮಾತ್ರ ನಾವು ನೈಜ ಲೋಕ ಶಾಂತಿ ಮತ್ತು ಸೌಹಾರ್ದದ ಕಡೆಗೆ ಸಾಗಲು ಸಾಧ್ಯವೆಂದು ನಾನು ಇದರ ಮೊದಲು ಸೂಚಿಸಿದ್ದೇನೆ. ಪ್ರಮುಖ ಶಕ್ತಿಶಾಲಿ ದೇಶಗಳು ಮತ್ತು ಕೆಲವು ರಾಜಕೀಯ ಮತ್ತು ಧಾರ್ಮಿಕ ನಾಯಕರು ದುರಾಶೆಯಿಂದಲೂ ಸ್ವಾರ್ಥ ಹಿತಾಸಕ್ತಿಗಳಿಂದಲೂ ಪ್ರೇರೇಪಿಸಲ್ಪಡುತ್ತಿದ್ದಾರೆ ಎಂಬುದರ ಬಗ್ಗೆ ಸಂಶಯವಿಲ್ಲ. ಅವರ ಸ್ವಾರ್ಥ ಆಶಾಭಿಲಾಷೆಗಳು ಲೋಕದ ಇಂದಿನ ಆತಂಕಕಾರಿ ಪರಿಸ್ಥಿತಿಗೆ ತಮ್ಮ ಕೊಡುಗೆಗಳನ್ನು ನೀಡಿವೆ. ಆದುದರಿಂದ ಅವರು ಸಹ ಲೋಕದ ಇಂದಿನ ಅಸ್ತವ್ಯಸ್ತತೆಗೆ ಹೊಣೆಗಾರರಾಗಿದ್ದಾರೆ. ಲೋಕದಲ್ಲಿ ವಿವಿಧ ವಿಷಯಗಳ ಕಾರಣದಿಂದ ಆಶಾಭಂಗಗಳು ಮತ್ತು ಕೋಪಾಟೋಪಗಳು ಸಂಭವಿಸುತ್ತಿವೆ. ಅವುಗಳು ಶಾಂತಿಯನ್ನು ಕೆಡಿಸುತ್ತಿವೆ. ಉದಾಹರಣೆಗೆ, ಆರ್ಥಿಕ ಬಿಕ್ಕಟ್ಟಿನ ದುಷ್ಪರಿಣಾಮಗಳು ಲೋಕದ ಬಹುಭಾಗದಲ್ಲಿ ಮುಂದುವರಿಯುತ್ತಿದೆ. ಯುರೋಪಿನಲ್ಲಿ ಅತೃಪ್ತಿ ವರ್ಧಿಸುತ್ತಾ ಇದೆ. ಯುರೋಪಿಯನ್ ಐಕ್ಯತೆಗೆ ಪಂಥಾಹ್ವಾನ ನೀಡಲಾಗುತ್ತಿದೆ ಮತ್ತು ಅದನ್ನು ದುರ್ಬಲಗೊಳಿಸಲಾಗುತ್ತಿದೆ. ವಲಸೆಗಾರರಿಗೆ ವಿರುದ್ಧವಾಗಿರುವ ಅಥವಾ ರಾಷ್ಟ್ರೀಯ ಪಕ್ಷಗಳು ಅನೇಕ ದೇಶಗಳಲ್ಲಿ ಜನಬೆಂಬಲ ಗಳಿಸುತ್ತಾ ಇವೆ. ಉಕ್ರೈನಿನ ಸಂಘರ್ಷ ಮತ್ತು ಆಯುಧಗಳ ಸಂಗ್ರಹಕ್ಕಾಗಿ ಶಕ್ತಿರಾಷ್ಟ್ರಗಳ ಓಟದ ಬಗ್ಗೆ ನಾನು ಪ್ರಸ್ತಾಪಿಸಿದ್ದೇನೆ. ಇವುಗಳು ಲೋಕದಲ್ಲಿ ಶಾಂತಿ ಸ್ಥಾಪಿಸಲು ಬೆದರಿಕೆ ಒಡ್ಡುತ್ತಿವೆ. ಇವುಗಳಿಗೆ ಇಸ್ಲಾಮ್‌ನೊಂದಿಗೆ ಯಾವ ಸಂಬಂಧವೂ ಇಲ್ಲ. ಅಧಿಕಾರ ಪ್ರಭಾವ ಮತ್ತು ಸಂಪನ್ಮೂಲಗಳನ್ನು ಗಳಿಸಲು ಶಕ್ತಿಶಾಲಿ ರಾಷ್ಟ್ರಗಳು ಹೊಂದಿರುವ ನಿವಾರಿಸಲಾಗದ ದಾಹದಿಂದ ಇವು ಸಂಭವಿಸಿವೆ. ನಾವು ಪ್ರಮುಖ ಶಕ್ತಿಶಾಲಿ ರಾಷ್ಟ್ರಗಳ ಧೋರಣೆಗಳನ್ನು ಪರಿಶೀಲಿಸಿದರೆ ನಾವು ಕಾಣುವುದೇನೆಂದರೆ, ಅವರು ಬಾಹ್ಯವಾಗಿ ಬಲಹೀನ ದೇಶಗಳನ್ನು ಸ್ವಾಧೀನಪಡಿಸುವುದಿಲ್ಲವಾದರೂ ಅವರು ಆ ಬಲಹೀನ ದೇಶಗಳ ಮೇಲೆ ಅನುಚಿತ ಪ್ರಭಾವ ಬೀರುತ್ತಾರೆ. ಅವುಗಳ ಮೇಲೆ ತಮ್ಮ ನಿಯಂತ್ರಣ ಹೇರಿ ಅವುಗಳ ಸಂಪನ್ಮೂಲಗಳನ್ನು ತಮ್ಮ ಲಾಭಕ್ಕೆ ಬಳಸುತ್ತಾರೆ. ಇದು ನಾನು ಹೇಳುವ ಹೊಸದಾದ ವಿಷಯವೇನೂ ಅಲ್ಲ. ಇದು ಎಲ್ಲರಿಗೂ ಕಾಣುವುದೇ ಆಗಿದೆ.

ಲೋಕದಲ್ಲಿ ಎಲ್ಲಿ ಸಂಘರ್ಷ ಮತ್ತು ಹಿಂಸಾಚಾರ ಇವೆಯೋ – ಅವು ಇಸ್ಲಾಮ್ ಧರ್ಮದ ಹೆಸರಲ್ಲಿ ಅಥವಾ ಬೇರೆ ರೀತಿಯಲ್ಲಿ ಜರಗಿಸಲಾಗುತ್ತಿದ್ದರೂ – ಸತ್ಯವೇನೆಂದರೆ ಈ ಅಪರಾಧಗಳನ್ನು ಮಾಡುವವರು ಯಾವುದೇ ಧರ್ಮದಿಂದ ಪ್ರೇರೇಪಿಸಲ್ಪಟ್ಟವರಾಗಿರುವುದಿಲ್ಲ. ಅವರು ಸ್ವತಃ ಅಧಿಕಾರ ಗಳಿಸುವ ಹಂಬಲ ಹೊಂದಿದವರಾಗಿರುತ್ತಾರೆ.

ನಾವು ಈ ಎಲ್ಲ ವಿಷಯಗಳ ಬಗ್ಗೆ ಚಿಂತಿಸಿದರೆ ಅದು ಪ್ರಜ್ಞಾವಂತನಾದ ಪ್ರತಿಯೊಬ್ಬನನ್ನು ಲೋಕವು ಲೌಕಿಕ ಸಂಪತ್ತು ಗಳಿಸುವ ಆಶೆಯಿಂದ ಯಾವ ಕಡೆಗೆ ಸಾಗುತ್ತಿದೆ ಎಂಬುದನ್ನು ಪ್ರಶ್ನಿಸಲು ನಿರ್ಬಂಧಿಸುತ್ತದೆ. ಇಸ್ಲಾಮ್ ಧರ್ಮದ ಬಗ್ಗೆ ಹೇಳುವುದಾದರೆ ಇಂದಿನ ಕಾಲಘಟ್ಟದಲ್ಲಿ ಇಸ್ಲಾಮ್ ಧರ್ಮ ತತ್ವಗಳನ್ನು ತಪ್ಪಾಗಿ ವಿಕೃತವಾಗಿ ನಿರಂತರವಾಗಿ ವ್ಯಾಖ್ಯಾನಿಸಲಾಗುತ್ತಿದೆ. ಇಸ್ಲಾಮ್ ಹಿಂಸಾಚಾರಭರಿತ ಜಿಹಾದನ್ನೂ ರಕ್ತಪಾತವನ್ನೂ ಪ್ರೋತ್ಸಾಹಿಸುತ್ತದೆ ಎಂದು ಹೇಳಲಾಗುತ್ತಿದೆ. ಆದರೆ ಇದು ಸತ್ಯಕ್ಕೆ ದೂರವಾದ ಮಾತಾಗಿದೆ. ನಾನು ಸ್ಪಷ್ಟಪಡಿಸಲು ಬಯಸುವುದೇನೆಂದರೆ, ಆದ್ಯಕಾಲದ ಮುಸ್ಲಿಮರಿಗೆ ಹೋರಾಡಲು ಸರ್ವಶಕ್ತನಾದ ಅಲ್ಲಾಹನು ಅನುಮತಿ ನೀಡಿದ್ದನು. ಆದರೆ ಈ ಅನುಮತಿ ನೀಡಿದುದು ಕೇವಲ ಮುಸ್ಲಿಮರನ್ನು ಮತ್ತು ಇಸ್ಲಾಮನ್ನು ಸಂರಕ್ಷಿಸಲು ಮಾತ್ರವಾಗಿರಲಿಲ್ಲ. ವಾಸ್ತವಿಕವಾಗಿ ಒಂದು ಪ್ರತಿರೋಧಕ ಯುದ್ಧ ಮಾಡಲು ಅನುಮತಿ ನೀಡಲಾಗಿತ್ತು. ಎಲ್ಲ ಜನರ ಧಾರ್ಮಿಕ ಸ್ವಾತಂತ್ರ್ಯವನ್ನು ರಕ್ಷಿಸಲು ಆ ಅನುಮತಿಯನ್ನು ನೀಡಲಾಗಿತ್ತು. ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 40–41ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳಿರುವುದೇನೆಂದರೆ, ಮುಸ್ಲಿಮರು ಆ ಸಂದರ್ಭದಲ್ಲಿ ತಮ್ಮನ್ನು ಆಕ್ರಮಿಸುವವರನ್ನು ಪ್ರತಿರೋಧಿಸಲು ಯುದ್ಧ ಮಾಡದೆ ಇರುತ್ತಿದ್ದರೆ ಚರ್ಚ್‌ಗಳು, ಯಹೂದಿ ದೇವಾಲಯಗಳು, ಮಸ್‌ಜಿದ್‌ಗಳು ಮತ್ತು ಇತರ ಆರಾಧನಾಲಯಗಳು ಸುರಕ್ಷಿತವಾಗಿರುತ್ತಿರಲಿಲ್ಲ. ಇಸ್ಲಾಮ್ ಪ್ರತಿರೋಧಕ ಯುದ್ಧಕ್ಕೆ ಅನುಮತಿ ನೀಡಿದುದು ಪ್ರತಿಯೊಂದು ಧರ್ಮವನ್ನು ಸಂರಕ್ಷಿಸಲಿಕ್ಕೋಸ್ಕರವಾಗಿತ್ತು ಮತ್ತು ತಮಗಿಷ್ಟವಿರುವ ಧರ್ಮವನ್ನು ಅನುಸರಿಸುವ ಸ್ವಾತಂತ್ರ್ಯವನ್ನು ಜನರಿಗೆ ನೀಡಲಿಕ್ಕಾಗಿತ್ತು. ಒಬ್ಬ ಮುಸ್ಲಿಮ್ ಯಾವುದೇ ಧರ್ಮಕ್ಕೆ ಸೇರಿದ ಒಬ್ಬನನ್ನು ಹಾನಿಗೊಳಪಡಿಸಲು ಇಚ್ಛಿಸುವನಾದರೆ ಮತ್ತು ಅನ್ಯಧರ್ಮೀಯರ

ಪವಿತ್ರ ಸ್ಥಳಗಳನ್ನು ಕೆಡಿಸಲು ಇಚ್ಛಿಸುವನಾದರೆ ಅವನು ಅಥವಾ ಅವಳು ಪವಿತ್ರ ಖುರ್‌ಆನಿನ ಸ್ಪಷ್ಟ ಆಜ್ಞೆಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿ ವರ್ತಿಸುತ್ತಾರೆ.

ಇದಕ್ಕೆ ಸಂಬಂಧಿಸಿ ಹೇಳುವುದಾದರೆ, ಇತ್ತೀಚೆಗಿನ ವರದಿ ಪ್ರಕಾರ ಐಎಸ್‌ಐಎಸ್ ಚಾರಿತ್ರಿಕ ಸ್ಮಾರಕಗಳನ್ನು ಮತ್ತು ಕಲಾಕೃತಿಗಳನ್ನು ಇರಾಖಿನ ಪುರಾತನ ನಗರಗಳಲ್ಲಿ ಧ್ವಂಸಗೊಳಿಸಿದೆ. ಕಳೆದ 1400 ವರ್ಷಗಳಲ್ಲಿ ಈ ನಗರಗಳನ್ನು ಆಳಿದ ಮುಸ್ಲಿಮ್ ದೊರೆಗಳು ಮತ್ತು ಸರಕಾರಗಳು ಅವುಗಳನ್ನು ಸಂರಕ್ಷಿಸಿದ್ದರು. ಆದರೆ ಈಗ ಅವುಗಳನ್ನು ಇಸ್ಲಾಮಿನ ಹೆಸರಲ್ಲಿ ನಾಶಪಡಿಸಲಾಗಿದೆ. ಇದನ್ನು ಅತ್ಯಂತ ಹೇಯ ಕ್ರೌರ್ಯ ಮತ್ತು ಇಸ್ಲಾಮ್ ಧರ್ಮ ತತ್ವಗಳ ಉಲ್ಲಂಘನೆ ಎಂದೇ ಹೇಳಬೇಕಾಗಿದೆ. ಈ ರೀತಿ ವರ್ತಿಸುವ ಬಗ್ಗೆ ಯಾವೊಬ್ಬ ನೈಜ ಮುಸ್ಲಿಮನೂ ಚಿಂತಿಸಲಾರನು.

ಜಿಹಾದ್ ವಾಸ್ತವಿಕವಾಗಿ ಏನು ಮತ್ತು ಇಸ್ಲಾಮಿನ ನೈಜ ತತ್ವಗಳು ಯಾವುವು ಎನ್ನುವುದರ ಬಗ್ಗೆ ನಾನು ಕಳೆದ ವರ್ಷದ ಪೀಸ್ ಸಿಂಪೋಸಿಯಂನಲ್ಲಿ, ಪವಿತ್ರ ಖುರ್‌ಆನಿನ ಅನೇಕ ವಚನಗಳನ್ನು ಉಲ್ಲೇಖಿಸಿ ವಿವರಿಸಿರುವೆನು. ಆದುದರಿಂದ ಅವುಗಳನ್ನೆಲ್ಲ ಪುನಾರಾವರ್ತಿಸುವ ಆವಶ್ಯಕತೆ ಇರುವುದಿಲ್ಲ. ಹೀಗಿದ್ದರೂ ನಾನು ಈಗ ತಾನೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನ ಸೂಚಿಸುವುದೇನೆಂದರೆ, ಜಿಹಾದ್ ಬಗ್ಗೆ ಸಾಮಾನ್ಯವಾಗಿ ಆಪಾದಿಸಲ್ಪಡುವುದು ಸಂಪೂರ್ಣವಾಗಿ ತಪ್ಪು.

ಇಷ್ಟು ಮಾತ್ರವಲ್ಲ, ಪವಿತ್ರ ಖುರ್‌ಆನ್ ಅಧ್ಯಾಯ 10 ವಚನ 100ರಲ್ಲಿ ಅಲ್ಲಾಹನು ಪವಿತ್ರ ಪೈಗಂಬರರೊಂದಿಗೆ(ಸ) ಹೀಗೆ ಹೇಳಿದ್ದಾನೆ: ಅಲ್ಲಾಹನು ಇಚ್ಛಿಸಿದ್ದರೆ ಭೂಲೋಕದಲ್ಲಿ ಎಲ್ಲರೂ ವಿಶ್ವಾಸ ಹೊಂದುತ್ತಿದ್ದರು. ಆದರೆ ಅವನು ನಿರ್ಬಂಧಿಸುವುದಿಲ್ಲ. ಅಲ್ಲಾಹನು ಪ್ರತಿಯೊಬ್ಬನಿಗೆ ತಾನು ಇಷ್ಟಪಡುವುದನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ನೀಡಿದ್ದಾನೆ. ಹೀಗಿರುವಾಗ ಪವಿತ್ರ ಪೈಗಂಬರರಿಗೆ(ಸ) ಅಥವಾ ಬೇರೆ ಯಾರಿಗಾದರೂ ಅನ್ಯರನ್ನು ಇಸ್ಲಾಮ್ ಧರ್ಮಕ್ಕೆ ಸೇರಲು ಬಲವಂತ ಮಾಡುವ ಹಕ್ಕು ಇರುವುದಾದರೂ ಹೇಗೆ? ಪವಿತ್ರ ಪೈಗಂಬರರು(ಸ) ನ್ಯಾಯ ಮತ್ತು ಸಮಾನತೆ ಬಗ್ಗೆ ಒತ್ತಿ ಹೇಳಿದ್ದರು. ಎಲ್ಲ ವಿಧಗಳ ಕ್ರೂರಕೃತ್ಯಗಳನ್ನು ತಡೆಗಟ್ಟಲು ಹೇಳಿದ್ದರು. ಪವಿತ್ರ ಪೈಗಂಬರರು(ಸ) ಹೀಗೆ ಹೇಳಿದುದಾಗಿ ಸಹ ವರದಿಯಾಗಿದೆ: ದೌರ್ಜನ್ಯಗಾರನಿಗೂ ದೌರ್ಜನ್ಯ ಪೀಡಿತನಿಗೂ ಸಹಾಯ ನೀಡಬೇಕು.

ದೌರ್ಜನ್ಯ ಪೀಡಿತರಿಗೆ ಸಹಾಯ ಮಾಡುವುದು ಅವರಿಗೆ ಪ್ರೀತಿಯನ್ನೂ ಅನುಕಂಪವನ್ನೂ ತೋರಿಸುವ ಮೂಲಕವೆಂಬುವುದು ಸ್ಪಷ್ಟವಾದ ವಿಷಯವಾಗಿದೆ. ಅವರನ್ನು ಕಷ್ಟಗಳಿಂದ ಪಾರುಗೊಳಿಸಿ ಅವರಿಗೆ ಸಾಂತ್ವನ ನೀಡಬೇಕು. ಪವಿತ್ರ ಪೈಗಂಬರರು(ಸ) ಹೇಳಿರುವುದೇನೆಂದರೆ ನಾವು ಇಷ್ಟು ಮಾತ್ರ ಮಾಡಿದರೆ ಸಾಕಾಗಲಾರದು. ನಾವು ದೌರ್ಜನ್ಯಗಾರನಿಗೂ ಸಹಾಯ ಮಾಡಬೇಕು. ದೌರ್ಜನ್ಯಗಾರನಿಗೆ ಸಹಾಯ ಮಾಡುವುದು, ಅವನು ಅನ್ಯಾಯ ಮಾಡುವುದರಿಂದ ತಡೆಯುವ ಮತ್ತು ಕ್ರೂರಕೃತ್ಯಗಳಿಂದ ಅವನನ್ನು ತಡೆಯುವ ಮೂಲಕವಾಗಿದೆ. ಇವು ಜನರಲ್ಲಿ ಶಾಂತಿ ಸ್ಥಾಪನೆ ಮಾಡುವ ಮಾರ್ಗಗಳಾಗಿವೆ.

ಇಂದಿನ ಸರಕಾರಗಳು ಈ ಮೂಲಭೂತ ತತ್ವವನ್ನು ಪಾಲನೆ ಮಾಡಿದರೆ ಮತ್ತು ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗೆ ಆದ್ಯತೆ ನೀಡುವುದಕ್ಕೆ ಬದಲಾಗಿ ನ್ಯಾಯಪಾಲನೆ ಮತ್ತು ಅನ್ಯರಿಗೆ ಸಹಾಯ ನೀಡುವುದಕ್ಕೆ ಆದ್ಯತೆ ನೀಡಿದರೆ ಲೋಕವು ಎಷ್ಟೋ ಉತ್ತಮ ತಾಣವಾಗುವುದು. ಎಲ್ಲ ಸರಕಾರಗಳು ಮತ್ತು ನಾಯಕರು ತಾವು ನ್ಯಾಯ ಮತ್ತು ಶಾಂತಿಯನ್ನು ಸ್ಥಾಪಿಸಲು ಪ್ರಯತ್ನಿಸುವುದಾಗಿ ವಾದಿಸುತ್ತಾರಾದರೂ ದುಃಖಕರವಾದ ಸತ್ಯವೇನೆಂದರೆ ಅವರು ತಮ್ಮ ಕಾರ್ಯಸೂಚಿಗಳಿಗೆ, ಹಿತಾಸಕ್ತಿಗಳಿಗೆ ಮತ್ತು ಉದ್ದೇಶಲಕ್ಷ್ಯಗಳಿಗೆ ಆದ್ಯತೆ ನೀಡುತ್ತಾರೆ. ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 189ರಲ್ಲಿ ಅಲ್ಲಾಹನು ಹೇಳುತ್ತಾನೆ: **ನೀವು ಅನ್ಯರ ಸಂಪತ್ತನ್ನು ಸುಳ್ಳು ಮತ್ತು ಅನ್ಯಾಯ ಮೂಲಕ ತಿನ್ನಬಾರದು**. ಅನಂತರ ಪವಿತ್ರ ಖುರ್‌ಆನ್ ಅಧ್ಯಾಯ15 ವಚನ 89ರಲ್ಲಿ ಅಲ್ಲಾಹನು ಹೇಳುತ್ತಾನೆ: **ಅನ್ಯರ ಸಂಪತ್ತನ್ನು ಕಂಡು ದುರಾಸೆಪಡಬಾರದು**. ನಾನು ಪವಿತ್ರ ಖುರ್‌ಆನಿನ ಈ ವಚನವನ್ನು ಅಮೇರಿಕದ ಕ್ಯಾಪಿಟೋಲ್ ಹಿಲ್‌ನಲ್ಲಿ ಉಲ್ಲೇಖಿಸಿದಾಗ ಒಬ್ಬ ಕಾಂಗ್ರೆಸ್(ಪಾರ್ಲಿಮೆಂಟ್) ಸದಸ್ಯ ನನ್ನ ಬಳಿಗೆ ಬಂದು ಹೇಳಿದರು: ನೀವು ಪವಿತ್ರ ಖುರ್‌ಆನಿನ ಉಪದೇಶವನ್ನು ಮಾತ್ರವಲ್ಲ ವಾಸ್ತವಿಕ ಸ್ಥಿತಿಯ ಬಗ್ಗೆ ಸಹ ಸೂಚಿಸಿರುವಿರಿ.

ಪವಿತ್ರ ಖುರ್‌ಆನ್ ಅಧ್ಯಾಯ5 ವಚನ 9ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **ಅನ್ಯ ಜನಾಂಗದವರ ಶತ್ರುತ್ವ ಅಥವಾ ದ್ವೇಷ ನಿಮ್ಮನ್ನು ಅವರ ವಿರುದ್ಧ ಅನ್ಯಾಯವಾಗಿ ವರ್ತಿಸಲು ಪ್ರೇರೇಪಿಸದಿರಲಿ**. ಇದೆಂತಹ ನ್ಯಾಯ ಮತ್ತು ಪ್ರಾಮಾಣಿಕತೆಯ ಉನ್ನತ ಮಟ್ಟವಾಗಿದೆ ಎಂದು ನೋಡಿರಿ. ಧರ್ಮದ ಪಾವಿತ್ರ್ಯವನ್ನು ಕಾಪಾಡಲು ಮತ್ತು ಲೋಕದಲ್ಲಿ ಅವ್ಯವಸ್ಥೆ ಉಂಟಾಗುವುದನ್ನು ತಡೆಯಲು ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನಿನ ಅಧ್ಯಾಯ 6 ವಚನ 109ರಲ್ಲಿ ಹೀಗೆ ಹೇಳಿದ್ದಾನೆ: **ನೀವು ಪೂಜಾ ವಿಗ್ರಹಗಳನ್ನು ಅಥವಾ ಅನ್ಯರ ಆರಾಧ್ಯರನ್ನು ಎಂದೂ ಹೀಯಾಳಿಸಬಾರದು. ಯಾಕೆಂದರೆ ಅವರು ಉತ್ತೇಜಿಸಲ್ಪಟ್ಟು ಅಲ್ಲಾಹನನ್ನು ಅಪಹಾಸ್ಯ ಮಾಡುವರು**. ಈ ರೀತಿ ಸಂಭವಿಸಿದರೆ ಎಂದೂ ಕೊನೆಗೊಳ್ಳದ ಶತ್ರುತ್ವ ಮತ್ತು ದ್ವೇಷದ ವಲಯ ವರ್ಧಿಸುವುದು.

ಇಸ್ಲಾಮಿನ ಪವಿತ್ರ ಪ್ರವಾದಿ(ಸ) ಹೀಗೆ ಸಹ ಹೇಳಿದ್ದಾರೆ: "ನೀವು ಇನ್ನೊಬ್ಬನ ಪಿತನಿಗೆ ಬೈದರೆ ಅಥವಾ ಗೌರವ ಚ್ಯುತಿ ಉಂಟುಮಾಡಿದರೆ ನೀವು ನಿಮ್ಮ ಸ್ವಂತ ಪಿತನನ್ನು ಬೈದಂತೆ ಆಗುವುದು." ನೀವು ನೋಡಿರಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಎಂತಹ ಮಿತಿ ಹೇರಲಾಗಿದೆ ಮತ್ತು ಅನ್ಯರನ್ನು ಗೌರವಿಸುವ ತತ್ವ ಪ್ರತಿಪಾದಿಸಲಾಗಿದೆ! ಆದುದರಿಂದ ಈ ಪರಿಮಿತಿಗಳನ್ನು ಮೀರಿ ಹೋಗುವವರು ಅಲ್ಲಾಹನ ಮತ್ತು ಅವನ ಪೈಗಂಬರರ ಆಜ್ಞೆಗಳನ್ನು ಉಲ್ಲಘಿಸುವವರಾಗಿದ್ದಾರೆ.

ಪವಿತ್ರ ಖುರ್‌ಆನ್ ಅಧ್ಯಾಯ 60 ವಚನ 9ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **ನಿಮ್ಮನ್ನು ಹಿಂಸಾಚಾರಕ್ಕೆ ಗುರಿಪಡಿಸದವರೊಂದಿಗೆ ಮತ್ತು ನಿಮ್ಮ ಧಾರ್ಮಿಕ ವಿಶ್ವಾಸವನ್ನು ತಡೆಗಟ್ಟದವರೊಂದಿಗೆ ಯಾವಾಗಲೂ ಉತ್ತಮವಾಗಿ, ಗೌರವದಿಂದಲೂ ಕರುಣೆಯಿಂದಲೂ ವರ್ತಿಸಬೇಕು**. ಆದುದರಿಂದ ಶಾಂತಿಯುತವಾಗಿ ಮುಸ್ಲಿಂ ದೇಶಗಳಲ್ಲಿ ವಾಸಿಸುವ ಕ್ರೈಸ್ತರು, ಯಹೂದಿಯರು, ಯಝೀದಿಗಳು, ಬಹುದೇವಾರಾಧಕರು, ಬೇರೆ ವಿಶ್ವಾಸಗಳನ್ನು ಹೊಂದಿದವರು ಮತ್ತು ನಾಸ್ತಿಕರೊಂದಿಗೆ ಕ್ರೂರತೆಯಿಂದ ಮುಸ್ಲಿಮರು ವರ್ತಿಸುವುದು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿದೆ.

ಲೋಕದಲ್ಲಿ ಶಾಂತಿ ಸ್ಥಾಪಿಸಲು ಆವಶ್ಯಕವಾದ ಸುವರ್ಣ ತತ್ವಗಳು ಇವುಗಳಾಗಿವೆ. ಇಸ್ಲಾಮ್ ಧರ್ಮ ತತ್ವಗಳ ಸೌಂದರ್ಯವನ್ನೂ ಘನತೆಯನ್ನೂ ಸ್ಪಷ್ಟಪಡಿಸುವ ಕೇವಲ ಕೆಲವು ಅಂಶಗಳನ್ನು ಮಾತ್ರ ನಿಮ್ಮ ಮುಂದೆ ಇರಿಸಿದ್ದೇನೆ. ಇಸ್ಲಾಮಿನ ತತ್ವಗಳು ಲೋಕದ ಎಲ್ಲ ಜನರನ್ನು ಸಂರಕ್ಷಿಸುವಂಥವುಗಳಾಗಿವೆ. ಈ ಉಪದೇಶಗಳ ಕಾರಣದಿಂದಲೇ ನೈಜ ಮುಸ್ಲಿಮರು ಸಮಾಜದ ಎಲ್ಲ ವಿಭಾಗಗಳಲ್ಲೂ ಶಾಂತಿಯನ್ನೂ ಭದ್ರತೆಯನ್ನೂ ಖಾತರಿಪಡಿಸುವವರಾಗಿಯೂ ಸಂರಕ್ಷಕರಾಗಿಯೂ ವರ್ತಿಸುತ್ತಾರೆ.

ನನ್ನ ಮುಂದೆ ವಿವಿಧ ರಾಜಕಾರಣಿಗಳು, ಪ್ರಭಾವಶಾಲಿ ವ್ಯಕ್ತಿಗಳು, ಅತ್ಯಂತ ವಿದ್ಯಾವಂತರಾದ ಜನರು ಕುಳಿತಿದ್ದಾರೆ. ಆದುದರಿಂದ ನಾನು ನಿಮ್ಮೊಂದಿಗೆ ಅಪೇಕ್ಷಿಸಲು ಬಯಸುತ್ತೇನೆ. ನೀವೆಲ್ಲರೂ ನಿಮ್ಮ ಸರಕಾರಗಳ ಮೇಲೆ ಮತ್ತು ನಾಯಕರ ಮೇಲೆ ಸಕಾರಾತ್ಮ ಪ್ರಭಾವ ಬೀರಿ ಲೋಕದಲ್ಲಿ ಎಲ್ಲ ಹಂತಗಳಲ್ಲೂ ನ್ಯಾಯ ಮತ್ತು ಪ್ರಾಮಾಣಿಕತೆ ಸ್ಥಾಪಿಸುವಂತೆ ಪ್ರಯತ್ನಿಸಬೇಕು. ನಮ್ಮ ಕಾಲದ ಅನೇಕ ಆಂತರಿಕ ಮತ್ತು ಅಂತರ್ರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿರುವ ಕೀಲಿಗೈಗಳು ಇವುಗಳಾಗಿವೆ. ನಾವು ಭಯಾನಕ ವಿನಾಶದ ಕಡೆಗೆ ಸಾಗುತ್ತಿದ್ದೇವೆಂದು ಅನೇಕ ವರ್ಷಗಳಿಂದ ನಾನು ಮುನ್ನೆಚ್ಚರಿಕೆ ನೀಡುತ್ತಿದ್ದೇನೆ. ಈಗ ಅನೇಕ ರಾಜಕಾರಣಿಗಳು ಮತ್ತು ವಿಶ್ಲೇಷಕರು ಇದೇ ನಿಷ್ಕರ್ಷಣೆಗೆ ತಲಪಿದ್ದಾರೆ– ನಾವು ವೇಗವಾಗಿ ತೃತೀಯ ಜಾಗತಿಕ ಮಹಾಯುದ್ಧದ ಕಡೆಗೆ ಸಾಗುತ್ತಿದ್ದೇವೆಂದು.


ಇನ್ನೊಂದು ಜಾಗತಿಕ ಮಹಾಯುದ್ಧವನ್ನು ಈಗ ತಪ್ಪಿಸಲು ಅಸಾಧ್ಯವೆಂದು ಕೆಲವರು ಹೇಳುತ್ತಾರಾದರೂ ನಾನು ನಂಬುವುದೇನೆಂದರೆ ಲೋಕ ಎಚ್ಚೆತ್ತು ಅದರ ಮುಂದೆ ಇರುವ ಕಠಿಣ ವಾಸ್ತವಿಕತೆಯನ್ನು ಮನವರಿಕೆ ಮಾಡಿ ಕೊಂಡರೆ ಬೆದರಿಕೆಯನ್ನು ತಡೆಗಟ್ಟಬಹುದಾಗಿದೆ. ಹೀಗೆ ಮಾಡಲು ಎಲ್ಲ ಜನರು ಮತ್ತು ಅವರ ನಾಯಕರು ಕೇವಲ ಒಂದು ದಿಕ್ಕಿಗೆ ನೋಡಿಕೊಂಡು ತಮ್ಮ ಸ್ವಂತ ಹಿತಾಸಕ್ತಿಗಳಿಗೆ ಮಾತ್ರ ಪರಿಗಣನೆ ನೀಡುವುದನ್ನು ನಿಲ್ಲಿಸಬೇಕು. ಅದಕ್ಕೆ ಬದಲಾಗಿ ಅವರು ತಮ್ಮ ಮನೋಭಾವವನ್ನು ವಿಶಾಲಗೊಳಿಸಬೇಕು ಮತ್ತು ಎಲ್ಲ ವಿಷಯಗಳಿಗೆ ಸಂಬಂಧಿಸಿ ವಾಸ್ತವಿಕವಾದ ಮತ್ತು ವಸ್ತುನಿಷ್ಠವಾದ ನಿಲುವನ್ನು ಹೊಂದಬೇಕು. ಸಮಾಜದ ಎಲ್ಲ ಹಂತಗಳಲ್ಲೂ ನ್ಯಾಯ, ನಿಷ್ಪಕ್ಷಪಾತತೆ ಮತ್ತು ಪ್ರಾಮಾಣಿಕತೆಯನ್ನು ಸ್ಥಾಪಿಸಲು ಪ್ರಯತ್ನಿಸಬೇಕು.

ಅವರಿಗೆ ಸಾಧ್ಯವಿರುವಲ್ಲೆಲ್ಲ ಅವರು ಶಾಂತಿಯನ್ನು ಸ್ಥಾಪಿಸಲು ಪ್ರಯತ್ನಿಸಬೇಕು. ಎಲ್ಲದಕ್ಕಿಂತ ಮುಖ್ಯವಾದುದೇನೆಂದರೆ ಅವರು ತಮ್ಮ ಸೃಷ್ಟಿಕರ್ತನನ್ನು ಗುರುತಿಸಬೇಕಾದ ರೀತಿಯಲ್ಲಿ ಗುರುತಿಸಬೇಕು. ನಾವು ನಮ್ಮ ಹೊಣೆಗಾರಿಕೆಗಳ ಮಹತ್ವವನ್ನು ಮನವರಿಕೆ ಮಾಡಿಕೊಂಡು ನಮ್ಮ ಕರ್ತವ್ಯಗಳನ್ನು ಈಡೇರಿಸುವಂತೆ ಅಲ್ಲಾಹನು ಮಾಡಲಿ ಎಂದು ಪ್ರಾರ್ಥಿಸುತ್ತೇನೆ ಮತ್ತು ಅದರ ಬಗ್ಗೆ ಪ್ರತೀಕ್ಷೆ ಹೊಂದಿರುತ್ತೇನೆ. ಅಲ್ಲಾಹನು ನಿಮ್ಮೆಲ್ಲರನ್ನೂ ಅನುಗ್ರಹಿಸಲಿ. ನಿಮಗೆ ಬಹಳ ಧನ್ಯವಾದಗಳು. ♦

# LOVE FOR HONESTY AND HATRED FOR DISHONESTY

# ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

# ಇಸ್ಲಾಮ್ ಧರ್ಮದಲ್ಲಿ ವಿವಾಹ ವಿಚ್ಛೇದನ ನಿಯಮ



♦ ಮೌಲಾನ ಬಿ. ಅಬ್ದುಲ್ಲಾಹ್ ಎಚ್.ಎ.

ಇಂದು ಮುಸ್ಲಿಮರು ಇಸ್ಲಾಮೀ ಉಪದೇಶಗಳೆಂದು ಅನುಸರಿಸುತ್ತಿರುವ ಸಂಪ್ರದಾಯಗಳೂ ಆಚಾರಗಳೂ ಯಥಾರ್ಥದಲ್ಲಿ ಇಸ್ಲಾಮಿಕವೆಂದಾಗಲಿ, ಸರಕಾರವು ಮುಸ್ಲಿಂ ನಿಯಮಗಳೆಂದು ಅಂಗೀಕರಿಸಿದುದೆಲ್ಲ ಇಸ್ಲಾಮಿನ ಅಧ್ಯಾಪನಗಳ ಸಾರವೆಂದಾಗಲಿ ಭಾವಿಸುವುದು ಸರಿಯಲ್ಲ. ವಿವಾಹ ವಿಚ್ಛೇದನ, ವಾರೀಸು ಹಕ್ಕು ಮುಂತಾದ ಹಲವು ವಿಚಾರಗಳಲ್ಲಿ ವಿಭಿನ್ನವಾದ ಹಲವು ಕಟ್ಟಳೆಗಳನ್ನು ವಿವಿಧ ಮುಸ್ಲಿಂ ಪಂಗಡಗಳು ಅಂಗೀಕರಿಸಿವೆ. ಆ ನಿಯಮಗಳೆಲ್ಲ ಇಸ್ಲಾಮಿಕವಾಗಲಾರವೆಂಬುದು ಸುಸ್ಪಷ್ಟ. ಈ ಬಗ್ಗೆ ವಿವರಿಸಿ ಲೇಖನವನ್ನು ದೀರ್ಘ ಮಾಡಲು ನಾನಿಲ್ಲಿ ಬಯಸುವುದಿಲ್ಲ.

ಪ್ರತಿಯೊಂದು ಧರ್ಮದ ಅನುಯಾಯಿಗಳು ಕಾಲಾಂತರದಲ್ಲಿ ವಿಭಿನ್ನ ಅಭಿಪ್ರಾಯ ಹೊಂದಿದ ಪಂಗಡಗಳಾಗಿ ಬೇರ್ಪಟ್ಟು ಧರ್ಮದ ನಿರ್ದೇಶಗಳಿಗೆ ಅವರು ಹಲವಿಧ ವ್ಯಾಖ್ಯಾನಗಳನ್ನು ನೀಡಿ, ಕೊನೆಗೆ ಅವರು ಅದರ ನಿಜವಾದ ಅಧ್ಯಾಪನೆಗಳಿಂದ ಅಗಲಿ ಹೋಗುವುದು ಸ್ವಾಭಾವಿಕವೂ ಧಾರ್ಮಿಕ ಚರಿತ್ರೆಯಿಂದ ಮನದಟ್ಟಾಗುವ ಸತ್ಯ ವಿಚಾರವೂ ಆಗಿದೆ. ಈ ಪರಿವರ್ತನ ಸ್ವಭಾವಕ್ಕೆ ಮುಸ್ಲಿಮರು ಸಹ ಹೊರತಲ್ಲ. ಆದ್ದರಿಂದ, ಅವರ ಇಂದಿನ ಆಚಾರಾನುಷ್ಠಾನಗಳೆಲ್ಲ ಇಸ್ಲಾಮಿಕವೆಂದು ತಿಳಿದುಕೊಳ್ಳುವುದು ಸರಿಯಾಗಲಾರದು. ಆದರೆ ಇಸ್ಲಾಮಿಕ ನಿಯಮದ ಮೂಲಾಧಾರವಾದ ಪವಿತ್ರ ಖುರ್‌ಆನ್, ಒಂದೇ ಒಂದು ಕಾಗುಣಿತವಾಗಲಿ ವ್ಯತ್ಯಾಸವಾಗದ ರೀತಿಯಲ್ಲಿ ಸುರಕ್ಷಿತವಾಗಿರುವುದೆಂದೂ ಮುಹಮ್ಮದ್ ಪೈಗಂಬರರ(ಸ) ಉಪದೇಶಗಳೂ ನಿರ್ದೇಶಗಳೂ ವಿಶ್ವಾಸ ಯೋಗ್ಯವೂ ಪ್ರಬಲವೂ ಆದ ರೀತಿಯಲ್ಲಿ ದಾಖಲಿಸಲ್ಪಟ್ಟಿವೆ ಎಂಬುದೂ ಇಸ್ಲಾಂ ಧರ್ಮದ ಒಂದು ವೈಶಿಷ್ಟ್ಯವಾಗಿದೆ. ಆದುದರಿಂದ, ನಿಜವಾದ ಇಸ್ಲಾಮೀ ನಿಯಮ ನಿರ್ದೇಶನಗಳೇನೆಂದೂ ಮುಸ್ಲಿಮರು ಇಂದು ಆಚರಿಸಿಕೊಂಡು ಬರುತ್ತಿರುವ ಸಂಪ್ರದಾಯಗಳಲ್ಲೂ ಮುಸ್ಲಿಂ ನಿಯಮಗಳೆಂದು ಸರಕಾರ ಅಂಗೀಕರಿಸಿರುವ ನಿಯಮಗಳಲ್ಲೂ ಇಸ್ಲಾಮಿಕವಲ್ಲದ ಅಂಶಗಳು ಯಾವುದೆಂದೂ ಅನ್ವೇಷಣ ಬುದ್ಧಿಯುಳ್ಳವರಿಗೆ ಸುಲಭದಲ್ಲಿ ಮನಗಾಣಲು ಸಾಧ್ಯವಾಗಬಹುದು.

ಪ್ರಕೃತ, ನಾವು ಪ್ರಥಮವಾಗಿ ಚಿಂತಿಸಬೇಕಾದುದೇನೆಂದರೆ, ವಿವಾಹ ವಿಚ್ಛೇದನ ಯಾವ ರೀತಿಯಲ್ಲಾದರೂ ಸಮರ್ಥನೀಯವೇ? ಈ ವಿಷಯದ ಬಗ್ಗೆ ವಿಸ್ತರಿಸಿ ಹೇಳುವ ಬದಲು ಬಹಳ ಚುಟುಕಾಗಿ ಹೇಳಬಹುದು. ವಿವಾಹ ವಿಚ್ಛೇದನ ಯಾವ ವಿಧದಲ್ಲೂ ಸಮರ್ಥನೀಯವಲ್ಲವೆಂದು ಉಪದೇಶಿಸುವ ಧರ್ಮಗಳಲ್ಲಿ ಇಸ್ಲಾಂ ಸೇರುವುದಿಲ್ಲ. ಪತಿ-ಪತ್ನಿಯರು ಸಾಧ್ಯವಾದಷ್ಟು ದಾಂಪತ್ಯ ಸಂಬಂಧವನ್ನು ಮುಂದುವರಿಸಿಕೊಂಡು ಹೋಗಬೇಕೆಂದೂ ಆ ಸಂಬಂಧ ಮುರಿಯದಂತೆ ಇಬ್ಬರೂ ಜಾಗ್ರತೆ ವಹಿಸಬೇಕೆಂದೂ ಇಸ್ಲಾಂ ಬಲವಾಗಿ ಉಪದೇಶಿಸುವುದಾದರೂ, ಇಬ್ಬರಿಗೂ ತಮ್ಮ ದಾಂಪತ್ಯ ಜೀವನವನ್ನು ಸುಗಮವಾಗಿ ಮುಂದುವರಿಸಿಕೊಂಡು ಹೋಗಲು ಅಸಾಧ್ಯವೆಂದು ಕಾಣುವಾಗ ವಿವಾಹ ವಿಚ್ಛೇದ ಮಾಡಬಹುದೆಂದೂ ಅದು ಅನುಮತಿಯನ್ನೀಯುತ್ತದೆ. ಗಂಡ–ಹೆಂಡತಿ ಅನ್ಯೋನ್ಯ ಕಲಹವನ್ನುಂಟುಮಾಡಿ ದಾಂಪತ್ಯ ಸಂಬಂಧವನ್ನು ಶಿಥಿಲೀಕರಿಸಿ ಹೆಸರಿಗೆ ಮಾತ್ರ ದಂಪತಿಗಳಾಗಿ ಜೀವಿಸುವುದಕ್ಕಿಂತ ತಮ್ಮ ಜೀವಿತವನ್ನು ಮನುಷ್ಯ ಜೀವಿತವನ್ನಾಗಿ ಮಾಡಲು ಅವರು ಪರಸ್ಪರ ಬೇರ್ಪಡುವುದು ಗುಣಕರವೂ ಪ್ರಾಯೋಗಿಕವೂ ಆಗಿದೆಯೆಂಬುದು ಸುಗ್ರಾಹ್ಯ. ಕೆಲವೊಮ್ಮೆ ಪತಿಗಿರುವ ನಿವಾರಿಸಲಾಗದಂತಹ ಕೆಲವು ದೋಷಗಳ ಕಾರಣ ಪತ್ನಿಗೆ ಆತನೊಂದಿಗೆ ಜೀವನ ನಡೆಸುವುದು ದುಸ್ಸಾಧ್ಯ ಮತ್ತು ನರಕೀಯವಾಗಬಹುದು. ಇದೇ ಪ್ರಕಾರವೇ, ಪತ್ನಿಗಿರುವ ಹೋಗಲಾಡಿಸದಂತಹ ದೋಷಗಳ ಕಾರಣದಿಂದ ಪತಿಗೆ ಅವಳನ್ನು ತನ್ನ ಸಹಧರ್ಮಿಣಿಯಂತೆ ನಡೆಸಿಕೊಂಡು ಹೋಗುವುದು ದುಸ್ತರವೂ ದುಃಖದಾಯಕವೂ ಆಗಬಹುದು. ಹೀಗಿರುವ ಸಂದರ್ಭದಲ್ಲಿ ಸಹ ವಿವಾಹ ವಿಚ್ಛೇದನ ಮಾಡದೆ ದಂಪತಿಗಳು ನರಕ ಜೀವನವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಇಸ್ಲಾಂ ವಿಧಿಸುವುದಿಲ್ಲ. ಇಂತಹ ಅನಿವಾರ್ಯ ಘಟ್ಟದಲ್ಲಿ ವಿವಾಹ ವಿಚ್ಛೇದನಕ್ಕೆ ಇಸ್ಲಾಂ ಅನುಮತಿ ನೀಡಿರುವುದು ಅತ್ಯಂತ ವಿವೇಕಪೂರ್ಣವೆಂದು, ಚಿಂತಿಸುವವರಿಗೆ ಸುಲಭದಲ್ಲಿ ಮನವರಿಕೆಯಾಗಬಹುದು. ದಾಂಪತ್ಯ ಜೀವಿತದಲ್ಲಿ ಕೆಲವೊಮ್ಮೆ ಇಂತಹ ವೈಷಮ್ಯಗಳು ಎದುರಾಗುವುದರಿಂದ, ಅವುಗಳಿಗೆ ಪರಿಹಾರ ಮಾರ್ಗ ಇಲ್ಲದಿರುವ ಪಕ್ಷದಲ್ಲಿ ದಾಂಪತ್ಯ ಜೀವನ ಅತ್ಯಂತ ದುಃಖದಾಯಕ ಆಗಬಹುದಾದರಿಂದಾಗಿಯೇ, ಅನಿವಾರ್ಯ ಘಟ್ಟದಲ್ಲಿ ವಿವಾಹ ವಿಚ್ಛೇದ ಸಮ್ಮತನೀಯವೆಂದು ಇಸ್ಲಾಂ ಬೋಧಿಸಿದೆ.

ಸಂಕ್ಷಿಪ್ತವಾಗಿ, ವೈವಾಹಿಕ ಸಂಬಂಧದ ಕುರಿತು ಇಸ್ಲಾಂ ಹೇಳುವುದೇನೆಂದರೆ, ಆ ಸಂಬಂಧವನ್ನು ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದಿರುವಾಗ ಬೇರ್ಪಡಿಸಲು ಸಾಧ್ಯವಾಗುವ ಒಂದು ಕರಾರು (Contract) ಎಂದಾಗಿದೆ. ಈ ನಿರ್ದೇಶ ಅತ್ಯಂತ ಪ್ರಾಯೋಗಿಕವೂ ಅನುಷ್ಠಾನ ಯೋಗ್ಯವೂ ಆಗಿದೆಯೆಂಬುದಕ್ಕೆ ಲೋಕಾನುಭವ ಸಾಕ್ಷ್ಯವಹಿಸುತ್ತದೆ. ವಿವಾಹ ಸಂಬಂಧ ಒಂದು ಒಪ್ಪಂದ ಅಲ್ಲ, ಅವಿಚ್ಛಿನ್ನವಾದ ಒಂದು ಮತಸಂಸ್ಕಾರ ಅಥವಾ 'ಸಾಕ್ರಮೆಂಟ್' (Sacrament) ಎಂದು ನಂಬುವ ಹಲವು ಮತಸ್ಥರು ಕೂಡ ವಿವಾಹ ವಿಚ್ಛೇದ ಆವಶ್ಯಕವೆಂದು ಒಪ್ಪಿಕೊಂಡು ನಿಯಮ ನಿರ್ಮಾಣ ಮೂಲಕ ಅದನ್ನು ರೂಢಿಗೊಳಿಸಲು ಶ್ರಮಿಸುತ್ತಾರೆ.

ಕ್ರೈಸ್ತ ಧರ್ಮ ತತ್ವ ಪ್ರಕಾರ ವಿವಾಹವು ಅವಿಚ್ಛೇದ್ಯವಾದ ಒಂದು ಧರ್ಮ ಸಂಸ್ಕಾರವಾಗಿದೆ. ಆದರೆ ಇಂದು ಯುರೋಪು ಮತ್ತು ಅಮೇರಿಕ ಕಾನೂನು ಮೂಲಕ ವಿವಾಹ ವಿಚ್ಛೇದನವನ್ನು ನಿಯಮಬದ್ಧಗೊಳಿಸಿ ಜಾರಿಗೆ ತಂದಿದೆ. ಹಿಂದೂಗಳಿಗೆ ಸಹ ಶಾಸ್ತ್ರೋಕ್ತವಾದ ವಿವಾಹ, ಪರಿಚ್ಛೇದನಗೊಳಿಸಲಾರದಂತಹ ಒಂದು ಸಂಬಂಧವಾಗಿದೆ. ಆದರೆ ಇಂದು ಅವರು ವಿವಾಹ ವಿಚ್ಛೇದನವನ್ನು ನಿಯಮಬದ್ಧಗೊಳಿಸಲು ಕಾನೂನಿನ ಮೊರೆಹೊಗುತ್ತಾರೆ. ಸ್ವಾಮಿ ದಯಾನಂದ ಸರಸ್ವತಿ ವಿವಾಹ ವಿಚ್ಛೇದನ ವೇದ ಪ್ರಕಾರ ನಿಷಿದ್ಧವೆಂದು ಬೋಧಿಸಿದರೂ ಅವರ ಅನುಯಾಯಿಗಳಾದ ಆರ್ಯ ಸಮಾಜಿಗಳು ಕಾನೂನು ಮೂಲಕ ವಿವಾಹ ವಿಚ್ಛೇದನವನ್ನು ಪಡೆಯಲು ಪ್ರಯತ್ನಿಸುತ್ತಾರೆ. ಹೀಗಿರುವ ಪರಿಶ್ರಮಗಳಿಗೆಲ್ಲ ಕಾರಣ, ಕೆಲವು ಬಾರಿ ದಾಂಪತ್ಯ ಜೀವನವನ್ನು ಮುಂದುವರಿಸಿಕೊಂಡು ಹೋಗುವುದು ಅಸಾಧ್ಯವಾಗುವುದರಿಂದ, ಆ ಸಂಬಂಧದಿಂದ ದಂಪತಿಗಳು ವಿಮುಕ್ತರಾಗದ ಪಕ್ಷದಲ್ಲಿ ಅವರು ದುಃಖ–ದುರಂತಗಳಿಗೂ ಕಷ್ಟ–ನಷ್ಟಗಳಿಗೂ ಈಡಾಗುತ್ತಾರೆಂಬ ಅನುಭವವೇ ಆಗಿದೆ.

ಪತಿ–ಪತ್ನಿಗೆ ಸರಸ–ಸಾಮರಸ್ಯದ ದಾಂಪತ್ಯ ಜೀವನವನ್ನು ಮುಂದುವರಿಸಿಕೊಂಡು ಹೋಗಲು ದುಸ್ಸಹವಾದ ಘಟ್ಟದಲ್ಲಿ ವಿವಾಹ ವಿಚ್ಛೇದ ಮಾಡಿಕೊಳ್ಳಬಹುದೆಂದು ಒಂದು ಕಡೆಯಲ್ಲಿ ಇಸ್ಲಾಂ ಒಪ್ಪುವುದಾದರೆ, ಇನ್ನೊಂದು ಕಡೆಯಲ್ಲಿ, ದಂಪತಿಗಳು ಮರಣದವರೆಗೆ ಪರಸ್ಪರ ಪ್ರೀತಿಯಿಂದ ವರ್ತಿಸಿ ತಮ್ಮ ಸಂಬಂಧವನ್ನು ನಿರ್ಬಾಧೆಯಿಂದ ಮುಂದುವರಿಸಿಕೊಂಡು ಹೋಗಲು ಶ್ರಮಿಸಬೇಕೆಂದು ಬಹಳ ಬಲವಾಗಿ ಉಪದೇಶಿಸುತ್ತದೆ. ದಾಂಪತ್ಯ ಜೀವಿತವನ್ನು ಸರಸದಿಂದ ನಡೆಸಿಕೊಂಡು ಹೋಗಲು ಅಸಾಧ್ಯವಾಗಿ ಪರಿಣಮಿಸುವ ಸಂದರ್ಭದಲ್ಲಿ ಕೂಡ ವಿವಾಹ ವಿಚ್ಛೇದನ ಮಾಡಬಾರದೆಂದು ಇಸ್ಲಾಂ ವಿಧಿಸುವ ಪಕ್ಷದಲ್ಲಿ, ಅದು ಇಸ್ಲಾಂ ಧರ್ಮದ ಪರಿಪೂರ್ಣತಾವಾದಕ್ಕೂ ಅದರ ಸಾರ್ವಲೌಕಿಕ ದೌತ್ಯಕ್ಕೂ ಕಳಂಕಕರವಾಗುವುದು. ಅದೇ ಪ್ರಕಾರವೇ, ಕ್ಷುಲ್ಲಕ ಕಾರಣಗಳಿಗೆ ಯಥೇಷ್ಟ ವಿವಾಹ ವಿಚ್ಛೇದ ಮಾಡಿಕೊಳ್ಳಲು ಇಸ್ಲಾಂ ಸಮ್ಮತಿ ನೀಡುವುದಾದರೆ ಅದು ಇಸ್ಲಾಮಿನ ಮಹನೀಯವೂ ಸುಗಮವೂ ಆದ ತತ್ವಗಳಿಗೆ ಹಾನಿಕರವಾಗುವುದು. ಕೆಲವು ಅನಿವಾರ್ಯ ಘಟ್ಟಗಳಲ್ಲಿ ವಿವಾಹ ವಿಚ್ಛೇದ ಮಾಡಬಹುದೆಂದು ಇಸ್ಲಾಂ ಒಪ್ಪುವುದಾದರೆ ಈ ಒಪ್ಪಿಗೆ ಪುರುಷರಿಗಿರುವಂತೆಯೇ ಸ್ತ್ರೀಯರಿಗೂ ಇದೆಯೆಂದು ಅದು ಬೋಧಿಸುತ್ತದೆ. ಈ ನಿಜಾಂಶವನ್ನು ಪವಿತ್ರ ಖುರ್‌ಆನಿನಿಂದಲೂ ಪ್ರವಾದಿ ವಚನಗಳಿಂದಲೂ ಮನಗಾಣಬಹುದು. ಆದರೆ ಗಂಡಂದಿರಿಗೆ ಹೆಚ್ಚಿನ ಅಧಿಕಾರವೂ ಸ್ವಾತಂತ್ರ್ಯವೂ ಇರುವುದರಿಂದ ಅವರೇ ಹೆಂಡಂದಿರಿಗಿಂತ ಹೆಚ್ಚಾಗಿ ವಿವಾಹ ಸಂಬಂಧವನ್ನು ಮುರಿಯಲು ಪ್ರೇರಿತರಾಗುತ್ತಾರೆ. ಆದ್ದರಿಂದಲೇ ಗಂಡಂದಿರಿಗೆ ದಾಂಪತ್ಯ ಸಂಬಂಧವನ್ನು ಸುಲಭದಲ್ಲಿ ವಿಚ್ಛೇದಿಸಲು ಸಾಧ್ಯವಾಗದಂತೆ ಹಲವು ಪ್ರತಿಬಂಧಕಗಳನ್ನು ಇಸ್ಲಾಂ ಧರ್ಮ ವಿಧಿಸಿದೆ.

**ಒಂದನೆಯದಾಗಿ,** ಪತ್ನಿಯೊಂದಿಗೆ ಸ್ನೇಹದಿಂದಲೂ ಉದಾರ ಭಾವದಿಂದಲೂ ವರ್ತಿಸಲಿಕ್ಕೆ ಇಸ್ಲಾಂ ಆಜ್ಞಾಪಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಸ್ತ್ರೀಯರ ಮೇಲೆ ಪುರುಷರಿಗೆ ಹಕ್ಕುಗಳಿರುವಂತೆಯೇ ನ್ಯಾಯೋಚಿತವಾಗಿ ಸ್ತ್ರೀಯರಿಗೂ ಪುರುಷರ ಮೇಲೆ ಹಕ್ಕುಗಳಿವೆ." (2:229).

"ನೀವು ಮಡದಿಯರನ್ನು ಒಳ್ಳೆಯ ರೀತಿಯಲ್ಲಿ ಇರಿಸಿಕೊಳ್ಳಿರಿ; ಅಥವಾ ನ್ಯಾಯೋಚಿತವಾಗಿ ಬಿಡುಗಡೆ ಮಾಡಿರಿ; ಅತಿಕ್ರಮದಿಂದ ವರ್ತಿಸಲಿಕ್ಕಾಗಿ ತಪ್ಪಾದ ರೀತಿಯಲ್ಲಿ ಅವರನ್ನು ನಿಮ್ಮೊಂದಿಗೆ ಇರಿಸಿಕೊಳ್ಳಬೇಡಿರಿ. ಹಾಗೆ ಮಾಡುವವನು ತನಗೇ ಕೇಡನ್ನುಂಟುಮಾಡುತ್ತಾನೆ. ಅಲ್ಲಾಹನ ಆಜ್ಞೆಗಳನ್ನು ನೀವು ಪರಿಹಾಸ್ಯಕ್ಕೆ ಈಡುಮಾಡಬೇಡಿರಿ." (2:232)

"ನೀವು ಪತ್ನಿಯರೊಡನೆ ಒಳ್ಳೆಯ ರೀತಿಯಲ್ಲೂ ಔದಾರ್ಯದಿಂದಲೂ ವರ್ತಿಸಿರಿ; ನೀವು ಅವರನ್ನು ಇಷ್ಟಪಡುವುದಿಲ್ಲವಾದರೆ, (ನೆನಪಿಡಿರಿ) ಅಲ್ಲಾಹನು ಧಾರಾಳ ಒಳಿತನ್ನು ಇಟ್ಟಿರುವ ಒಂದು ವಸ್ತುವನ್ನು ನೀವು ಮೆಚ್ಚುವುದಿಲ್ಲ ವೆಂದಾಗಲೂಬಹುದು." (4:20).

ಈ ಮೇಲಿನ ಖುರ್‌ಆನ್ ವಾಕ್ಯಗಳಿಂದ ತಿಳಿದು ಬರುವುದೇನೆಂದರೆ, ಹೆಂಡಂದಿರೊಡನೆ ಗಂಡಂದಿರು ಔದಾರ್ಯದಿಂದ ವರ್ತಿಸಬೇಕು, ಅವರ ಹಕ್ಕುಗಳನ್ನು ಅವರಿಗೆ ನೀಡಬೇಕು, ಅವರನ್ನು ಪರಿತ್ಯಜಿಸುವುದಾದರೆ ನ್ಯಾಯವಾದ ರೀತಿಯಲ್ಲಿ ಹಾಗೆ ಮಾಡಬೇಕು, ಅವರನ್ನು ಪೀಡಿಸಲಿಕ್ಕೂ ಕಾಡಿಸಲಿಕ್ಕೂ ಬೇಕಾಗಿ ಮಾತ್ರ ಹೆಸರಿಗೆ ಹೆಂಡಂದಿರಾಗಿ ಇರಿಸಿಕೊಳ್ಳಬಾರದು, ಯಾವ ಕಾರಣದಿಂದಾದರೂ ಅವರ ಮೇಲೆ ವಿರಕ್ತಿಭಾವ ಉಂಟಾದರೆ ಅವರನ್ನು ತಕ್ಷಣ ಬಿಟ್ಟುಬಿಡದೆ ಸಾಧ್ಯವಾದಷ್ಟು ಅವರೊಡನೆ ಸಹಕರಿಸಿ ವರ್ತಿಸಬೇಕು, ಹೀಗೆ ಮಾಡುವುದು ದೇವಾನುಗ್ರಹಕ್ಕೆ ಹೇತುವಾಗುವುದು. ಪವಿತ್ರ ಖುರ್‌ಆನ್ ಹೀಗೆ ಹಲವೆಡೆಗಳಲ್ಲಿ ಉಪದೇಶಿಸಿದೆ. ಮಾತ್ರವಲ್ಲ, ಪ್ರವಾದಿ ಮುಹಮ್ಮದ್[ಸ] ಸಹ ಈ ವಿಷಯದಲ್ಲಿ ಬಲವಾಗಿ ಉಪದೇಶಿಸಿದ್ದಾರೆ. ಮುಹಮ್ಮದ್ ಪೈಗಂಬರ್[ಸ] ಹೀಗೆ ನುಡಿದಿದ್ದಾರೆ:

"ಸ್ತ್ರೀಯರೊಡನೆ ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂಬ ಉಪದೇಶವನ್ನು ನೀವು ಸ್ವೀಕರಿಸಿರಿ." (ಬುಖಾರಿ).

"ನಿಮ್ಮ ಪೈಕಿ ತನ್ನ ಪತ್ನಿಯೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸುವವನೇ ನಿಮ್ಮಲ್ಲಿ ಉತ್ತಮನು." (ತಿರ್ಮಿಧೀ)

ಮುಹಮ್ಮದ್ ಪೈಗಂಬರರು[ಸ] ಹೀಗೆ ಅನೇಕ ಸಂದರ್ಭಗಳಲ್ಲಿ ಉಪದೇಶಿಸಿದ್ದು ಮಾತ್ರವಲ್ಲ, ಮರಣಶಯ್ಯೆಯಲ್ಲಿರುವಾಗ ಕೂಡ "ಸ್ತ್ರೀಯರೊಡನೆ ನೀವು ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂದು ನಾನಿದೋ ನಿಮಗೆ ಉಪದೇಶಿಸುತ್ತೇನೆ" ಎಂದು ನುಡಿದರು. ಈ ಪ್ರಕಾರದ ವಚನಗಳಿಂದ ಪೈಗಂಬರರು ತನ್ನ ಅನುಯಾಯಿಗಳಿಗೆ, ಪತ್ನಿಯರಿಗೆ ಹಾನಿ ಉಂಟುಮಾಡಬಾರದೆಂದೂ ಕ್ಷುಲ್ಲಕ

ವಿಷಯಗಳಿಗಾಗಿ ಅವರನ್ನು ತ್ಯಜಿಸಬಾರದೆಂದೂ ಉಪದೇಶಿಸಿದ್ದಾರೆ. ಮಾತ್ರವಲ್ಲ, ಪತ್ನಿ ಪತಿಗೆ ಅವಿಧೇಯತೆ ತೋರಿಸಿದರೆ ಅಥವಾ ಇಬ್ಬರಿಗೂ ಪರಸ್ಪರ ಸರಸ ಸಹವಾಸ ಮಾಡಲು ಸಾಧ್ಯವಿಲ್ಲವೆಂದು ಕಂಡುಬರುವುದಾದರೆ ಕೂಡ ತಕ್ಷಣ ಪತಿಯು ಪತ್ನಿಯನ್ನು ಬಿಟ್ಟುಬಿಡಬಾರದೆಂದೂ ಅವರ ಮಧ್ಯೆ ಸರಸ ಮತ್ತು ಸಾಮರಸ್ಯ ಉಂಟುಮಾಡಲು ಎರಡು ಕಡೆಗಳಿಂದಲೂ ಮಧ್ಯಸ್ಥರನ್ನು ನೇಮಿಸಿ ಯುಕ್ತವಾಗಿ ವರ್ತಿಸಬೇಕೆಂದೂ ಪವಿತ್ರ ಖುರ್‌ಆನ್ ಬೋಧಿಸುತ್ತದೆ. (4:35,36)

ಮುಹಮ್ಮದ್ ಪೈಗಂಬರರು(ಸ) ವಿವಾಹ ವಿಚ್ಛೇದದ ಕುರಿತು ಹೀಗೆ ಹೇಳಿದ್ದಾರೆ: "ವಿವಾಹ ವಿಚ್ಛೇದ ಅನುಮತನೀಯವಾದರೂ ಅದು ಅಲ್ಲಾಹನಿಗೆ ಅತ್ಯಂತ ಅಪ್ರಿಯವಾದುದು." (ಅಬೂ ದಾವೂದ್)

ಹೀಗೆ ಗಂಡಂದಿರು ಹೆಂಡಂದಿರೊಡನೆ ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂದೂ ಸಾಧ್ಯವಾದಷ್ಟರ ಮಟ್ಟಿಗೆ ದಾಂಪತ್ಯ ಸಂಬಂಧವನ್ನು ಬೇರ್ಪಡಿಸದಿರಬೇಕೆಂದೂ ಇರುವ ಇಸ್ಲಾಮಿನ ಉಪದೇಶ ಯಥೇಷ್ಟ ವಿವಾಹ ವಿಚ್ಛೇದನ ಮಾಡದಿರಲಿಕ್ಕಾಗಿ ಪ್ರಧಾನವಾದ ತಡೆಯಾಗಿದೆ.

**ಎರಡನೆಯದಾಗಿ,** ದಾಪಂತ್ಯ ಸಂಬಂಧವನ್ನು ಸುಲಭದಲ್ಲಿ ಮುರಿಯದಿರಲು ಇಸ್ಲಾಂ ಏರ್ಪಡಿಸಿದ ಮತ್ತೊಂದು ತಡೆಯೇನೆಂದರೆ, ಪತಿಯು ಪತ್ನಿಗೆ 'ಮಹರ್' ಎಂಬ ವಿವಾಹಧನ ನೀಡಬೇಕಾದುದು ಕಡ್ಡಾಯವೆಂದು ಮಾಡಿರುವ ನಿಯಮವಾಗಿದೆ. ಈ ಮೊತ್ತ ಇಷ್ಟೇ ಎಂದು ಇಸ್ಲಾಂ ನಿರ್ದಿಷ್ಟಪಡಿಸಲಿಲ್ಲವಾದರೂ ಪತಿ ತನ್ನ ಸ್ಥಾನಮಾನಕ್ಕನುಸಾರವಾಗಿ ತಕ್ಕುದಾದ ಒಂದು ಮೊತ್ತವನ್ನು ಪತ್ನಿಗೆ ನೀಡಬೇಕಾದುದು ಆವಶ್ಯಕವಾಗಿದೆ. ಈ ಮೊತ್ತವನ್ನು ಕೂಡಲೇ ಕೊಡಬೇಕೆಂಬ ನಿರ್ಬಂಧವಿಲ್ಲವಾದರೂ ಅದನ್ನು ಕೊಡದಿರಲಿಕ್ಕೆ ಪತಿಗೆ ನಿರ್ವಾಹವಿಲ್ಲ. ಪತ್ನಿಯಾದರೋ ಇಂತಹ ಯಾವ ಹಣವನ್ನಾಗಲಿ ಪತಿಗೆ ಕೊಡಲಿಕ್ಕೆ ಬಾಧ್ಯಳಲ್ಲ. ಆದ್ದರಿಂದ ಗಂಡ ಹೆಂಡತಿಯನ್ನು ತ್ಯಜಿಸುವುದಾದರೆ, ಆ ಮೊತ್ತ ಆತನಿಗೆ ನಷ್ಟವಾಗುತ್ತದೆ. ಹೀಗೆ ಪತಿಯು ಪತ್ನಿಗೆ ವಿವಾಹಧನವಾಗಿ ಒಂದು ಮೊತ್ತವನ್ನು ಕೊಡಬೇಕೆಂದು ಇಸ್ಲಾಂ ವಿಧಿಸಿರುವುದರ ಒಂದು ಉದ್ದೇಶ, ಪತಿ ಕ್ಷುಲ್ಲಕ ಸಂಗತಿಗೆ ಪತ್ನಿಯನ್ನು ತಲಾಖ್ ಹೇಳಿ ಬಿಟ್ಟುಬಿಡದಿರಲಿಕ್ಕೇ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: "ಮಡದಿಯರಿಗೆ ಪಾರಿತೋಷಕವಾಗಿ ಅವರ ವಧು ದಕ್ಷಿಣೆಯನ್ನು ನೀಡಿರಿ." (4:5)

"ನೀವು ಓರ್ವ ಪತ್ನಿಯ ಸ್ಥಾನದಲ್ಲಿ ಇನ್ನೋರ್ವ ಪತ್ನಿಯನ್ನು ವರಿಸಲು ಬಯಸುವಿರಾದರೆ, ಅವರಲ್ಲೊಬ್ಬಳಿಗೆ ನೀವು ಬಹಳ ಹೆಚ್ಚು ಸಂಪತ್ತನ್ನು ಕೊಟ್ಟಿದ್ದರೂ ಅದರಿಂದ ಏನನ್ನೂ ನೀವು ವಾಪಸು ಪಡೆಯಬಾರದು." (4:21)

"ಅವರಿಗಾಗಿ ನಿಗದಿಪಡಿಸಲಾದ ಪ್ರತಿಫಲವನ್ನು ನೀವು ಅವರಿಗೆ ನೀಡಿರಿ." (4:25)

ಈ ವಾಕ್ಯಗಳಿಂದೆಲ್ಲ ಸ್ಪಷ್ಟವಾಗುವುದೇನೆಂದರೆ, ಗಂಡ ಹೆಂಡತಿಗೆ ತನ್ನ ಸ್ಥಾನಮಾನ ಮತ್ತು ಸಾಮರ್ಥ್ಯವನ್ನನುಸರಿಸಿ ವಿವಾಹ ಧನವಾಗಿ ಒಂದು ಮೊತ್ತವನ್ನು ಕೊಡಬೇಕು ಮತ್ತು ಹೆಂಡತಿಯನ್ನು ತ್ಯಜಿಸಬೇಕಾದ ಘಟ್ಟದಲ್ಲಿ ಆ ಮೊತ್ತ ಎಷ್ಟು ಹೆಚ್ಚಾಗಿದ್ದರೂ ವಾಪಸು ತೆಗೆದುಕೊಳ್ಳಬಾರದು. ಮುಹಮ್ಮದ್ ಪೈಗಂಬರರು(ಸ) ಈ ಬಗ್ಗೆ ಹೀಗೆ ಹೇಳಿದ್ದರು: "ನೀವು ಸ್ತ್ರೀಯನ್ನು ಯಾವ ನಿಬಂಧನೆಯಂತೆ ಪತ್ನಿಯಾಗಿ ವರಿಸುತ್ತೀರೋ, ಅದೇ ನೀವು ನಿರ್ವಹಿಸಬೇಕಾದ ನಿಬಂಧನೆಗಳ ಪೈಕಿ ಅತಿ ಪ್ರಧಾನವಾದುದು." (ಬುಖಾರಿ)

ಗಂಡ ಹೆಂಡತಿಗೆ ವಧುದಕ್ಷಿಣೆಯಾಗಿ ತಕ್ಕುದಾದ ಒಂದು ಮೊತ್ತವನ್ನು ನೀಡಬೇಕೆಂಬ ಇಸ್ಲಾಮಿನ ಈ ಆಜ್ಞೆ, ಅವನಿಗೆ ಇಚ್ಛಾನುಸಾರ ಪತ್ನಿಯನ್ನು ಬಿಟ್ಟು ಬಿಡುವುದಕ್ಕೆ ಒಂದು ಪ್ರತಿಬಂಧಕವಾಗಿದೆ. ನಿಜವಾಗಿ, ವಿವಾಹ ಧನವೆಂಬುದು ಗಂಡ ಹೆಂಡತಿಗೆ ಕಡ್ಡಾಯವಾಗಿ ಕೊಡಬೇಕಾದ ವಧುದಕ್ಷಿಣೆಯಾಗಿದೆ. ಆದರೆ ನಿರ್ಭಾಗ್ಯವಶಾತ್ ಇಂದು ಹಲವೆಡೆಗಳಲ್ಲಿ ಇಸ್ಲಾಮಿನ ಈ ನಿರ್ದೇಶನಕ್ಕೆ ತೀರಾ ವಿರುದ್ಧವಾಗಿ ಗಂಡ ಹೆಂಡತಿಯಿಂದ ವರದಕ್ಷಿಣೆ ಪಡೆಯುತ್ತಾನೆ. ಇಸ್ಲಾಮಿಕವಲ್ಲದ ಈ ಸಂಪ್ರದಾಯ ಅಭಿಮಾನಕ್ಕೂ ನೀತಿಗೂ ಅನುಯೋಜ್ಯವಲ್ಲದ್ದೂ ಸಮುದಾಯದಲ್ಲಿ ಸ್ತ್ರೀಗಿರುವ ಸ್ಥಾನವನ್ನು ಅಧಃಪತನಗೊಳಿಸುವಂಥದ್ದೂ ಅನೇಕ ಯುವತಿಯರು ಗಂಡುಗಳು ಸಿಗದೆ ಕಷ್ಟಪಡುವುದಕ್ಕೆ ಕಾರಣೀಭೂತವೂ ಆಗಿದೆ. ಸ್ತ್ರೀಯಿಂದ ತುಂಬಾ ಧನವನ್ನು ಕಸಿದುಕೊಂಡು ಅವಳನ್ನು ಪತ್ನಿಯಾಗಿ ವರಿಸುವುದು ಖಂಡಿತವಾಗಿಯೂ ಪೌರುಷ್ಯಕ್ಕೂ ನೀತಿಗೂ ವಿರುದ್ಧವಾದುದು. ದುರದೃಷ್ಟವಶಾತ್ ಇಂದು ಮುಸ್ಲಿಮರು ಇಸ್ಲಾಮಿನ ವಿಧಿಯನುಸಾರ ಸ್ತ್ರೀಗೆ ಕೊಡಬೇಕಾದ ವಧು ದಕ್ಷಿಣೆಯನ್ನು ಕೇವಲ ಒಂದು ವಿನೋದವೆಂದು ಬಗೆದು ಸ್ತ್ರೀಯಿಂದ ದೊಡ್ಡದಾದೊಂದು ಮೊತ್ತವನ್ನು ಕಸಿದುಕೊಂಡು ಅದನ್ನು ವರದಕ್ಷಿಣೆಯೆಂದು ಕರೆಯುತ್ತಾರೆ. ಇಂದು ಮುಸ್ಲಿಮರಲ್ಲಿ ಕಂಡುಬರುವ ಈ ಸಂಪ್ರದಾಯವನ್ನು ಇಸ್ಲಾಮಿಕವೆಂದು ಯಾರಾದರೂ ತಿಳಿಯುವರಾದರೆ ಅದು ತಪ್ಪೆಂದು ಹೇಳದೆ ಗತ್ಯಂತರವಿಲ್ಲ.

**ಮೂರನೆಯದಾಗಿ,** ಪತಿ–ಪತ್ನಿಯರು ವಿವಾಹ ಸಂಬಂಧದಿಂದ ಬೇರ್ಪಡದೆ ಸರಸದಲ್ಲಿ ಜೀವನ ನಡೆಸಲು ಸಾಧ್ಯವಾಗುವಂತೆ ಇಸ್ಲಾಂ ನಿರ್ದೇಶಿಸಿರುವ ಮತ್ತೊಂದು ಉಪಾಯ, ಗಂಡ ಹೆಂಡತಿಗೆ ತಲಾಖ್ ಹೇಳಿ ವಿವಾಹ ವಿಚ್ಛೇದ ಮಾಡುವುದು ಅವಳು ಮುಟ್ಟಿನ ಕಾಲಾವಧಿ ಕಳೆದು ಶುದ್ಧಿಯಾಗಿ, ಅನಂತರ ಅವಳೊಡನೆ ಸಂಭೋಗ ನಡೆಸದಿರುವ ಸಂದರ್ಭದಲ್ಲಿ ಮಾತ್ರವೇ ಸಾಧ್ಯ ಎಂಬುದಾಗಿದೆ. ಈ ನಿಯಮವನ್ನನುಸರಿಸಿ ಒಬ್ಬ ಮುಸ್ಲಿಂ ತನ್ನ ಪತ್ನಿಯ ವಿವಾಹ ವಿಚ್ಛೇದ ಮಾಡುವವನಾದರೆ, ಅದು ಅವಳು ಋತುಕಾಲ ಕಳೆದು ಶುದ್ಧಳಾಗಿ ಅವಳೊಡನೆ ರತಿಕ್ರೀಡೆ ಮಾಡದಿರುವ ಸ್ಥಿತಿಯಲ್ಲಿ ಆಗಬೇಕಾಗಿದೆ. ಪತ್ನಿ ರಜಸ್ವಲೆಯಾಗಿರುವ ಸಮಯದಲ್ಲಿ ಅಥವಾ ಮುಟ್ಟು ಕಳೆದು ಶುದ್ಧಳಾಗಿರುವ ಸಂದರ್ಭದಲ್ಲಿ ಅವಳೊಡನೆ ಸಂಸರ್ಗ ಮಾಡಿದ ಬಳಿಕ ಪತಿ ತಲಾಖ್ ಹೇಳುವುದಾದರೆ ಅದು ಸಿಂಧುವಾಗದು. ಈ ಬಗ್ಗೆ ಖುರ್‌ಆನ್ ಹೀಗೆ ಹೇಳುತ್ತದೆ: "ನೀವು ಮಡದಿಯರನ್ನು ಪರಿತ್ಯಜಿಸುವುದಾದರೆ ಅದಕ್ಕೆ ನಿರ್ಣಯಿಸಲಾದ ಕಾಲದಲ್ಲಿ ಅವರನ್ನು ಬಿಟ್ಟು ಬಿಡಿರಿ. ಆ ನಿಗದಿತ ಕಾಲವನ್ನು ನೀವು ಲೆಕ್ಕ ಹಾಕಿರಿ. ನಿಮ್ಮ ಪ್ರಭುವಾದ ಅಲ್ಲಾಹನ ಭಯ ನಿಮಗಿರಲಿ." (65:2)

ಈ ವಾಕ್ಯದಲ್ಲಿ ಹೇಳಲಾದ ನಿಗದಿತ ಕಾಲ ಯಾವುದೆಂದು ಮುಹಮ್ಮದ್ ಪೈಗಂಬರರು(ಸ) ಸ್ಪಷ್ಟಪಡಿಸಿದ್ದಾರೆ. ಹಝ್ರತ್ ಉಮರ್(ರ) ಅವರ ಮಗ ಹಝ್ರತ್ ಅಬ್ದುಲ್ಲಾ(ರ) ತನ್ನ ಪತ್ನಿಯನ್ನು ಋತುಮತಿಯಾದ ಕಾಲದಲ್ಲಿ ತಲಾಖ್ ಹೇಳಿದುದಾಗಿ ಹಝ್ರತ್ ಉಮರ್ ಮೂಲಕ ತಿಳಿದಾಗ ಪೈಗಂಬರರು ಕೋಪಿಷ್ಠರಾಗಿ ಹೀಗೆ ನುಡಿದರು: "ಆತನು ಆಕೆಯನ್ನು ವಾಪಸು ಸ್ವೀಕರಿಸಿ ತನ್ನೊಂದಿಗೆ ಇರಿಸಿಕೊಳ್ಳಲಿ; ನಂತರ ಆಕೆ ಶುದ್ಧಳಾಗಿ ಇನ್ನೊಮ್ಮೆ ಮುಟ್ಟಾಗಿ ಶುದ್ಧಳಾದ ಬಳಿಕ, ಆಕೆಯನ್ನು ತ್ಯಜಿಸಲು ಬಯಸುವನಾದರೆ ಆಕೆಯೊಡನೆ ಸಂಭೋಗ ಮಾಡದ ಸ್ಥಿತಿಯಲ್ಲಿ ಆತನು ಆಕೆಗೆ ವಿಚ್ಛೇದನ ನೀಡಲಿ. ಅಲ್ಲಾಹನು ವಿಧಿಸಿದ ಪ್ರಕಾರ ತಲಾಖಿಗಿರುವ ನಿಶ್ಚಿತ ಕಾಲ ಇದಾಗಿದೆ." (ಬುಖಾರಿ).

ಅತ್ಯಂತ ವಿಶ್ವಾಸಯೋಗ್ಯವಾದ ಬುಖಾರಿ, ಮುಸ್ಲಿಂ ಎಂಬೀ ಹದೀಸು ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟ ಪ್ರವಾದಿ ವಚನಗಳಿಂದ ಸ್ಪಷ್ಟವಾಗುವುದೇನೆಂದರೆ, ಒಬ್ಬ ಮುಸ್ಲಿಮನಿಗೆ ತನ್ನ ಪತ್ನಿಯನ್ನು ಅವಳು ಋತುಮತಿಯಾಗಿರುವ ಕಾಲದಲ್ಲಾಗಲಿ, ಮುಟ್ಟು ಕಳೆದ ಶುದ್ಧ ಕಾಲದಲ್ಲಿ ಅವಳೊಂದಿಗೆ ಸಂಭೋಗ ನಡೆಸಿದ ಸ್ಥಿತಿಯಲ್ಲಾಗಲಿ, ತಲಾಖ್ ಹೇಳಿ ವಿಚ್ಛೇದಗೊಳಿಸಬಾರದು. ಪವಿತ್ರ ಖುರ್‌ಆನ್ ಹೇಳುತ್ತದೆ: "ತಲಾಖ್ ಪಡೆದ ಸ್ತ್ರೀಯರು ಮೂರು ಆರ್ತವಕಾಲ ಕಾಯಬೇಕಾಗಿದೆ" (2:229). ಈ ಖುರ್‌ಆನ್ ವಾಕ್ಯದಿಂದಲೂ ಸ್ತ್ರೀಯು ಮುಟ್ಟು ಕಳೆದು ಶುದ್ಧಳಾಗಿರುವ ಕಾಲದಲ್ಲೇ ವಿವಾಹ ವಿಚ್ಛೇದ ಮಾಡಬಹುದೆಂದು ತಿಳಿದು ಬರುತ್ತದೆ. ಹೀಗೆ ಸ್ತ್ರೀ ಮುಟ್ಟುಕಾಲ ಕಳೆದು ಶುಚಿಯಾದ ಕಾಲದಲ್ಲಿ ತಲಾಖ್ ಹೇಳಲಾಗುವುದಾದರೆ ಮಾತ್ರವೇ ಮೂರು ಋತುಕಾಲ ಕಳೆಯುವವರೆಗೆ ಅವಳು ಇನ್ನೊಬ್ಬ ಪತಿಯನ್ನು ವರಿಸಬಾರದೆಂಬ ಪ್ರಸ್ತುತ ಆಜ್ಞೆ ಅರ್ಥವತ್ತಾಗುತ್ತದೆ. ಒಟ್ಟಾರೆ, ಇಸ್ಲಾಮೀ ನಿಯಮವನ್ನನುಸರಿಸಿ, ಮೇಲೆ ವಿವರಿಸಿದ ವಿಧದಲ್ಲಿ ಹೊರತು, ಗಂಡ ಬಯಸುವ ಯಾವ ಸಮಯದಲ್ಲೂ ಹೆಂಡತಿಯೊಡನೆ, "ನಾನು ನಿನ್ನನ್ನು ಪರಿತ್ಯಜಿಸುತ್ತೇನೆ" ಎಂದು ಹೇಳುವುದರಿಂದ ಮಾತ್ರ ವಿವಾಹ ಸಂಬಂಧ ಬೇರ್ಪಡುವುದಿಲ್ಲ. ಹಾಗೆ ಒಮ್ಮೆ ಹೇಳುವುದರಿಂದಾಗುವ ಅಗಲುವಿಕೆ ಇಸ್ಲಾಂ ಧರ್ಮದಲ್ಲಿರುವ ವಿವಾಹ ವಿಚ್ಛೇದನ ನಿಯಮ ಪ್ರಕಾರ ಸಿಂಧುವೆನಿಸುವುದಿಲ್ಲ. ಇಸ್ಲಾಂ ಇಂತಹ ನಿಯಮ ಇರಿಸಿಕೊಂಡಿರುವುದು ದಾಂಪತ್ಯ ಸಂಬಂಧವನ್ನು ಸುಲಭದಲ್ಲಿ ಮುರಿದುಬಿಡಲು ಅಸಾಧ್ಯವಾಗುವಂತೆ ಸುದೃಢಗೊಳಿಸಲಿಕ್ಕಾಗಿದೆ. ಮುಟ್ಟುಕಾಲದಲ್ಲಿ ಪತ್ನಿಯನ್ನು ಭೋಗಿಸಲು ಅನುಕೂಲ ಪರಿಸ್ಥಿತಿ ಇಲ್ಲವಾದುದರಿಂದ ಚಪಲ ಹೃದಯಿಯಾದ ಗಂಡ ಕ್ಷುಲ್ಲಕ ಕಾರಣಕ್ಕಾಗಿ ಅವಳಿಗೆ ತಲಾಖ್ ಕೊಡಲು ಪ್ರೇರಿತನಾಗಬಹುದು. ಆದರೆ ಅವಳು ಮುಟ್ಟು ಕಳೆದು ಶುದ್ಧಳಾಗಿರುವ ಸಂದರ್ಭದಲ್ಲಿ ಅವಳೊಡನೆ ರತಿಕ್ರೀಡೆ ನಡೆಸಲು ಅವನು ಪ್ರೇರಿತನಾಗುವುದರಿಂದ ಆ ಘಟ್ಟದಲ್ಲಿ ಅವನ ಕ್ರೋಧ ಸ್ವಾಭಾವಿಕವಾಗಿಯೇ ಶಾಂತಗೊಂಡು ಅವನು ಅವಳನ್ನು ಪ್ರೀತಿಸಲಿಕ್ಕೆ ತೊಡಗುವುದು ಸಂಭವನೀಯ. ಹಾಗೆ ಅವರು ಪರಸ್ಪರ ಸರಸದಿಂದ ರತಿಕೇಳಿ ನಡೆಸಿದ ನಂತರ ಮತ್ತೂ ಯಾವುದೇ ಕಾರಣವಶಾತ್ ಪರಸ್ಪರ ಅಗಲುವರಾದರೆ, ಸಂಭೋಗ ಉಂಟಾದುದರಿಂದ ವಿವಾಹ ಸಂಬಂಧವನ್ನು ಕಡಿಯುವುದು ನಿಯಮಬದ್ಧವಾಗುವುದಿಲ್ಲ. ಅದಕ್ಕೆ ಅವರು ಮುಂದಿನ ಋತುಕಾಲ ಕಳೆಯುವವರೆಗೆ, ಅಥವಾ ಸ್ತ್ರೀ ಗರ್ಭ ಧರಿಸಿದ್ದಾಳೆಯೇ ಎಂದು ತಿಳಿಯುವವರೆಗೆ ಕಾದಿರಬೇಕಾಗಿದೆ. ಇಷ್ಟು ಕಾಲದ ನಿರೀಕ್ಷೆಯಿಂದ ಅವನ ಕೋಪ ಸಾಕಷ್ಟು ಶಾಂತಗೊಳ್ಳಲಿಕ್ಕೂ ಅವಳನ್ನು ತೊರೆಯಬೇಕೆಂಬ ಭಾವನೆಯಿಂದ ಅವನು ಹಿಮ್ಮೆಟ್ಟಲಿಕ್ಕೂ, ಹಾಗೆ ಅವರೊಳಗೆ ಅನ್ಯೋನ್ಯ ಇನ್ನೊಮ್ಮೆ ಸರಸವುಂಟಾಗಲಿಕ್ಕೂ ಹೇತುವಾಗಬಹುದು. ಆದ್ದರಿಂದಲೇ, ಸ್ತ್ರೀ ರಜಸ್ವಲೆಯಾಗಿರುವ ಕಾಲದಲ್ಲಾಗಲಿ, ಶುದ್ಧಿಕಾಲದಲ್ಲಿ ಸಂಭೋಗ ನಡೆದ ಸ್ಥಿತಿಯಲ್ಲಾಗಲಿ ಅವಳಿಗೆ ತಲಾಖ್ ಕೊಡಬಾರದೆಂದು ಇಸ್ಲಾಂ ಆದೇಶಿಸುತ್ತದೆ. ಇದು ವಿವಾಹ ವಿಚ್ಛೇದನವನ್ನು ಸಾಕಷ್ಟು ತಡೆಯುವ ಒಂದು ಉಪಾಯವೇ ಆಗಿದೆ.

**ನಾಲ್ಕನೆಯದಾಗಿ,** ವಿವಾಹ ಸಂಬಂಧವನ್ನು ಯಥೇಷ್ಟ ಮುರಿಯದಿರಲಿಕ್ಕೆ ಇಸ್ಲಾಂ ನಿರ್ದೇಶಿಸಿರುವ ನಿಯಮವೇನೆಂದರೆ, ತಲಾಖ್ ಪಡೆದ ಸ್ತ್ರೀ ಮೂರು ತಿಂಗಳ ತನಕ ಇನ್ನೊಬ್ಬ ಗಂಡನನ್ನು ವರಿಸಬಾರದೆಂದಾಗಿದೆ. (ಪವಿತ್ರ ಖುರ್‌ಆನ್ 2:229). ಒಬ್ಬನು ಯಾವುದಾದರೂ ಕಾರಣದಿಂದ ತನ್ನ ಹೆಂಡತಿಗೆ ತಲಾಖ್ ಹೇಳಿದರೆ ಸಹ 'ಇದ್ದಃ' ಎಂದು ಕರೆಯಲಾಗುವ ಆ ನಿಗದಿತ ಕಾಲ – ಮೂರು ಮಾಸ– ಕಳೆಯುವುದಕ್ಕಿಂತ ಮೊದಲು, ಬೇಕಾದರೆ ಆತನು ಆಕೆಯನ್ನು ಪುನಃ ಸ್ವೀಕರಿಸಬಹುದು. ಆತನು ತಾತ್ಕಾಲಿಕವಾದ ಕೋಪಾವೇಶದಿಂದಾಗಲಿ, ಯಾವುದಾದರೂ ಕ್ಷುಲ್ಲಕ ಕಾರಣವನ್ನು ಆಸ್ಪದ ಮಾಡಿಯಾಗಲಿ ಹೆಂಡತಿಗೆ ತಲಾಖ್ ಹೇಳಿದರೆ, ಆ ಮೂರು ಮುಟ್ಟು ಕಾಲ ಕಳೆಯುವುದರೊಳಗೆ ಆತನು ಶಾಂತಚಿತ್ತನಾಗಲಿಕ್ಕೂ ಮರುಚಿಂತನೆಯ ಫಲವಾಗಿ ಆತನ ಕೋಪ ಉಪಶಮನಗೊಳ್ಳಲಿಕ್ಕೂ, ಹಾಗೆ ಆತನು ಪತ್ನಿಯನ್ನು ವಾಪಸು ಸ್ವೀಕರಿಸಲಿಕ್ಕೆ ಪ್ರೇರಿತನಾಗಲಿಕ್ಕೂ ಅವಕಾಶವಿದೆಯಷ್ಟೇ. ಮೂರು ಋತುಘಟ್ಟ ಕಳೆದ ನಂತರ ಅವಳನ್ನು ಸ್ವೀಕರಿಸಲು ಆತನು ಇಚ್ಛಿಸಿದರೆ, ಪುನರ್ವಿವಾಹ ಮೂಲಕ ಹಾಗೆ ಮಾಡಬಹುದಾಗಿದೆ. ಹೀಗೆ ಎರಡು ಸಲ ತಲಾಖ್ ಹೇಳಿದರೂ ಕಾಲಾವಧಿಯೊಳಗಾದರೆ ಹೊಸ ವಿವಾಹ ಕರ್ಮವಿಲ್ಲದೆಯೂ ಕಾಲಾವಧಿಯ ಬಳಿಕವಾದರೆ ಹೊಸ ವಿವಾಹ ಕರ್ಮದ ಮೂಲಕವೂ ಆಕೆಯನ್ನೇ ಪುನಃ ಪತ್ನಿಯಾಗಿ ವರಿಸಬಹುದು. "ತಲಾಖ್ ಎರಡು ಸಲವಾಗಿದೆ; ನಂತರ ಒಂದೋ ನ್ಯಾಯೋಚಿತವಾಗಿ ಅವಳನ್ನು ಇರಿಸಿಕೊಳ್ಳಬೇಕು ಅಥವಾ ಒಳ್ಳೆಯ ರೀತಿಯಲ್ಲಿ ಬಿಡುಗಡೆಮಾಡಬೇಕು" (2:230) ಎಂಬ ಖುರ್‌ಆನ್ ವಾಕ್ಯದಿಂದ ಈ ವಿಚಾರ ಸ್ಪಷ್ಟವಾಗುತ್ತದೆ. "ನೀವು ಸ್ತ್ರೀಯರನ್ನು ತಲಾಖ್ ಹೇಳಿ ಪರಿತ್ಯಜಿಸಿ ಅವರ ಕಾಲಾವಧಿ ಕಳೆದರೆ ನ್ಯಾಯೋಚಿತವಾಗಿ ಅನ್ಯೋನ್ಯ ಇಷ್ಟಪಡುವ ಪಕ್ಷದಲ್ಲಿ ಅವರು ಅವರ (ಮೊದಲ) ಗಂಡಂದಿರನ್ನೇ ಮದುವೆಯಾಗುವುದರಿಂದ (ಎಲೈ ಸ್ತ್ರೀಯರ ಬಂಧುಗಳೇ) ನೀವು ಅವರನ್ನು ತಡೆಯಬಾರದು" (2:233) ಎಂಬ ಖುರ್‌ಆನ್ ವಾಕ್ಯದಲ್ಲಿ ತಲಾಖ್ ಪಡೆದ ಸ್ತ್ರೀಯರು ಅವರ ಕಾಲಾವಧಿ ಕಳೆದರೆ ತಮ್ಮನ್ನು

ತಲಾಖ್ ಹೇಳಿ ಅಗಲಿದ ಗಂಡಂದಿರನ್ನೇ ಮದುವೆ ಮಾಡಿಕೊಳ್ಳಬಹುದೆಂದು ಪ್ರಸ್ತಾವಿಸಲಾದುದು, ಒಂದು ಸಲವಾಗಲಿ ಎರಡು ಸಲವಾಗಲಿ ತಲಾಖ್ ಕೊಟ್ಟು ಕಾಲಾವಧಿ ಪಡೆದ ಸ್ತ್ರೀಯರನ್ನು ಪುನಃ ವಿವಾಹ ಕರ್ಮ ಮೂಲಕ ಸ್ವೀಕರಿಸುವುದರ ಕುರಿತಾಗಿದೆ. ಪ್ರಸ್ತುತ ಖುರ್‌ಆನ್ ವಚನಕ್ಕೆ ಹಝ್ರತ್ ಇಬ್ನು ಅಬ್ಬಾಸ್(ರ) ಹೇಳಿರುವ ವ್ಯಾಖ್ಯಾನ ಈ ರೀತಿಯಾಗಿದೆ: "ಮೂರನೆಯ ಬಾರಿ ಒಬ್ಬನು ತನ್ನ ಪತ್ನಿಗೆ ತಲಾಖ್ ಹೇಳಿದರೆ, ನಂತರ ಅವನಿಗೆ ಅವಳನ್ನು ಪುನಃ ಹೆಂಡತಿಯಾಗಿ ಸ್ವೀಕರಿಸಲಾಗದು. ಆದರೆ ಇನ್ನೊಬ್ಬನು ಅವಳನ್ನು ಮದುವೆಯಾಗಿ ಪತ್ನಿಯಾಗಿ ಸ್ವೀಕರಿಸಿದ ಬಳಿಕ ಅವನು ಇಸ್ಲಾಮೀ ನಿಯಮಾನುಸಾರ ಸ್ವಇಚ್ಛೆಯಿಂದ ಅವಳಿಗೆ ತಲಾಖ್ ಹೇಳಿ ಬೇರ್ಪಟ್ಟು ಅವಳ 'ಇದ್ದಃ' ಎಂಬ ಕಾಲಾವಧಿ ಕಳೆದರೆ ಮಾತ್ರ ಮೊದಲಿನ ಗಂಡನಿಗೆ ಬೇಕೆಂದಾದರೆ ಅವಳನ್ನು ವಿವಾಹ ಮಾಡಿಕೊಳ್ಳಬಹುದು." ಆದ್ದರಿಂದಲೇ, ಎರಡು ಸಲ ತಲಾಖ್ ಹೇಳಿದ ಬಳಿಕ ಗಂಡ ಅವಳನ್ನು ನ್ಯಾಯೋಚಿತವಾಗಿ ಪತ್ನಿಯಾಗಿ ಇರಿಸಿಕೊಳ್ಳಬೇಕು ಅಥವಾ ಒಳ್ಳೆಯ ರೀತಿಯಲ್ಲಿ ಅವಳನ್ನು ಬಿಡುಗಡೆ ಮಾಡಬೇಕೆಂದು ಹೇಳಿದುದನ್ನು ಮುಂದುವರಿಸಿ ಪವಿತ್ರ ಖುರ್‌ಆನ್ ಈ ರೀತಿ ಹೇಳಿರುತ್ತದೆ: "ನಂತರ (ಮೂರನೆಯ ಸಲ) ಅವನು ಅವಳ ತಲಾಖ್ ಹೇಳಿದರೆ, ಆ ನಂತರ ಅವಳು ಅವನಿಗೆ ಹೆಂಡತಿಯಾಗಲಾರಳು– ಅವಳು ಇನ್ನೊಬ್ಬ ಗಂಡನನ್ನು ವರಿಸಿದ ಬಳಿಕ ಹೊರತು" (2:231). ಹೀಗೆ ಒಮ್ಮೆ ತಲಾಖ್ ಹೇಳಿದ ನಂತರ ನಿರ್ದಿಷ್ಟ ಕಾಲಾವಧಿಯೊಳಗಾದರೆ ಪುನರ್ವಿವಾಹದ ವಿನಾ ಮತ್ತು ಕಾಲಾವಧಿ ಕಳೆದರೆ ಪುನರ್ವಿವಾಹ ಮೂಲಕ; ಅದೇ ಪ್ರಕಾರವೇ ಎರಡನೇ ಸಲ ತಲಾಖ್ ಹೇಳಿದರೂ ಕಾಲಾವಧಿಯೊಳಗೆ ವಿವಾಹ ಇಲ್ಲದೆಯೂ ಕಾಲಾವಧಿ ಕಳೆದರೆ ವಿವಾಹ ಮೂಲಕವೂ ಅವಳನ್ನು ಮತ್ತೊಮ್ಮೆ ಪತ್ನಿಯಾಗಿ ಸ್ವೀಕರಿಸಬಹುದೆಂದು ಇಸ್ಲಾಂ ನಿರ್ದೇಶಿಸಿರುವುದು ಪತಿ–ಪತ್ನಿಯರು ಸಾಧ್ಯವಿದ್ದಷ್ಟರ ಮಟ್ಟಿಗೆ ದಾಂಪತ್ಯ ಸಂಬಂಧವನ್ನು ಪಾಲಿಸಿಕೊಂಡು ಹೋಗಲಿಕ್ಕೇ ಆಗಿದೆ. ಒಟ್ಟಾರೆ, ಇಸ್ಲಾಮಿನ ಈ ನಿಯಮ ವಿವಾಹ ಸಂಬಂಧವನ್ನು ಕೊನೆಗೊಳಿಸದಿರಲಿಕ್ಕಾಗಿ ಅದು ನಿರ್ದೇಶಿಸುವ ಒಂದು ಉಪಾಯವೆಂದೇ ಹೇಳಬಹುದು. ಗಂಡ–ಹೆಂಡಿರು ತಮ್ಮ ಈ ಸಂಬಂಧವನ್ನು ಬೇರ್ಪಡಿಸಿ ಇನ್ನೊಮ್ಮೆ ಅವರು ತಮ್ಮೊಳಗೆ ಒಂದುಗೂಡಲಿಕ್ಕೆ ಒಂದು ಸೀಮೆಯನ್ನು ನಿಶ್ಚಯಿಸದಿದ್ದ ಪಕ್ಷದಲ್ಲಿ ವಿವಾಹ ಸಂಬಂಧ ಅರ್ಥರಹಿತವೂ ವಿವಾಹ ವಿಚ್ಛೇದನ ವಿನೋದವೂ ಆಗಿ ಮಾರ್ಪಡುವುವು. ಆದುದರಿಂದ, ಎರಡು ಸಲ ತಲಾಖ್ ಹೇಳಿ ಬಿಟ್ಟ ಹೆಂಡತಿಯನ್ನು ತಿರುಗಿಸಿ ಸ್ವೀಕರಿಸಬಹುದಾದರೂ, ಮೂರನೆಯ ಬಾರಿ ತಲಾಖ್ ಹೇಳಿದರೆ ನಂತರ ಅವಳನ್ನು ಆ ರೀತಿಯಲ್ಲಿ ತಿರುಗಿ ಪಡೆಯುವ ಹಕ್ಕು ಇಲ್ಲದಾಗುತ್ತದೆಂದು ಇಸ್ಲಾಂ ವಿಧಿಸಿರುತ್ತದೆ. ಆದ್ದರಿಂದಲೇ ಮೂರನೆಯ ಬಾರಿ ತಲಾಖ್ ಪಡೆದ ಸ್ತ್ರೀಯನ್ನು ಪುನಃ ವರಿಸುವುದರ ಕುರಿತು ಪ್ರಸ್ತುತ ಖುರ್‌ಆನ್ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿದೆಯೆಂದು ಹೇಳಲಾಗುತ್ತದೆ.

**ಐದನೆಯದಾಗಿ,** ವಿವಾಹ ಸಂಬಂಧವನ್ನು ಕೊನೆಗೊಳಿಸದಿರಲಿಕ್ಕೆ ಇಸ್ಲಾಂ ನಿರ್ದೇಶಿಸಿರುವ ನಿಯಮವೇನೆಂದರೆ, ಒಬ್ಬನು ತನ್ನ ಪತ್ನಿಯನ್ನು ಒಂದೇ ಸಂದರ್ಭದಲ್ಲಿ ಮೂರು ಬಾರಿ ತಲಾಖ್ ಹೇಳಬಾರದು. ಗಂಡನು ಎಷ್ಟು ಅವಿವೇಕಿಯೂ ಕೋಪಿಷ್ಠನೂ ಆಗಿದ್ದರೂ ಅವನಿಗೆ ತನ್ನ ಹೆಂಡತಿಯನ್ನು ಕ್ಷುಲ್ಲಕ ಕಾರಣಕ್ಕಾಗಿ ಬೇರ್ಪಡಿಸಲು ಸಾಧ್ಯವಾಗದಿರಲಿಕ್ಕಾಗಿಯೇ ಒಮ್ಮೆಲೇ ಮೂರು ತಲಾಖ್ ಸಹ ಹೇಳಬಾರದೆಂದು ಇಸ್ಲಾಂ ವಿಧಿಸುತ್ತದೆ. ತಾತ್ಕಾಲಿಕವಾದ ಉದ್ವೇಗದಿಂದ ಒಬ್ಬನು ಪತ್ನಿಗೆ ತಲಾಖ್ ಹೇಳುವವನಾದರೆ ಕೂಡ ಅವನಿಗೆ ಒಂದು ಸಂದರ್ಭದಲ್ಲಿ ಒಮ್ಮೆ ಮಾತ್ರ ತಲಾಖ್ ಹೇಳಲು ಸಾಧ್ಯ. ಹಾಗೆ ಒಮ್ಮೆ ತಲಾಖ್ ಹೇಳಿದರೆ, ಅವನಿಗೆ ಕಾಲಾವಧಿಯೊಳಗೆ ಬೇರೆ ವಿವಾಹ ಕರ್ಮವಿಲ್ಲದೆಯೂ ಕಾಲಾವಧಿ ಕಳೆದರೆ ಹೊಸ ವಿವಾಹ ಕರ್ಮದ ಮೂಲಕವೂ ಅವಳನ್ನು ಪುನಃ ಪತ್ನಿಯಾಗಿ ಸ್ವೀಕರಿಸಬಹುದು. ಹೀಗೆ ಎರಡು ಸಲ ಆಗಬಹುದೆಂದು ಇಸ್ಲಾಂ ಒಪ್ಪುತ್ತದೆ. ಇಷ್ಟು ಅನುಕೂಲತೆ ಲಭಿಸಿಯೂ ಅವನು ಮೂರನೆಯ ಸಲ ಸಹ ಹೆಂಡತಿಗೆ ತಲಾಖ್ ಹೇಳಿ ಅಗಲಿದರೆ ಮಾತ್ರ ನಂತರ ಅವನಿಗೆ ಅವಳನ್ನು ಸ್ವೀಕರಿಸಲಿಕ್ಕೆ ಸಾಧ್ಯವಿಲ್ಲ. ಒಂದೇ ಸಂದರ್ಭದಲ್ಲಿ ಮೂರು ಸಲ ತಲಾಖ್ ಹೇಳುವುದು ಇಸ್ಲಾಮಿಕ ಅಧ್ಯಾಪನಗಳಿಗೆ ವಿರುದ್ಧ. ಈ ಸತ್ಯಾಂಶ, "ತಲಾಖ್ ಎರಡು ಸಲವಾಗಿದೆ. ನಂತರ ಒಂದೋ ಅವಳನ್ನು ನ್ಯಾಯೋಚಿತವಾಗಿ ಇರಿಸಿಕೊಳ್ಳಬೇಕು ಅಥವಾ ಔದಾರ್ಯಪೂರ್ವಕ ಬಿಟ್ಟುಬಿಡಬೇಕು" ಎಂಬ ಖುರ್‌ಆನ್ ವಾಕ್ಯದಿಂದ(2:230) ಸ್ಪಷ್ಟವಾಗಿಯೂ, ತಲಾಖ್ ಹೇಳಿದ ಬಳಿಕ ಕಾಲಾವಧಿ ಪಡೆದ ಸ್ತ್ರೀಯನ್ನು ಪುನಃ ವಿವಾಹವಾಗಬಹುದು(2:233) ಹಾಗೂ ಮೂರನೆಯ ತಲಾಖ್ ಹೇಳಿದ ಬಳಿಕ ಅವಳನ್ನು ವಿವಾಹವಾಗಬಾರದು(2:231) ಎಂಬ ಖುರ್‌ಆನ್ ವಚನಗಳಿಂದ ಸೂಚ್ಯವಾಗಿಯೂ ಗ್ರಾಹ್ಯವಾಗುತ್ತದೆ. ಒಂದೇ ಸಂದರ್ಭದಲ್ಲಿ ಮೂರು ತಲಾಖ್ ಹೇಳಬಾರದೆಂದು ಪ್ರವಾದಿ ಮುಹಮ್ಮದ್(ಸ) ಸಹ ಹೇಳಿದ್ದಾರೆ. ಒಂದು ಹದೀಸ್ ಈ ರೀತಿ ಇದೆ: "ಒಬ್ಬನು ತನ್ನ ಪತ್ನಿಗೆ ಒಂದೇ ಸಂದರ್ಭದಲ್ಲಿ ಮೂರು ಸಲ ತಲಾಖ್ ಹೇಳಿರುವುದಾಗಿ ಮುಹಮ್ಮದ್ ಪೈಗಂಬರರು(ಸ) ಅರಿತಾಗ ಅವರು ಕೋಪದಿಂದ ಎದ್ದು ನಿಂತುಕೊಂಡು, 'ನಾನು ನಿಮ್ಮ ಮಧ್ಯೆ ಇರುವಾಗಲೇ ಮಹಾಮಹಿಮನಾದ ಅಲ್ಲಾಹನ ಗ್ರಂಥದೊಂದಿಗೆ ಆತನು ವಿನೋದವಾಡುವುದೇ?' ಎಂದು ನುಡಿದರು." (ನಸಾಈ). ಇದರಿಂದ ಒಮ್ಮೆಲೇ ಮೂರು ತಲಾಖ್ ಹೇಳುವುದನ್ನು ಮುಹಮ್ಮದ್ ಪೈಗಂಬರರು(ಸ) ವಿರೋಧಿಸಿರುವರು ಮಾತ್ರವಲ್ಲ, ಅದು ಅಲ್ಲಾಹನ ಗ್ರಂಥವಾದ ಪವಿತ್ರ ಖುರ್‌ಆನಿನ ಉಪದೇಶವನ್ನು ನಿರ್ಲಕ್ಷ್ಯ ಮಾಡಿ ಅದನ್ನು ಆಟಿಕೆಯಾಗಿ ಮಾಡುವ ಒಂದು ವರ್ತನೆ ಕೂಡ ಆಗಿದೆಯೆಂದು ಮನದಟ್ಟಾಗುತ್ತದೆ.

ಒಂದೇ ಸಂದರ್ಭದಲ್ಲಿ ಮೂರು ತಲಾಖ್ ಸಹ ಹೇಳಬಾರದೆಂದೂ, ಹೇಳಿದರೆ ಸಹ ಅದನ್ನು ಒಂದು ತಲಾಖ್ ಮಾತ್ರವೆಂದು ಗಣಿಸಲಾಗುವುದೆಂದೂ ಇಸ್ಲಾಂ ಕಲಿಸುತ್ತದೆ.

ಹದೀಸಿನ ಪಂಡಿತರಾದ ಕೆಲವರೂ ಇಮಾಮಿಯ್ಯ ಪಂಥದವರೂ ಅಹ್ಲ್‌ಬೈತಿಗೆ ಸೇರಿದ ಕೆಲವರೂ ಇಮಾಂ ಇಬ್ನು ಹಸ್ಮ್

ಮೊದಲಾದವರೂ ಒಂದೇ ಕಾಲದಲ್ಲಿ ಒಮ್ಮೆಲೇ ಹೇಳಲ್ಪಡುವ ಮೂರು ತಲಾಖ್ ನಿಯಮ ವಿರುದ್ಧವಾದುದರಿಂದ ಒಂದು ತಲಾಖ್ ಸಹ ಆಗಲಾರದೆಂದು ಹೇಳಿದ್ದಾರೆ. ಹದೀಸಿನ ಪಂಡಿತರಲ್ಲಿ ಹೆಚ್ಚಿನವರೂ ಹಝ್ರತ್ ಮುಹಮ್ಮದಿಬ್ನು ಇಸ್‌ಹಾಖ್, ಅತ್ವಾ, ಇಕ್ರಿಮ ಮುಂತಾದ ತಾಬಿಯೀಗಳೂ, ಇಬ್ನು ತೀಮಿಯ್ಯ, ಇಬ್ನು ಖಯ್ಯಿಂ, ಮುಹಮ್ಮದಿಬ್ನು ಇಬ್ರಾಹೀಂ, ಶೌಕಾನಿ ಮೊದಲಾದ ಪಂಡಿತರೂ ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖ್ ಒಂದು ತಲಾಖ್ ಎಂದೇ ಪರಿಗಣಿಸಲ್ಪಡುವುದೆಂದು ಹೇಳಿದ್ದಾರೆ. ಹಝ್ರತ್ ಇಬ್ನು ಅಬ್ಬಾಸ್‌ರವರ ಅಭಿಪ್ರಾಯ ಸಹ ಇದೇ ಪ್ರಕಾರವಾಗಿತ್ತೆಂದು ಒಂದು ಹೇಳಿಕೆಯಿಂದ ಮನವರಿಕೆಯಾಗುತ್ತದೆ. ಮಾತ್ರವಲ್ಲ, ಅವರು ನಿವೇದಿಸಿದ ಒಂದು ಹದೀಸಿನಲ್ಲಿ, ಒಂದೇ ಸಮಯದಲ್ಲಿ ಹೇಳುವ ಮೂರು ತಲಾಖ್ ಒಂದೆಂದು ಮಾತ್ರ ಎಣಿಸಲಾಗುವುದೆಂದು ಮುಹಮ್ಮದ್ ಪೈಗಂಬರರು(ಸ) ನುಡಿದಿದ್ದಾರೆಂದು ಪ್ರಸ್ತಾಪಿಸಲಾಗಿದೆ.

**ಆರನೆಯದಾಗಿ,** ಇಚ್ಛಾನುಸಾರ ವಿವಾಹ ವಿಚ್ಛೇದಗೊಳಿಸದಿರಲಿಕ್ಕೆ ಇಸ್ಲಾಂ ನಿರ್ದೇಶಿಸಿರುವ ಉಪಾಯ, ಮೂರು ಸಲ ತಲಾಖ್ ಹೇಳಿ ಪರಿತ್ಯಜಿಸಿದ ಪತ್ನಿಯನ್ನು ಪುನಃ ಮೊದಲ ಪತಿ ಸ್ವೀಕರಿಸಬಾರದೆಂಬ ನಿಯುಮವಾಗಿದೆ. ಮತ್ತೆ ಅವಳು ಸ್ವೀಕರಿಸಲರ್ಹಳಾಗಬೇಕಾದರೆ, ಬೇರೊಬ್ಬನು ಅವಳನ್ನು ಮದುವೆಯಾಗಿ ಅವನು ಅವಳನ್ನು ಸ್ವಂತ ಇಚ್ಛೆಯಿಂದ ತಲಾಖ್ ಹೇಳಿ ಬಿಡುಗಡೆ ಮಾಡಬೇಕಾಗಿದೆ. ಅಂದರೆ, ಮೊದಲ ಗಂಡ ಅವಳನ್ನು ತನ್ನ ಸಹಧರ್ಮಿಣಿಯನ್ನಾಗಿ ಮಾಡಲು ಸ್ವಇಚ್ಛೆಯಿಂದ ಮದುವೆಯಾಗಿರುವ ಪ್ರಕಾರವೇ, ಅವರು ತಮ್ಮ ದಾಂಪತ್ಯ ಸಂಬಂಧ ಮುರಿದ ಬಳಿಕ, ಇನ್ನೊಬ್ಬನು ಅವಳನ್ನು ಎಂದೆಂದಿಗೂ ತನ್ನ ಸಹಧರ್ಮಿಣಿ ಮಾಡುವ ಉದ್ದೇಶದಿಂದ ಮದುವೆ ಮಾಡಿಕೊಂಡು, ಅನಂತರ ಇವರಿಗೆ ವಿವಾಹ ಸಂಬಂಧವನ್ನು ನಿರಾಂತಕವಾಗಿ ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದಾಗುವಾಗ ಈ ಎರಡನೆಯ ಗಂಡ ಸ್ವಇಚ್ಛೆಯಿಂದ ಅವಳನ್ನು ಪರಿತ್ಯಜಿಸಿದರೆ ಮಾತ್ರ ಮೊದಲ ಪತಿಗೆ ಬೇಕಾದರೆ ಅವಳನ್ನು ಮದುವೆಯಾಗಿ ತನ್ನ ಹೆಂಡತಿಯನ್ನಾಗಿ ಸ್ವೀಕರಿಸಬಹುದು. ಹೀಗೆ ಇಸ್ಲಾಂ ಒಂದು ನಿಯಮವನ್ನು ನಿರ್ದೇಶಿಸಿರುವುದು, ಗಂಡ ಹೆಂಡತಿಯನ್ನು ಸಾಧ್ಯವಾದಷ್ಟರ ಮಟ್ಟಿಗೆ ವಿವಾಹ ವಿಚ್ಛೇದನ ಮಾಡದಿರಲಿಕ್ಕೇ ಆಗಿದೆ. ಏಕೆಂದರೆ, ಎರಡನೇ ಪತಿ ಅವಳನ್ನು ಪರಿತ್ಯಜಿಸಿದ ನಂತರ ಮೊದಲ ಪತಿಗೆ ಪುನಃ ಅವಳನ್ನು ವಿವಾಹ ಮಾಡಿಕೊಳ್ಳಲು ಸಾಧ್ಯವಾಗುವ ಸಂದರ್ಭ ಬಹಳ ಅಪೂರ್ವವಾಗಿ ಮಾತ್ರ ಲಭಿಸಬಹುದು. ಆದ್ದರಿಂದ, ಮೂರು ತಲಾಖ್ ಸಹ ಹೇಳಿ ಬಿಟ್ಟರೆ, ನಂತರ ಪತ್ನಿಯನ್ನು ಪುನಃ ಸ್ವೀಕರಿಸಲಿಕ್ಕೆ ತನಗೆ ಅಸಾಧ್ಯವಾಗಬಹುದೆಂದು ಪತಿ ಅವಳಿಗೆ ಮೂರು ತಲಾಖ್ ಕೂಡ ಹೇಳಿ ಅಗಲುವುದರ ಬಗ್ಗೆ ಜಾಗ್ರತೆ ವಹಿಸುತ್ತಾನೆ.

ಒಟ್ಟಿನಲ್ಲಿ, ಪತಿ ಇಷ್ಟ ಬಂದಾಗ ತನ್ನ ಪತ್ನಿಯ ತಲಾಖ್ ಹೇಳುವುದರಿಂದ ಅವರ ವಿವಾಹ ಸಂಬಂಧ ಬೇರ್ಪಡುವುದೆಂದೂ ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖ್ ಮೂರಾಗಿಯೇ ಗಣಿಸಲಾಗುವುದೆಂದೂ ಮುಸ್ಲಿಮರು ಸರ್ವಸಾಮಾನ್ಯವಾಗಿ ಅಂಗೀಕರಿಸಿರುವರಾದರೂ ಅದು ಇಸ್ಲಾಮಿನ ಅಧ್ಯಾಪನಕ್ಕೆ ವಿರುದ್ಧವಾದುದರಿಂದ ಇಸ್ಲಾಮಿಕ ನಿಯಮವಾಗುವುದೇ ಇಲ್ಲ.

ಇಸ್ಲಾಮಿನ ಅಧ್ಯಾಪನ ಪ್ರಕಾರ ಯಾರಿಗೂ ತನ್ನ ಪತ್ನಿಯನ್ನು ಯಥೇಷ್ಟ ತಲಾಖ್ ಹೇಳಿ ಬಿಟ್ಟುಬಿಡಲಿಕ್ಕೆ ಆಗದೆಂದೂ ಯೋಗ್ಯ ಕಾರಣದಿಂದ, ಅದು ಸಹ ಕೆಲವು ಪ್ರತ್ಯೇಕ ನಿಬಂಧನೆಗಳಿಗೆ ಒಳಗಾದ ತರದಲ್ಲಿ ಮಾತ್ರವೇ ಹಾಗೆ ಮಾಡಬಹುದೆಂದೂ ಮೇಲಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ಯಾರೂ ತಲಾಖ್ ಹೇಳುವುದು ಸ್ವಂತ ಇಷ್ಟಾನುಸಾರವೂ ಪ್ರಜ್ಞಾಸಹಿತವಾಗಿಯೂ ಆಗಿರಬೇಕೆಂದು ಸಹ ಅದರಿಂದ ಮನಗಾಣಬಹುದು. ಆದ್ದರಿಂದ, ಗಂಡ ಹೆಂಡತಿಯೊಡನೆ ನಾನು ನಿನ್ನ ವಿವಾಹ ಸಂಬಂಧವನ್ನು ಮುರಿದಿದ್ದೇನೆ ಎಂದು ಮೂರು ಬಾರಿ ಒಂದೇ ಸವನೆ ಹೇಳಿದರೆ ಅದರಿಂದ ಆ ದಾಂಪತ್ಯ ಸಂಬಂಧ ಬೇರ್ಪಡುವುದಿಲ್ಲ. ಹಾಗೆಯೇ ಒಬ್ಬನು ಮದ್ಯದ ಅಮಲಿನಲ್ಲಿ ಹೇಳಿದರೆ ಸಹ ಇಸ್ಲಾಮಿಕ ನಿಯಮ ಪ್ರಕಾರ ಅದು ಸಿಂಧುವಾಗುವುದಿಲ್ಲ. ಒಬ್ಬ ಮುಸ್ಲಿಂ ಮದ್ಯಪಾನ ಮಾಡುವುದು ಯಾವ ರೀತಿ ಇಸ್ಲಾಮಿಕವಲ್ಲವೋ ಅದೇ ರೀತಿ ಮದ್ಯದ ಗುಂಗಿನಲ್ಲಿ ಅವನು ತನ್ನ ಹೆಂಡತಿಗೆ ತಲಾಖ್ ನೀಡಿ ಅಗಲುವುದೂ ಇಸ್ಲಾಮಿಕವಲ್ಲ. ಒಟ್ಟಾರೆ, ಹಾಗೆ ಮತ್ತೇರಿದ ಸಂದರ್ಭದಲ್ಲಿ ಹೇಳುವ ತಲಾಖ್ ಸಿಂಧುವಾಗದು. ತಲಾಖ್ ಹೇಳುವುದು ದಾಂಪತ್ಯ ಜೀವನವನ್ನು ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದ ಹಂತದಲ್ಲಿ ಮಾತ್ರವಾಗಿರಬೇಕು ಹಾಗೂ ಮುಟ್ಟಾದ ಕಾಲದಲ್ಲಾಗಲಿ ಸಂಯೋಗ ಉಂಟಾದ ಶುದ್ಧಿಕಾಲದಲ್ಲಾಗಲಿ ತಲಾಖ್ ಹೇಳಬಾರದೆಂಬ ಇಸ್ಲಾಮಿನ ಉಪದೇಶದಿಂದಲೇ, ಮದ್ಯದ ಮತ್ತಿನಲ್ಲಿ ಹೇಳುವ ತಲಾಖ್ ಸಿಂಧುವಾಗದೆಂದು ಮನವರಿಕೆಯಾಗುತ್ತದೆ. ಏಕೆಂದರೆ ಮತ್ತೇರಿ ತಲೆಗೆ ನಿಯಂತ್ರಣವಿಲ್ಲದ ಯಾವನಿಗಾದರೂ ಈ ನಿಬಂಧನೆಗಳನ್ನು ಪಾಲಿಸಲಿಕ್ಕೆ ಸಾಧ್ಯವಿಲ್ಲ. ಮಾತ್ರವಲ್ಲ, ಇಸ್ಲಾಂ ಧರ್ಮದ ಅಧ್ಯಾಪನ ಪ್ರಕಾರ, ಒಬ್ಬನು ಮಾಡಿದ ಕೆಲಸ ಅವನದೆಂದು ಗಣಿಸಲ್ಪಡಬೇಕಾದರೆ ಅದು ಅವನು ಸ್ವತಂತ್ರ ಬುದ್ಧಿಯಿಂದಲೂ ಯಾರ ಒತ್ತಾಯವಾಗಲಿ, ಪ್ರೇರಣೆಯಾಗಲಿ ಇಲ್ಲದೆಯೂ ಮಾಡಿರಬೇಕಾಗಿದೆ. ಈ ನಿಯಮ ಪ್ರಕಾರ ಮದ್ಯದ ಅಮಲಿನಲ್ಲಿ ಹೇಳುವ ತಲಾಖ್ ಇಸ್ಲಾಮಿಕ ತಲಾಖ್ ಎಂದು ಗಣಿಸಲ್ಪಡಲಾರದು. ಮಾತ್ರವಲ್ಲ, ಪ್ರವಾದಿ ಮುಹಮ್ಮದ್(ಸ) ಹೀಗೆ ನುಡಿದಿದ್ದಾರೆ: "ಬುದ್ಧಿ ಸ್ಥಿಮಿತದಲ್ಲಿಲ್ಲದವನ ಮತ್ತು ಮತಿಭ್ರಮಿಯ ತಲಾಖ್ ಹೊರತು ಎಲ್ಲ ತಲಾಖ್ ಸಿಂಧು" (ತಿರ್ಮಿದೀ)"ಒತ್ತಾಯ ಪೂರ್ವಕವಾದ ತಲಾಖ್ ನ್ಯಾಯಬದ್ಧವಲ್ಲ" (ಅಬೂ ದಾವೂದ್). ಬುದ್ಧಿ ಸ್ಥಿಮಿತದಲ್ಲಿಲ್ಲದವರು ಹೇಳುವ ತಲಾಖ್ ಸಿಂಧುವಾಗದೆಂದು ಹಝ್ರತ್ ಉಸ್ಮಾನ್, ಹಝ್ರತ್ ಅಲೀ, ಹಝ್ರತ್ ಇಬ್ನು ಅಬ್ಬಾಸ್ ಮೊದಲಾದ ಮಹನೀಯರು ಹೇಳಿರುವರೆಂದು ಇಮಾಂ ಬುಖಾರಿ ತನ್ನ ಹದೀಸ್ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಒಟ್ಟಿನಲ್ಲಿ, ಮದ್ಯದ ಮತ್ತಿನಲ್ಲಿ ಹೇಳುವ ತಲಾಖ್ ಎಂದಿಗೂ ಇಸ್ಲಾಮಿನ ದೃಷ್ಟಿಯಲ್ಲಿ ಧರ್ಮಬದ್ಧವಲ್ಲ.

ಇನ್ನು, ತಲಾಖ್ ಹೇಳಿ ಬಿಡುಗಡೆಗೊಳಿಸಿದ ಪತ್ನಿಯನ್ನು ಪುನಃ ಮೊದಲನೆಯ ಪತಿಯೇ ಸ್ವೀಕರಿಸುವುದರ ಕುರಿತು ಇಸ್ಲಾಂ ಕಲಿಸುವುದೇನೆಂದು ನೋಡೋಣ.

ವಿವಾಹ ವಿಚ್ಛೇದನ ಸಂಪೂರ್ಣವಾದ ನಂತರ ಯಾವೊಬ್ಬನಾದರೂ ತನ್ನ ಹೆಂಡತಿಯನ್ನು ಪುನಃ ಪಡೆಯಲು ಬಯಸಿದರೆ, ಅವನು ತಲಾಖ್ ಕೊಟ್ಟ ಪತ್ನಿಯನ್ನು ಇನ್ನೊಬ್ಬನಿಗೆ ಮದುವೆ ಮಾಡಿಸಿ ಅವನಿಂದ ತಲಾಖ್ ಹೇಳಿಸಿದ ನಂತರ ಮೊದಲ ಗಂಡನಿಗೆ ಅವಳನ್ನು ಪಡೆಯಲು ಸಾಧ್ಯವೆಂದು ಹೇಳಲ್ಪಡುತ್ತದೆ.

ಒಬ್ಬನು ತಾನು ಬಿಟ್ಟ ಹೆಂಡತಿಯನ್ನು ಪುನಃ ಪಡೆಯಲಿಕ್ಕಾಗಿ ಅವಳನ್ನು ಇನ್ನೊಬ್ಬನಿಗೆ ಮದುವೆ ಮಾಡಿಸಿ ಕೊಡಬೇಕೆಂಬ ನಿಯಮ ಇಸ್ಲಾಂ ಧರ್ಮದಲ್ಲಿಲ್ಲ. ಬದಲಿಗೆ, ಹಾಗೆ ಮಾಡುವುದು ಮಹಾಪಾಪವೂ ಅನ್ಯಾಯವೂ ಎಂದು ಇಸ್ಲಾಂ ಬೋಧಿಸುತ್ತದೆ. ಆದರೆ ನಿರ್ಭಾಗ್ಯವಶಾತ್ ಇಂದು ಮುಸ್ಲಿಮರು ಧರ್ಮವಿರುದ್ಧವಾದ ಈ ನಿಷಿದ್ಧ ಸಂಪ್ರದಾಯವನ್ನು ಇಸ್ಲಾಮಿಕ ವಿಧಿಯೆಂಬ ರೀತಿಯಲ್ಲಿ ಸ್ವೀಕರಿಸಿ ಅದನ್ನು ಮುಸ್ಲಿಂ ಪಂಡಿತರು ಸಮರ್ಥಿಸಿರುವುದರಿಂದ, ಯಾರಾದರೂ ಈ ರೂಢಿಯನ್ನು ಇಸ್ಲಾಮಿಕವೆಂದು ಭಾವಿಸಿದರೆ ಆಶ್ಚರ್ಯಪಡಲಿಕ್ಕಿಲ್ಲ. ಅಮುಸ್ಲಿಮರು ಮಾತ್ರವಲ್ಲ, ಮುಸ್ಲಿಮರು ಸಹ ಸಾಮಾನ್ಯವಾಗಿ ಈ ನಿಕೃಷ್ಟ ಆಚಾರವನ್ನು ಇಸ್ಲಾಮಿನ ಒಂದು ವಿಧಿಯೆಂದು ತಿಳಿದುಕೊಂಡಿದ್ದಾರೆ. ಅದು ಖಂಡಿತವಾಗಿ ನಿರಪರಾಧಿಯಾದ ಹೆಣ್ಣಿನ ಶೋಷಣೆಗೂ ಮಾನಹಾನಿಗೂ ಕಾರಣವಾಗುತ್ತದೆ. ಒಬ್ಬನು ಅವಿವೇಕದಿಂದಾಗಲಿ, ಕ್ರೋಧದಿಂದಾಗಲಿ ತನ್ನ ಹೆಂಡತಿಗೆ ಥಟ್ಟನೆ ಮೂರು ತಲಾಖ್ ಸಹ ಹೇಳಿ ಪರಿತ್ಯಜಿಸಿ, ಮರುಕ್ಷಣದಲ್ಲಿ ಅವಳನ್ನು ತಿರುಗಿ ಪಡೆಯಲು ಬಯಸಿದರೆ ಅವಳು ಒಂದು ರಾತ್ರಿಯಾದರೂ ಇನ್ನೊಬ್ಬ ಗಂಡನನ್ನು ವರಿಸಬೇಕೆಂದೂ, ಹಾಗೆ ಆದರೆ ಮಾತ್ರ ಮೊದಲ ಗಂಡನಿಗೆ ಅವಳನ್ನು ಸ್ವೀಕರಿಸಲು ಸಾಧ್ಯವೆಂದೂ ಹೇಳುವುದು ಖಂಡಿತವಾಗಿಯೂ ಅವಳ ಮಾನಹಾನಿಗೆ ಕಾರಣವಾಗುತ್ತದೆಂದು, ಆಲೋಚಿಸುವವರಿಗೆ ಮನವರಿಕೆಯಾಗಬಹುದು. ಇಸ್ಲಾಮಿಗೆ ಮೊದಲು, ಈ ನಿಷಿದ್ಧ ಆಚಾರ ಅರಬ್ ರಾಜ್ಯದಲ್ಲಿ ವಾಡಿಕೆಯಲ್ಲಿತ್ತು. ಪ್ರವಾದಿ ಮುಹಮ್ಮದ್‌ರವರು(ಸ) ಈ ದುರಾಚಾರವನ್ನು ಕಠಿಣವಾಗಿ ವಿರೋಧಿಸಿ ಕೊನೆಗೊಳಿಸಿದರು. ಆದರೆ ಅಕಟಾ! ಕಾಲಾಂತರದಲ್ಲಿ ಆ ಪುಣ್ಯ ಪುರುಷರ ಅನುಯಾಯಿಗಳೆಂದು ಅಭಿಮಾನಗೊಳ್ಳುವವರು ಧರ್ಮವಿರುದ್ಧವಾದ ಹಲವು ಆಚಾರಾನುಷ್ಠಾನಗಳನ್ನು ಕೈಗೊಳ್ಳುವುದರೊಂದಿಗೆ ನಿಷಿದ್ಧವೂ ನಿಕೃಷ್ಟವೂ ಆದ ಈ ಸಂಪ್ರದಾಯವನ್ನು ಸಹ ಅಂಗೀಕರಿಸಿದರು. ಇದು ಇಸ್ಲಾಂ ಕಠಿಣವಾಗಿ ವಿರೋಧಿಸಿದ್ದೆಂದು ತಿಳಿದಿದ್ದೂ ಧರ್ಮಪಂಡಿತರು ಅದಕ್ಕೆ ಸೈಗೊಡುತ್ತಾರೆ. ಈ ವರ್ತನೆ ದೇವಶಾಪಕ್ಕೆ ಕಾರಣವಾಗುವುದೆಂದು ಮುಹಮ್ಮದ್ ಪೈಗಂಬರರು(ಸ) ಎಚ್ಚರಿಕೆ ನೀಡಿದ್ದಾರೆ. ಒಂದು ನಿವೇದನದಲ್ಲಿ ಹಝ್ರತ್ ಇಬ್ನು ಮಸ್‌ಊದ್(ರ) ಹೀಗೆ ಹೇಳಿದ್ದಾರೆ: "ತ್ಯಜಿಸಲ್ಪಟ್ಟ ಪತ್ನಿಯನ್ನು ಮೊದಲ ಗಂಡನಿಗೆ ವಿವಾಹಕ್ಕೆ ಅರ್ಹಳನ್ನಾಗಿ ಮಾಡಲು ಅವಳನ್ನು ತಾತ್ಕಾಲಿಕವಾಗಿ ಮದುವೆಯಾಗುವವನನ್ನೂ ಅವಳನ್ನು ಯಾರಿಗಾಗಿ ವಿವಾಹಕ್ಕೆ ಅರ್ಹಳನ್ನಾಗಿ ಮಾಡಲಾಗುವುದೋ ಅವನನ್ನೂ (ಮೊದಲ ಗಂಡನನ್ನೂ) ಮುಹಮ್ಮದ್ ಪೈಗಂಬರರು(ಸ) ಶಪಿಸಿದ್ದಾರೆ." (ದಾರಿಮೀ, ತಿರ್ಮಿದೀ ಇತ್ಯಾದಿ). ಮತ್ತೊಂದು ವರದಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: "ಎರವಲು ಪಡೆಯುವ ಹೋತನ ಕುರಿತು ನಾನು ನಿಮಗೆ ಹೇಳಿ ಕೊಡಲೇ? ಎಂದೊಮ್ಮೆ ಪೈಗಂಬರರು(ಸ) ಕೇಳುತ್ತಾ ಶಿಷ್ಯರೊಡನೆ ಹೀಗೆ ಹೇಳಿದರು: ಅದು ಮುಹಿಲ್ಲ್ (ತ್ಯಜಿಸಲ್ಪಟ್ಟ ಪತ್ನಿಯನ್ನು ತ್ಯಜಿಸಿದ ಗಂಡನಿಗೇ ವಿವಾಹಕ್ಕೆ ಅರ್ಹಳನ್ನಾಗಿ ಮಾಡಲು ಅವಳನ್ನು ತತ್ಕಾಲಕ್ಕೆ ಮದುವೆಯಾಗುವವನು.) ಅವನಿಗೂ ಯಾರಿಗೋಸ್ಕರ ಅವನು ಹಾಗೆ ಮದುವೆಯಾಗುತ್ತಾನೋ ಅವನಿಗೂ ಅಲ್ಲಾಹನ ಶಾಪವಿದೆ" (ಇಬ್ನುಮಾಜಃ). ಪೈಗಂಬರರ(ಸ) ಈ ನುಡಿಯಿಂದ, ತ್ಯಜಿಸಲ್ಪಟ್ಟ ಪತ್ನಿಯನ್ನು ಮೊದಲ ಗಂಡನಿಗೆ ಪುನಃ ಸ್ವೀಕಾರಾರ್ಹಳನ್ನಾಗಿ ಮಾಡಲು ಒಂದು ಉಪಾಯವಾಗಿ ತತ್ಕಾಲಕ್ಕೆ ಮಾತ್ರ ಇನ್ನೊಬ್ಬನು ಮದುವೆಯಾಗುವುದು ಧರ್ಮವಿರುದ್ಧ ಮಾತ್ರವಲ್ಲ, ಅದು ದೇವ ಶಾಪಕ್ಕೆ ಕಾರಣವಾಗುವ ಒಂದು ಪಾಪಕರ್ಮ ಕೂಡ ಎಂದು ಸ್ಪಷ್ಟವಾಗುತ್ತದೆ. ಆ ರೀತಿ ಮದುವೆಯಾಗುವವನನ್ನು, ಜೊತೆಗೂಡಿಸಲು ಎರವಲು ಪಡೆಯುವ ಹೋತನಿಗೆ ಹೋಲಿಸಿಕೊಂಡು ಮುಹಮ್ಮದ್ ಪೈಗಂಬರರು(ಸ) ಈ ಸಂಪ್ರದಾಯ ಬಹಳ ನಿಕೃಷ್ಟವೂ ಮೃಗೀಯವೂ, ಅದು ಆ ಸ್ತ್ರೀಗೆ ಅತ್ಯಂತ ಮಾನಹಾನಿಯುಂಟುಮಾಡುವಂಥ ಒಂದು ವರ್ತನೆಯೆಂದೂ ಮನಗಾಣಿಸಿ ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಈ ದುಷ್ಟ ಆಚಾರ ಇಸ್ಲಾಮಿಗೆ ಮುಂಚೆ ಅಧರ್ಮ ಕಾಲದಲ್ಲಿ ವಾಡಿಕೆಯಲ್ಲಿದ್ದ ಒಂದು ಕ್ರಮವಾಗಿತ್ತೆಂದು ಸಹ ತಿಳಿದುಬರುತ್ತದೆ.

ಇಸ್ಲಾಮಿನ ದೃಷ್ಟಿಯಲ್ಲಿ ವಿವಾಹವೆಂಬುದು ಕಾಲ ನಿರ್ಣಯವಿಲ್ಲದೆಯೇ ಎಂದೆಂದಿಗೂ ಒಬ್ಬಳು ಸ್ತ್ರೀಯನ್ನು ಸಹಧರ್ಮಿಣಿಯನ್ನಾಗಿ ಮಾಡಲು ಅವಳೊಡನೆ ನಿಯಮಾನುಸಾರ ಉಂಟುಮಾಡುವ ಸಂಬಂಧವಾಗಿದೆ. ಆದ್ದರಿಂದ ಒಂದು ಕ್ಲಪ್ತಕಾಲಕ್ಕಾಗಿ ಮಾಡುವ ವಿವಾಹ ಮತ್ತು ಸ್ತ್ರೀಯನ್ನು ತನ್ನ ಧರ್ಮಪತ್ನಿಯಾಗಿ ಸ್ವೀಕರಿಸುವ ಉದ್ದೇಶ ವಿನಾ ಮಾಡುವ ವಿವಾಹ ಇಸ್ಲಾಮೀ ಅಧ್ಯಾಪನಾನುಸಾರ ವಿವಾಹವಾಗುವುದಿಲ್ಲ. ಶಿಯಾಪಂಥಕ್ಕೆ ಸೇರಿದ ಮುಸ್ಲಿಮರು ಅಂಗೀಕರಿಸಿರುವ 'ಮುತ್‌ಅ' ಅಥವಾ ಕಾಲ ನಿರ್ಣಯದ ವಿವಾಹ ಇಸ್ಲಾಮಿಕವಲ್ಲವೆಂದು ಸುನ್ನೀ ಪಂಥದವರು ಹೇಳುವುದು ಕಾಲನಿರ್ಣಯ ನಿಮಿತ್ತ ಅದು ಯಥಾರ್ಥದಲ್ಲಿ ವಿವಾಹವಲ್ಲದಾಗುವುದರಿಂದಲೇ ಆಗಿದೆ. 'ಮುತ್‌ಅ' ಧರ್ಮಬದ್ಧವಲ್ಲವೆಂದಾಗುವಾಗ, ತ್ಯಜಿಸಲ್ಪಟ್ಟ ಹೆಂಡತಿಯನ್ನು ತ್ಯಜಿಸಿದ ಗಂಡನಿಗೇ ಸ್ವೀಕರಿಸಲರ್ಹಳನ್ನಾಗಿಸಲು ಮಾಡಿಸುವ ತಾತ್ಕಾಲಿಕ ವಿವಾಹ ಅದಕ್ಕಿಂತ ಧರ್ಮವಿರುದ್ಧವಾಗುತ್ತದೆ. ಏಕೆಂದರೆ ತಾತ್ಕಾಲಿಕ ವಿವಾಹದಲ್ಲಿ ಕಾಲನಿರ್ಣಯ ಇರುವುದು ಮಾತ್ರವಲ್ಲ, ಈ ಮದುವೆಯ ಉದ್ದೇಶವೇ ಸ್ತ್ರೀಯನ್ನು ಸ್ವಂತ ಧರ್ಮಪತ್ನಿಯಾಗಿ ಸ್ವೀಕರಿಸುವುದು ಕೂಡ ಅಲ್ಲ. ಆದುದರಿಂದ ಈ ವಾಡಿಕೆ ಇಸ್ಲಾಮೀ ನಿಯಮದ ಪ್ರಕಾರ ಮದುವೆಯೇ ಅಲ್ಲವೆಂದು, ಆಲೋಚಿಸುವವರಿಗೆ ಸುಲಭದಲ್ಲಿ

ಮನದಟ್ಟಾಗಬಹುದು. ಹಾಗೆ ಅದು ವಿವಾಹವೇ ಅಲ್ಲವೆಂದಾಗುವಾಗ, ಮೂರು ಬಾರಿ ತಲಾಖ್ ಹೇಳಿ ತ್ಯಜಿಸಿದ ಸ್ತ್ರೀಯನ್ನು ಪುನಃ ಪತ್ನಿಯಾಗಿ ಸ್ವೀಕರಿಸಲಿಕ್ಕೆ ಇಂತಹ ಲಜ್ಜಾಕರವಾದ ಒಂದು ಕ್ರಮವನ್ನು ರೂಢಿಗೊಳಿಸಿ ಅದನ್ನು ವಿವಾಹವೆಂದು ಕರೆಯುವುದು ಇಸ್ಲಾಂ ಧರ್ಮದ ದೃಷ್ಟಿಯಲ್ಲಿ ಎಂದಿಗೂ ಸಿಂಧುವಾಗದು. ಕಾಲನಿರ್ಣಯ ಸಹಿತ ಮಾಡುವ ವಿವಾಹ ವ್ಯಭಿಚಾರದ ಒಂದು ಪ್ರಭೇದ ಮಾತ್ರವೇ ಆಗುತ್ತದೆ. ಧರ್ಮಪತ್ನಿಯನ್ನಾಗಿ ಮಾಡುವ ಉದ್ದೇಶದಿಂದ ಹೊರತು ಓರ್ವ ಸ್ತ್ರೀಯೊಡನೆ ಹೊಂದುವ ತಾತ್ಕಾಲಿಕ ಸಂಬಂಧಕ್ಕೆ ವಿವಾಹ ಎಂದು ಹೆಸರಿಡುವುದು ವಿವಾಹವನ್ನು ಪರಿಹಾಸ್ಯಕ್ಕೆ ಗುರಿಪಡಿಸುವಂಥ ಹಾಗೂ ಸ್ತ್ರೀಯನ್ನು ಅಪಮಾನಿಸುವಂಥ ಒಂದು ಕ್ರಿಯೆಯಾಗಿದೆ. ಪವಿತ್ರ ಖುರ್‌ಆನ್ ಒಂದು ಕಡೆಯಲ್ಲಿ ಹೀಗೆ ಹೇಳುತ್ತದೆ: "ಅವರು (ಹೆಂಡಂದಿರು) ನಿಮಗೆ ಉಡುಪು; ನೀವು ಅವರಿಗೆ ಉಡುಪು" (2:188). ಹೀಗೆ ಪತಿ-ಪತ್ನಿಯರು ಪರಸ್ಪರ ಉಡುಗೆಯಾಗಿರುವರೆಂದು ಹೇಳುತ್ತಾ ಪವಿತ್ರ ಖುರ್‌ಆನ್, ಯಾವ ರೀತಿಯಲ್ಲಿ ಉಡುಪು ಸುಖವನ್ನೂ ಆರೋಗ್ಯವನ್ನೂ ನೀಡಲಿಕ್ಕೂ ನ್ಯೂನತೆಗಳನ್ನು ಮರೆಮಾಚಲಿಕ್ಕೂ ಸೌಂದರ್ಯವನ್ನು ವರ್ಧಿಸಲಿಕ್ಕೂ ಉಪಯುಕ್ತವಾಗುತ್ತದೋ, ಅದೇ ಪ್ರಕಾರವೇ ಗಂಡ ಹೆಂಡಿರ ಪರಸ್ಪರ ಸಂಬಂಧ ಅವರಲ್ಲಿ ಸದೃಶಗಳಾದ ಆಧ್ಯಾತ್ಮಿಕ ಮತ್ತು ಶಾರೀರಿಕ ಗುಣಗಳನ್ನು ಉತ್ಪಾದಿಸಲು ಪರ್ಯಾಪ್ತವಾಗಿರುವುದೆಂದು ಮನಗಾಣಿಸುತ್ತದೆ. ಈ ವಿಧ ಗುಣಗಳು, ಕಾಲನಿರ್ಣಯ ರಹಿತವಾದ, ಎಂದೆಂದಿಗೂ ಸ್ತ್ರೀಯನ್ನು ಸಹಧರ್ಮಿಣಿಯನ್ನಾಗಿ ಮಾಡುವ ವಿವಾಹ ಮುಖೇನ ಮಾತ್ರವೇ ಸಿದ್ಧಿಸುತ್ತದೆಯಷ್ಟೇ. ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ, ವಿವಾಹವಾಗಲು ನಿಷೇಧಿಸಲ್ಪಟ್ಟ ಬಂಧು ಸ್ತ್ರೀಯರ ಕುರಿತು ವಿವರಿಸುತ್ತಾ ಹೀಗೆ ಹೇಳುತ್ತದೆ: "ಇವರ ಹೊರತಾದ ಸ್ತ್ರೀಯರನ್ನು ನೀವು ಧನ (ಮಹರ್)ಕೊಟ್ಟು, ವ್ಯಭಿಚಾರಕ್ಕಾಗಿಯಲ್ಲ; ಸಹಧರ್ಮಿಣಿಗಳಾಗಿ ಸ್ವೀಕರಿಸುವುದಕ್ಕೆ ನಿಮಗೆ ಸಮ್ಮತಿಯನ್ನೀಯಲಾಗಿದೆ" (4:25). ಹೀಗೆ ಖುರ್‌ಆನಿನ ಹಲವು ವಚನಗಳಿಂದಲೂ ಪೈಗಂಬರರ ನುಡಿಗಳಿಂದಲೂ ಯಥಾರ್ಥ ರೀತಿಯಲ್ಲಿರುವ ವಿವಾಹ ಸಂಬಂಧದ ಉದ್ದೇಶವೇನೆಂದೂ, ಕಾಲನಿರ್ಣಯ ಸಹಿತದ ಅಥವಾ ಸ್ತ್ರೀಯನ್ನು ಧರ್ಮಪತ್ನಿ ಮಾಡುವ ಉದ್ದೇಶದಿಂದ ಹೊರತಾದ ಸಂಬಂಧ ಸರಿಯಾದ ವಿವಾಹವಾಗಲಿಕ್ಕಿಲ್ಲವೆಂದೂ ಮನವರಿಕೆಯಾಗುತ್ತದೆ.

ವಿವಾಹ ವಿಚ್ಛೇದನಗೊಂಡ ಸ್ತ್ರೀಯನ್ನು ಅವಳ ಮೊದಲ ಗಂಡ ಪುನಃ ಪತ್ನಿಯಾಗಿ ಸ್ವೀಕರಿಸಲಿಕ್ಕೋಸ್ಕರ ಅವಳನ್ನು ತಾತ್ಕಾಲಿಕವಾಗಿ ಇನ್ನೊಬ್ಬ ಮದುವೆಯಾಗುವುದು ಮೃಗೀಯವೂ ದೇವಕೋಪಕ್ಕೆ ಈಡಾಗುವಂಥದ್ದೂ ಸ್ತ್ರೀಗೆ ಮಾನಹಾನಿಯುಂಟುಮಾಡುವಂಥದ್ದೂ ಆದ ಒಂದು ವರ್ತನೆಯಾಗಿದ್ದು ಕೂಡ ಮುಸ್ಲಿಮರು ಈ ನೀಚ ಸಂಪ್ರದಾಯವನ್ನು ಧರ್ಮವಿಧಿಯೆಂಬಂತೆ ಆಚರಿಸಲು ಕಾರಣವಾದುದು ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖನ್ನು ಮೂರೆಂದೇ ಧರ್ಮಪಂಡಿತರು ಪರಿಗಣಿಸಿ ಅದನ್ನು ಇಸ್ಲಾಮಿಕ ನಿಯಮವೆಂದು ಅಂಗೀಕರಿಸಿದ್ದರಿಂದಾಗಿದೆ. ಒಂದೇ ಸಮಯದಲ್ಲಿ ಮೂರು ತಲಾಖ್ ಸಹ ಹೇಳಬಾರದೆಂದೂ ಹಾಗೆ ಹೇಳುವುದಾದರೆ ಅದನ್ನು ಒಂದೆಂದು ಮಾತ್ರ ಗಣಿಸಬೇಕೆಂಬ ಇಸ್ಲಾಮಿನ ನಿರ್ದೇಶನವನ್ನು ನಿಯಮವೆಂದು ಅಂಗೀಕರಿಸಿದ್ದರೆ, ಒಬ್ಬನು ಒಂದೇ ಕಾಲದಲ್ಲಿ ಮೂರು ಅಲ್ಲ ಮುನ್ನೂರು ತಲಾಖ್ ಹೇಳಿದರೂ ಅದನ್ನು ಒಂದು ತಲಾಖೆಂದು ಎಣಿಸಲಾಗುವುದರಿಂದ, ತಲಾಖ್ ಪಡೆದವಳನ್ನು ಪುನಃ ಸ್ವೀಕರಿಸಲಿಕ್ಕಾಗಿ ತತ್ಕಾಲಕ್ಕೆ ಅವಳನ್ನು ಮತ್ತೊಬ್ಬನಿಗೆ ಮದುವೆ ಮಾಡಿಸಿಕೊಡುವ ನಿಷಿದ್ಧವೂ ಮೃಗೀಯವೂ ಆದ ಕ್ರಮವನ್ನು ಕೈಗೊಳ್ಳಲಿಕ್ಕಾಗಲಿ ಉಭಯ ಕಡೆಯವರೂ ಶಾಪಗ್ರಸ್ತರಾಗಲಿ ಆಗುತ್ತಿರಲಿಲ್ಲ. ಏಕೆಂದರೆ, ಒಬ್ಬನು ತನ್ನ ಪತ್ನಿಗೆ ಒಂದು ಸಲ ಯಾ ಎರಡು ಸಲ ತಲಾಖ್ ಹೇಳಿದರೆ, ಕಾಲಾವಧಿಯೊಳಗೆ ಪ್ರತ್ಯೇಕ ವಿವಾಹ ಕರ್ಮ ವಿನಾ ಮತ್ತು ಕಾಲಾವಧಿ ಕಳೆದರೆ ಹೊಸ ವಿವಾಹ ಕರ್ಮ ಮೂಲಕ ಅವಳನ್ನು ಪುನಃ ಪತ್ನಿಯಾಗಿ ಸ್ವೀಕರಿಸಬಹುದಾಗಿದೆ. ಹಾಗೆ ಸ್ವೀಕರಿಸಲಿಕ್ಕೆ ಅವಳನ್ನು ಇನ್ನೊಬ್ಬನಿಗೆ ಮದುವೆ ಮಾಡಿಸಿಕೊಡುವುದೂ ಅವನು ಅವಳನ್ನು ತ್ಯಜಿಸುವುದೂ ಅಗತ್ಯವಿಲ್ಲ. ಆದರೆ, ಇಸ್ಲಾಮೀ ಧರ್ಮೋಪದೇಶಕ್ಕೆ ವಿರುದ್ಧವಾಗಿ ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖನ್ನು ಮೂರಾಗಿಯೇ ಪರಿಗಣಿಸುವುದರ ಫಲವಾಗಿ ಶಾಪಗ್ರಸ್ತ ಮತ್ತು ನಿಷಿದ್ಧವೆಂದು ಇಸ್ಲಾಂ ಹೇಳಿಕೊಡುವ ಲಜ್ಜಾಕರವಾದ ಮತ್ತೊಂದು ಸಂಪ್ರದಾಯವನ್ನು ಇಸ್ಲಾಮೀ ನಿಯಮವೆಂದು ಮುಸ್ಲಿಮರು ಸ್ವೀಕರಿಸಬೇಕಾಯಿತು. ಇದು ಇಸ್ಲಾಮಿಕ ಅಧ್ಯಾಪನವನ್ನು ಅಲಕ್ಷ್ಯ ಮಾಡಿದ್ದಕ್ಕೆ ಮುಸ್ಲಿಮರು ಅನುಭವಿಸಬೇಕಾಗಿ ಬಂದ ಒಂದು ಶಿಕ್ಷೆಯೆಂದು ಹೇಳಬಹುದು. ಮನುಷ್ಯರೆಲ್ಲ ಒಂದೇ ತರದಲ್ಲಿ ಸಹಶೀಲರೂ, ವಿವೇಕಪೂರ್ಣವಾಗಿ ವರ್ತಿಸುವವರೂ ಅಲ್ಲ. ಆದ್ದರಿಂದ, ಅವಿವೇಕಿಯೂ ಕೋಪಿಷ್ಠನೂ ಆದ ಒಬ್ಬ ಗಂಡ ಥಟ್ಟನೆ ತನ್ನ ಪತ್ನಿಗೆ ಒಂದೇ ಸಂದರ್ಭದಲ್ಲಿ ಮೂರು ತಲಾಖ್ ಕೂಡ ಹೇಳಲೂಬಹುದು. ಹಾಗೆ ಒಮ್ಮೆಲೇ ಹೇಳಿದ ಮೂರು ತಲಾಖ್ ಒಂದು ಮಾತ್ರವೇ ಆಗುವುದೆಂಬ ಇಸ್ಲಾಮಿಕ ನಿಯಮವನ್ನು ಅವಗಣಿಸಿಕೊಂಡು ಅದನ್ನು ಮೂರು ತಲಾಖೆಂದು ಎಣಿಸತೊಡಗಿದಾಗ ಅವಿವೇಕಿಗಳಾದ ಗಂಡಂದಿರ ಆಲೋಚನಾರಹಿತವಾದ ವರ್ತನೆಗೆ ಪರಿಹಾರ ಕಾಣಲಿಕ್ಕಾಗಿ ಹೀಗೆ ವಿವಾಹವೆಂಬ ನಾಮದಲ್ಲಿ ಇಸ್ಲಾಮಿಕವಲ್ಲದ ಒಂದು ಏರ್ಪಾಡು ಮಾಡಲು ಅಂತಹವರು ನಿರ್ಬಂಧಪಡಿಸಲ್ಪಟ್ಟರು. ಹಾಗಲ್ಲದೆ ಇದು ಇಸ್ಲಾಮೀ ನಿಯಮವಾಗಲಿ ಇಸ್ಲಾಮಿನ ಅಧ್ಯಾಪನಕ್ಕನುಗುಣವಾದ ಒಂದು ವರ್ತನೆಯಾಗಲಿ ಅಲ್ಲ.

ಒಬ್ಬನು ಮೂರು ತಲಾಖ್ ಹೇಳಿ ತ್ಯಜಿಸಿದ ಒಬ್ಬಾಕೆ ಸ್ತ್ರೀಯನ್ನು ಇಸ್ಲಾಮಿಕ ನಿಯಮಾನುಸಾರ ಇನ್ನೊಬ್ಬನು ಮದುವೆಯಾಗಿ, ನ್ಯಾಯಾನುಸಾರ ಅವನು ಅವಳನ್ನು ಪರಿತ್ಯಜಿಸಿದರೆ ಅವಳನ್ನು ಮೊದಲ ಗಂಡ ಪುನಃ ಮದುವೆ ಮಾಡಿಕೊಳ್ಳಬಹುದೆಂದು ಇಸ್ಲಾಂ ಕಲಿಸುತ್ತದೆ. ಎರಡನೆಯವನು ಅವಳನ್ನು ಮದುವೆಯಾಗುವುದು ಮೊದಲಿನ ಗಂಡನಿಗೆ ಅವಳನ್ನು ಸ್ವೀಕಾರಾರ್ಹಳನ್ನಾಗಿ ಮಾಡಲಿಕ್ಕೋಸ್ಕರವಾದರೆ ಅದು ಯಥಾರ್ಥದಲ್ಲಿ ವಿವಾಹವಾಗಲಿಕ್ಕಿಲ್ಲ;

ಧರ್ಮನಿರ್ದೇಶನವನ್ನು ಅಪಹಾಸ್ಯಕ್ಕೆ ಗುರಿಪಡಿಸುವ ಒಂದು ಕ್ರಮ ಮಾತ್ರವಾಗುತ್ತದೆ. ಅಂತಹ ಒಂದು ಕ್ರಮದಿಂದ ಅವಳು ಮೊದಲ ಗಂಡನಿಗೆ ಸ್ವೀಕಾರಯೋಗ್ಯಳಾಗುವುದೇ ಇಲ್ಲ. ಅವನಿಗೆ ಅವಳನ್ನು ಸ್ವೀಕರಿಸಲು ಸಾಧ್ಯವಾಗಬೇಕೆಂದಾದರೆ ಎರಡನೆಯ ಗಂಡ ಸರಿಯಾದ ರೀತಿಯಲ್ಲಿ ಅವಳನ್ನು ವಿವಾಹವಾಗಿ ನಿಯಮಾನುಸಾರ ಅವಳನ್ನು ತ್ಯಜಿಸಬೇಕಾಗಿದೆ. ವಿವಾಹ ಸಂಬಂಧವನ್ನು ಸಾಧ್ಯವಿದ್ದಷ್ಟೂ ವಿಚ್ಛೇದನಗೊಳಿಸದಿರಲಿಕ್ಕೂ ದಾಂಪತ್ಯ ಜೀವಿತವನ್ನು ಸುಗಮವಾಗಿ ಸಾಗಿಸಿಕೊಂಡು ಹೋಗಲಿಕ್ಕೂ ದಂಪತಿಗಳು ಪ್ರೇರಿತರಾಗಲಿಕ್ಕಾಗಿಯೇ ಇಸ್ಲಾಂ ಹೀಗೆ ವಿಧಿಸಿದ್ದು. ವಿವಾಹ ಸಂಬಂಧವನ್ನು ಮುರಿಯದಿರಲಿಕ್ಕಾಗಿ ಇಸ್ಲಾಂ ಒಂದನೆಯದಾಗಿ ತಲಾಖಿಗೆ ಕೆಲವು ಪ್ರತಿಬಂಧಕಗಳನ್ನು ವಿಧಿಸಿತು. ಈ ಪ್ರತಿಬಂಧಕಗಳನ್ನೆಲ್ಲ ತೊಡೆದು ಹಾಕಿ ಒಬ್ಬನು ತನ್ನ ಪತ್ನಿಗೆ ತಲಾಖ್ ಹೇಳಿದರೆ ಅದು ಒಂದು ತಲಾಖ್ ಆಗುವುದು. ಹೀಗೆ ಎರಡು ಸಲ ಹೆಂಡತಿಯನ್ನು ತಲಾಖ್ ಹೇಳಿ ತೊರೆಯಲಿಕ್ಕೂ ಪುನಃ ಸ್ವೀಕರಿಸಲಿಕ್ಕೂ ಅವನಿಗೆ ಸಾಧ್ಯ. ಅನಂತರ ಮೂರನೆಯ ಸಲವೂ ಅವನು ತಲಾಖ್ ಹೇಳಿದರೆ ಮತ್ತೆ ಅವನು ತನ್ನ ಮಡದಿಯನ್ನು ತಿರುಗಿ ಪಡೆಯುವುದು ಸಲ್ಲದು. ಆಗ, ಅವನು ತನ್ನ ಪತ್ನಿಯನ್ನು ಮೂರು ಬಾರಿ ಸ್ವೀಕರಿಸಿ ಮೂರು ಬಾರಿ ಪರಿತ್ಯಜಿಸಿದನು. ಹೀಗೆ ಹಲವು ಪ್ರತಿಬಂಧಕಗಳನ್ನು ಕಿತ್ತೆಸೆದು ಒಬ್ಬನು ತನ್ನ ಪತ್ನಿಯನ್ನು ಒಂದು ಸಲವಲ್ಲ ಮೂರು ಸಲವೂ ತ್ಯಜಿಸಿದರೆ ಅದರರ್ಥ ಅವನಿಗೆ ಅವಳೊಂದಿಗೆ ಸಹಧರ್ಮ ಜೀವಿತ ಮುಂದುವರಿಸಿಕೊಂಡು ಹೋಗಲು ಯಾವ ಪ್ರಕಾರದಲ್ಲೂ ಸಾಧ್ಯವಿಲ್ಲವೆಂದಾಗಿದೆ. ಆದ್ದರಿಂದ, ಇಷ್ಟು ಪ್ರತಿರೋಧಕಗಳನ್ನು ತಳ್ಳಿಹಾಕಿ ದಾಂಪತ್ಯ ಸಂಬಂಧವನ್ನು ಕೊನೆಗೊಳಿಸಿದವನಿಗೆ ಆ ಸ್ತ್ರೀಯ ಗಂಡನಾಗಲಿಕ್ಕೆ ನಿರ್ವಾಹವಿಲ್ಲವೆಂದು ಅದು ರುಜುಪಡಿಸುತ್ತದೆ. ಒಟ್ಟಿನಲ್ಲಿ, ಇದರ ನಂತರ ಭರ್ತೃಪದವನ್ನು ಪಡೆಯುವ ಹಕ್ಕು ಅವನಿಗೆ ಪರಿಪೂರ್ಣವಾಗಿ ಇಲ್ಲದಾಗುತ್ತದೆ. ಹೀಗೆ, ಪತಿಯು ಪತ್ನಿಯನ್ನು ತೊರೆಯಲಿಕ್ಕೂ ನಂತರ ಸ್ವೀಕರಿಸಲಿಕ್ಕೂ ಇಸ್ಲಾಂ ಒಂದು ನಿಬಂಧನೆಯನ್ನು ಇರಿಸದಿದ್ದರೆ ದಾಂಪತ್ಯ ಸಂಬಂಧ ಒಂದು ವಿನೋದವೂ ವಿವಾಹ ಮತ್ತು ವಿವಾಹ ವಿಚ್ಛೇದ ಅರ್ಥರಹಿತವೂ ಆದ ರೀತಿಯಾಗಿ ಪರಿಣಮಿಸೀತು. ಆದ್ದರಿಂದ ಪತ್ನಿಯನ್ನು ಸ್ವೀಕರಿಸಲಿಕ್ಕೂ ತ್ಯಜಿಸಲಿಕ್ಕೂ ಇಸ್ಲಾಂ ಒಂದು ಸೀಮೆಯನ್ನು ನಿಶ್ಚಯಿಸಿ, ಅದು ಮೂರು ಬಾರಿ ತನಕ ಆಗಬಹುದೆಂದೂ ಅದರ ನಂತರ ಆ ಸ್ತ್ರೀಯನ್ನು ಪತ್ನಿಯಾಗಿರಿಸುವ ಹಕ್ಕು ಗಂಡನಿಗೆ ನಷ್ಟವಾಗುತ್ತದೆಂದೂ ವಿಧಿಸಿದೆ. ಈ ಪ್ರಕಾರ ನಿಯಮ ನಿರ್ದೇಶ ಮೂಲಕ ಇಸ್ಲಾಂ ದಾಂಪತ್ಯ ಸಂಬಂಧವನ್ನು ಸಾಧ್ಯವಾದಷ್ಟು ಸುಗಮವೂ ಪ್ರಾಯೋಗಿಕವೂ ಮಾಡಿರುತ್ತದೆ. ಆದರೆ ತಲಾಖ್ ಮೂಲಕ ಪರಿತ್ಯಕ್ತಳಾದ ಸ್ತ್ರೀಯನ್ನು ಇನ್ನೋರ್ವನು ತನ್ನ ಧರ್ಮಪತ್ನಿಯಾಗಿ ವರಿಸಿ ನ್ಯಾಯಬದ್ಧವಾಗಿ ವಿಚ್ಛೇದನಗೊಂಡ ನಂತರ ಮೊದಲ ಗಂಡ ಮತ್ತು ಆ ಸ್ತ್ರೀ ಪುನಃ ಗಂಡ–ಹೆಂಡತಿಯಾಗಲು ಇಷ್ಟಪಡುವ ಪಕ್ಷದಲ್ಲಿ ಅವರು ಮರು ಮದುವೆಯಾಗಬಹುದೆಂದು ಇಸ್ಲಾಂ ಸಮ್ಮತಿಸಿರುವುದು, ಅವರೀರ್ವರೂ ಪರಸ್ಪರ ಸಂಬಂಧವಿಲ್ಲದ ಎರಡು ವ್ಯಕ್ತಿಗಳಂತಾಗಿ ಬಹಳಷ್ಟು ಪಾಠಗಳನ್ನು ಕಲಿತು, ಒಂದು ವೇಳೆ ಮುಂದೆ ಉಂಟುಮಾಡುವ ಹೊಸ ಸಂಬಂಧವನ್ನು ಸಾಮರಸ್ಯದಿಂದ ಮುಂದುವರಿಸಿಕೊಂಡು ಹೋಗಲಿಕ್ಕೆ ಅವಕಾಶವಿರುವುದರಿಂದಾಗಿದೆ. ಈ ರೀತಿ ಅನುಮತಿಸುತ್ತಾ ಇಸ್ಲಾಂ ಮನುಷ್ಯನ ಸ್ನೇಹಶೀಲತೆಯನ್ನು ಗೌರವಿಸಿ ಅವನ ಚಾಪಲ್ಯವನ್ನು ಕ್ಷಮಿಸಿ ನಿಯಮವನ್ನು ಸೌಮ್ಯಗೊಳಿಸಿದೆ. ಬಾಹ್ಯ ದೃಷ್ಟಿಯಲ್ಲಿ ನೋಡುವಾಗ ಇಷ್ಟು ಹೆಚ್ಚು ಪ್ರತಿಬಂಧಕಗಳನ್ನು ಕಿತ್ತೊಗೆದು ಮೂರು ಸಲ ತನ್ನ ಪತ್ನಿಯನ್ನು ಬಿಟ್ಟು ದಾಂಪತ್ಯ ಸಂಬಂಧವನ್ನು ಕೆಡಿಸಿದವನಿಗೆ ಅವಳನ್ನು ಕೊನೆಯ ವರೆಗೆ ಪತ್ನಿಯಾಗಿ ಸ್ವೀಕರಿಸಲು ಅವಕಾಶವಿರಬಾರದು. ಒಟ್ಟಿನಲ್ಲಿ, ಮೂರು ಬಾರಿ ತಲಾಖ್ ಹೇಳಿ ಪರಿಪೂರ್ಣವಾಗಿ ವಿವಾಹ ಮುಕ್ತಗೊಳಿಸಿದ ಪತ್ನಿಯನ್ನು ಮೊದಲ ಗಂಡ ಸ್ವೀಕರಿಸಲಿಕ್ಕೆ ಸಾಧ್ಯವಾಗಬೇಕಾದರೆ, ಅವಳನ್ನು ಇನ್ನೊಬ್ಬನು ತನ್ನ ಸಹಧರ್ಮಿಣಿಯಾಗಿ ನಿಯಮ ಪ್ರಕಾರ ವರಿಸಿ, ನಂತರ ಅವನು ನ್ಯಾಯಬದ್ಧವಾಗಿ ಅವಳನ್ನು ಪರಿತ್ಯಜಿಸಿರಬೇಕು. ಹಾಗಲ್ಲದೆ, ಮೊದಲ ಗಂಡನಿಗೆ ಅವಳನ್ನು ಸ್ವೀಕರಿಸಲಿಕ್ಕೆ ಒಂದು ಉಪಾಯವಾಗಿ ಮತ್ತೊಬ್ಬನು ಅವಳನ್ನು ಮದುವೆಯಾಗಿ ಬಿಟ್ಟುಬಿಡುವುದರಿಂದ ಅವಳು ಮೊದಲ ಗಂಡನಿಗೆ ಎಂದಿಗೂ ವಿವಾಹ ವಿಹಿತಳಾಗುವುದಿಲ್ಲ.

ದಾಂಪತ್ಯ ಜೀವಿತವನ್ನು ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದಂತೆ ಮಾಡುವಂಥ ಕಲಹವಾಗಲಿ ಬಿಕ್ಕಟ್ಟಾಗಲಿ ಉಂಟಾದರೆ ದಂಪತಿಗಳು ದುಃಖಭರಿತ ಜೀವಿತವನ್ನು ಸಾಗಿಸಲು ನಿರ್ಬಂಧಿತರಾಗುವ ಪಕ್ಷದಲ್ಲಿ ವಿವಾಹ ವಿಚ್ಛೇದ ಸಮ್ಮತನೀಯವೆಂದು ಇಸ್ಲಾಂ ಬೋಧಿಸಿದೆಯಾದರೂ ಯಥಾರ್ಥದಲ್ಲಿ ಇಸ್ಲಾಂ ನಿರ್ದೇಶಿಸುವ ವೈವಾಹಿಕ ಸಂಬಂಧ ಕಾಲನಿರ್ಣಯರಹಿತವಾದ, ಎಂದೆಂದಿಗೂ ಇರುವ ಒಂದು ಬಂಧುತ್ವವಾಗಿದೆ. ಅದನ್ನು ಅವರೀರ್ವರೂ ಪಾಲಿಸಿಕೊಂಡು ಹೋಗುವ ಪಕ್ಷದಲ್ಲಿ ಅದು ಅವರ ಮರಣದೊಂದಿಗೆ ಸಹ ಕೊನೆಗೊಳ್ಳುವುದಿಲ್ಲ. ಪಾರತ್ರಿಕ ಜೀವಿತದಲ್ಲೂ ಆ ಸಂಬಂಧ ಅನಶ್ವರವಾಗಿ ನೆಲೆಗೊಳ್ಳುತ್ತದೆ. ಆದ್ದರಿಂದಲೇ ಪವಿತ್ರ ಖುರ್‌ಆನ್ ಈ ರೀತಿ ಹೇಳಿರುತ್ತದೆ: “ಅವರೂ ಅವರ ಸುಕೃತರಾದ ಮಾತಾಪಿತರೂ ಹೆಂಡಂದಿರೂ ಸಂತಾನಗಳೂ ಅನಶ್ವರವಾದ ಸ್ವರ್ಗದಲ್ಲಿ ಪ್ರವೇಶಿಸುವರು” (13:24). ಇದರಿಂದ, ಗಂಡ ಹೆಂಡರಿಗೆ ಪರಸ್ಪರ ಆಧ್ಯಾತ್ಮಿಕವಾಗಿ ಸಹಮತವಿದ್ದರೆ ಪಾರತ್ರಿಕ ಜೀವಿತದಲ್ಲೂ ಅವರ ಸಂಬಂಧ ಮುರಿಯದೆಂದು ಮನದಟ್ಟಾಗುತ್ತದೆ. ಯಾವ ರೀತಿ ಆಧ್ಯಾತ್ಮಿಕವಾಗಿ ಸಹಮತವಿಲ್ಲದ ಪಕ್ಷದಲ್ಲಿ ದಂಪತಿಗಳ ಸಂಬಂಧ ಪಾರತ್ರಿಕ ಜೀವಿತದಲ್ಲಿ ಅಂತ್ಯಗೊಳ್ಳುತ್ತದೋ ಅದೇ ಪ್ರಕಾರವೇ ಐಹಿಕ ಜೀವಿತದಲ್ಲಿ ಅವರಿಗೆ ಬಂಧುತ್ವವನ್ನು ಪಾಲಿಸಿಕೊಂಡು ಹೋಗಲಿಕ್ಕೆ ನಿರ್ವಾಹವಿಲ್ಲದಾಗುವ ಘಟ್ಟದಲ್ಲಿ ಅದನ್ನು ವಿಚ್ಛೇದಿಸಬಹುದಾಗಿದೆ. ಹೀಗೆ ನಿರ್ವಾಹವಿಲ್ಲದ ಸಂದರ್ಭದಲ್ಲಿ ಆ ಸಂಬಂಧವನ್ನು ಮುರಿಯಬಹುದೆಂದು ಇಸ್ಲಾಂ ಆದೇಶಿಸುವುದಾದರೂ ಆ ಬಂಧುತ್ವವನ್ನು ಮುಂದುವರಿಸಿಕೊಂಡು ಹೋಗಲು ಇಚ್ಛಿಸುವ ಪಕ್ಷದಲ್ಲಿ ಈ ಜೀವಿತದಲ್ಲಿ ಮಾತ್ರವಲ್ಲ, ಪರಲೋಕ ಜೀವಿತದಲ್ಲೂ ಮುಂದುವರಿಸಿಕೊಂಡು ಹೋಗಬಹುದು. ಅಷ್ಟೇ ಅಲ್ಲ, ಆ ರೀತಿಯಲ್ಲಿ

ಈ ಸಂಬಂಧವನ್ನು ಪರಲೋಕ ಜೀವಿತದಲ್ಲೂ ಮುಂದುವರಿಸಿಕೊಂಡು ಹೋಗಲು ಶ್ರಮಿಸಬೇಕೆಂದೂ ಇಸ್ಲಾಂ ಬೋಧಿಸುತ್ತದೆ. ಆದ್ದರಿಂದಲೇ, ಪತ್ನಿ ಮತ್ತು ಮಕ್ಕಳನ್ನು ಸಾತ್ವಿಕರೂ ದೇವಭಕ್ತರೂ ಆಗಿ ಮಾರ್ಪಡಿಸಲಿಕ್ಕೆ ಶ್ರಮಿಸಬೇಕಾದುದು ಮುಸ್ಲಿಮನ ಕರ್ತವ್ಯವೆಂದು ಇಸ್ಲಾಂ ಉಪದೇಶಿಸಿದೆ. ಆದರೆ ದಾಂಪತ್ಯ ಸಂಬಂಧ ಯಾವ ರೀತಿಯಲ್ಲಿದ್ದರೂ ಕೊನೆಗೊಳಿಸಬಾರದೆಂದು ಇತರ ಕೆಲವು ಧರ್ಮಗಳು ಅನುಶಾಸಿಸುವಂತೆ ಇಸ್ಲಾಂ ಉಪದೇಶಿಸುವುದಿಲ್ಲ. ಹಾಗೆ ಇಸ್ಲಾಂ ಬೋಧಿಸುವುದಾದರೆ ಅದರ ಅಧ್ಯಾಪನಗಳು ಸಾರ್ವಲೌಕಿಕವೂ ಸುಗಮವೂ ಎಂದು ಹೇಳಲಸದಳ. ಅದೇ ಪ್ರಕಾರವೇ ದಾಂಪತ್ಯ ಸಂಬಂಧ ಅಂತ್ಯಗೊಳ್ಳದಿರಲಿಕ್ಕೂ ಪರಲೋಕದಲ್ಲಿ ಅದನ್ನು ನೆಲೆನಿಲ್ಲಿಸಲಿಕ್ಕೂ ಅವರಿಗೆ ಸಂತಾನ ಉಂಟಾಗಿರಬೇಕೆಂದಾಗಲಿ, ಸಂತಾನವಿಲ್ಲದಿದ್ದರೆ "ಸ್ವರ್ಗಸ್ಥನಾದ ಪತಿಯ ಆತ್ಮಮುಕ್ತಿಗಾಗಿ" ಪತ್ನಿ ಯಾರನ್ನಾದರೂ ದತ್ತು ಸ್ವೀಕರಿಸಬೇಕೆಂದಾಗಲಿ, ಅಥವಾ ಪತ್ನಿಯು ನಿಯೋಗ ಕ್ರಮ ಪ್ರಕಾರ ಅನ್ಯ ಪುರುಷರಿಂದ ಸಂತಾನೋತ್ಪಾದನೆ ಮಾಡಿಕೊಳ್ಳಬೇಕೆಂದಾಗಲಿ ಇಸ್ಲಾಂ ಬೋಧಿಸುವುದಿಲ್ಲ. ಪತಿ–ಪತ್ನಿಯರು ಸತ್ಯವಿಶ್ವಾಸಿಗಳೂ ಸಾತ್ವಿಕರೂ ಆಗಿ ಪರಿವರ್ತಿತರಾಗಿ ಅವರು ತಮ್ಮ ದಾಂಪತ್ಯ ಸಂಬಂಧವನ್ನು ಮುರಿಯದಿದ್ದ ಪಕ್ಷದಲ್ಲಿ ಪರಲೋಕ ಜೀವಿತದಲ್ಲೂ ಅವರಿಗೆ ತಮ್ಮ ಆ ಸಂಬಂಧವನ್ನು ಆಧ್ಯಾತ್ಮಿಕವಾಗಿ ಮುಂದುವರಿಸಿಕೊಂಡು ಹೋಗಬಹುದೆಂದು ಇಸ್ಲಾಂ ಕಲಿಸುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ದಾಂಪತ್ಯ ಜೀವಿತವನ್ನು ಮುಂದುವರಿಸಿಕೊಂಡು ಹೋಗಲು ಪ್ರಯಾಸಕರವಾದ ಕೆಲವು ತೊಡಕುಗಳು ದಂಪತಿಗಳೆಡೆಯಲ್ಲಿ ಸಂಭವಿಸಬಹುದಾದ್ದರಿಂದ, ಅವರನ್ನು ದುರಿತಪೂರ್ಣ ಜೀವಿತದಿಂದ ರಕ್ಷಿಸಲಿಕ್ಕೆ ವಿವಾಹ ವಿಚ್ಛೇದನ ಮಾಡಬಹುದೆಂದು ಇಸ್ಲಾಂ ಸಮ್ಮತಿಸುತ್ತದೆ. ಹಾಗೆ ಅದಕ್ಕೆ ಸಮ್ಮತಿ ನೀಡದಿದ್ದರೆ ಅದರ ಅಧ್ಯಾಪನ ಸಾರ್ವಲೌಕಿಕವೂ ಸುಗಮವೂ ಎಂದು ಗಣಿಸಲ್ಪಡಲಿಕ್ಕಿಲ್ಲ. ಮಾತ್ರವಲ್ಲ, ವಿವಾಹ ವಿಚ್ಛೇದನ ಸಲ್ಲದೆಂದು ಅನುಶಾಸಿಸುವ ಧರ್ಮಗಳ ಅನುಯಾಯಿಗಳಂತೆ ಮುಸ್ಲಿಮರು ಸಹ ಹೊಸ ನಿಯಮ ನಿರ್ಮಾಣ ಮೂಲಕ ವಿವಾಹ ವಿಚ್ಛೇದನವನ್ನು ಸಿಂಧುಗೊಳಿಸಲು ಶ್ರಮಿಸಬೇಕಾದೀತು. ಇಸ್ಲಾಂ ವಿವಾಹ ವಿಚ್ಛೇದವನ್ನು ಒಪ್ಪುವುದಾದರೂ ಮುಸ್ಲಿಮರಲ್ಲಿ ನಡೆಯುವ ಮದುವೆಗಳಲ್ಲಿ 99ಶೇಕಡ ನಿರ್ವಿಘ್ನವಾಗಿ ಮುಂದುವರಿದುಕೊಂಡು ಹೋಗುತ್ತದೆ. ಇದಕ್ಕೆ ವಿರುದ್ಧವಾಗಿ, ವಿವಾಹ ವಿಚ್ಛೇದನ ಸಲ್ಲದೆಂದು ಅನುಶಾಸಿಸುವ ಧರ್ಮಗಳ ಅನುಯಾಯಿಗಳಲ್ಲಿ ವಿವಾಹ ವಿಚ್ಛೇದನ ಮುಸ್ಲಿಮರೆಡೆಯಲ್ಲಿರುವುದಕ್ಕಿಂತ ಕಮ್ಮಿಯಲ್ಲ, ಹೆಚ್ಚೇ ಇದೆಯೆಂದು ಹೇಳಿದರೆ ಅದು ತಪ್ಪೆನಿಸದು. ಇದರಿಂದ, ಇಸ್ಲಾಮಿಕ ವಿಧಿಯ ಪ್ರಾಯೋಗಿಕತೆಯೂ ಆವಶ್ಯಕತೆಯೂ ಎಷ್ಟರ ಮಟ್ಟಿಗಿದೆಯೆಂದು ಮನಗಾಣಬಹುದು. ♦

**(ಭಾಷಾಂತರ: ಮುಹಮ್ಮದ್ ಯೂಸುಫ್)**


# READ AHMADIYYA PERIODICALS

## THE REVIEW OF RELIGIONS

English Monthly
Annual Subscription : ₹. 500/-
Contact: The Editor
The Review of Religions
Mohalla Ahmadiyya,
QADIAN – 143516 (Punjab)
Telephone : +91 1872 500970

====================================================

**BADAR** – Urdu Weekly
Annual Subscription : ₹. 550/-
Contact: The Manager
The Badar Weekly
Mohalla Ahmadiyya,
QADIAN – 143516 (Punjab)
Telephone : (0091) 94170-20616

# ಖಾತಮುಲ್ ಅಂಬಿಯಾ (ಪ್ರವಾದಿಗಳ ಮುದ್ರೆ) ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶ್ರೇಷ್ಠತೆ

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳಿರುವನು: "ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹ ಬಯಸುತ್ತಾರೆ. ಎಲೈ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ." (ಪವಿತ್ರ ಖುರ್‌ಆನ್ 33:57)

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುಮ್ಮಜೀದ್. ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುಮ್ಮಜೀದ್.**

ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಹೇಳಿದ್ದಾರೆ: "ಎರಡು ವಿಧಗಳ ಜೀವಿತಗಳು ಮಾತ್ರ ಪ್ರಶಂಸಾರ್ಹವಾಗಿವೆ.

1) ಅಲ್ಲಾಹನ ಶಾಶ್ವತ ಜೀವಿತ. ಅವನು ಜೀವಂತನೂ ಜೀವದಾತನೂ ಎಲ್ಲ ವಿಧಗಳ ಅನುಗ್ರಹಗಳ ಉದ್ಭವ ಸ್ಥಾನವೂ ಆಗಿದ್ದಾನೆ.

2) ದೇವನನ್ನು ದರ್ಶಿಸುವಂತೆ ಮಾಡುವ ಅನುಗ್ರಹ ನೀಡುವ ಜೀವಿತ. ಇಂತಹ ಜೀವಿತವನ್ನು ಹೊಂದಿದವರು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾತ್ರ ಎಂದು ನಾವು ಸಾಬೀತುಗೊಳಿಸುವೆವು. ಇದರ ಬಗ್ಗೆ ಆಕಾಶವು ಎಲ್ಲ ಕಾಲ ಘಟ್ಟಗಳಲ್ಲೂ ಸಾಕ್ಷ್ಯ ನೀಡುತ್ತಾ ಇತ್ತು. ಈಗಲೂ ಸಾಕ್ಷ್ಯ ನೀಡುತ್ತಾ ಇದೆ. ಯಾರು ಅನುಗ್ರಹದಾಯಕ ಜೀವಿತ ಹೊಂದಿಲ್ಲವೋ ಅವನು ಮೃತನು; ಜೀವಂತನಲ್ಲ. ನಾನು ಅಲ್ಲಾಹನ ಆಣೆ ಹಾಕಿ ಹೇಳುತ್ತೇನೆ– ಅವನ ಹೆಸರಲ್ಲಿ ಸುಳ್ಳು ಆಣೆ ಹಾಕುವುದು ತೀವ್ರ ದುರದೃಷ್ಟಕರವಾಗಿದೆ– ಅಲ್ಲಾಹನು ನನಗೆ ನನ್ನ ಆದರಣೀಯ ಯಜಮಾನರಾದ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಧ್ಯಾತ್ಮಿಕ ಶಾಶ್ವತ ಜೀವಿತದ ವೈಭವ ಮತ್ತು ಪರಿಪೂರ್ಣತೆಯ ಬಗ್ಗೆ ಸಾಕ್ಷ್ಯಾಧಾರವನ್ನು ದಯಪಾಲಿಸಿದ್ದಾನೆ. ನಾನು ಅವರನ್ನು ಅನುಸರಿಸಿದುದರಿಂದಲೂ ಅವರನ್ನು ಪ್ರೀತಿಸಿದುದರಿಂದಲೂ ದೈವಿಕ ದೃಷ್ಟಾಂತಗಳು ನನ್ನ ಮೇಲೆ ಸುರಿಯುತ್ತಿರುವುದಾಗಿ ಮತ್ತು ಹೃದಯ ದೃಢ ವಿಶ್ವಾಸದ ಪ್ರಭೆಯಿಂದ ತುಂಬಿರುವುದಾಗಿ ಕಂಡೆನು. ಎಷ್ಟು ವಿಪುಲವಾಗಿ ದೈವಿಕ ದೃಷ್ಟಾಂತಗಳನ್ನು ಕಂಡೆನೆಂದರೆ ಅವುಗಳ ಸ್ಪಷ್ಟ ಪ್ರಕಾಶದ ಮೂಲಕ ನಾನು ನನ್ನ ದೇವನನ್ನು ನೋಡಿದೆನು." (ತಿರ್‌ಯಾಖುಲ್ ಖುಲೂಬ್ – ರೂಹಾನೀ ಖಝಾಇನ್ ಪುಟ 12)

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶಾಶ್ವತ ಆಧ್ಯಾತ್ಮಿಕ ಜೀವಿತ ಹೊಂದಿರುವುದಕ್ಕೆ ಮತ್ತು ಅವರ ಪ್ರವಾದಿತ್ವದ ಅನುಗ್ರಹಗಳು ಈಗಲೂ ಜಾರಿಯಾಗಿರುವುದಕ್ಕೆ ಬಲವತ್ತಾದ ಸಾಕ್ಷ್ಯ ಇದಾಗಿರುವುದರಿಂದ ಅಲ್ಲಾಹನ ಪ್ರೀತಿ ಮತ್ತು ಅವನ ಸಾಮೀಪ್ಯ ಗಳಿಸಲು ಪ್ರತಿಯೊಬ್ಬ ಮನುಷ್ಯನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದು ಕಡ್ಡಾಯವಾಗಿರುತ್ತದೆ. ಆದರೆ ಈ ಕಾಲಘಟ್ಟದ ಮುಸ್ಲಿಮರ ನಡೆವಳಿಕೆಗಳನ್ನು ನೋಡುವುದಾದರೆ ಬಹಳ ದುಃಖಕರವಾದ ಪರಿಸ್ಥಿತಿ ಗೋಚರಿಸುತ್ತದೆ. ಅವರು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದನ್ನು ಬಿಟ್ಟು ಪೀರರನ್ನೂ ಫಕೀರರನ್ನೂ ಹಿಂಬಾಲಿಸುತ್ತಿದ್ದಾರೆ ಮತ್ತು ಗೋರಿಗಳಲ್ಲಿ ದಫನ್‌ಗೊಳಿಸಲ್ಪಟ್ಟಿರುವ ಹಿರಿಯ ಮಹಾಪುರುಷರ ಮೂಲಕ ತಮ್ಮ ಆಶಾಭಿಲಾಷೆಗಳನ್ನು ಈಡೇರಿಸುವ ಚಿಂತೆಯಲ್ಲಿ ಕಾರ್ಯೋನ್ಮುಖರಾಗಿರುವುದು ಕಂಡುಬರುತ್ತದೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೇಳುತ್ತಾರೆ: "ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡವಳಿಕೆಗಳನ್ನು, ಅವರ ಸ್ವಭಾವಗುಣಗಳನ್ನು, ಅವರ ಕಾರ್ಯವಿಧಾನವನ್ನು ಅನುಸರಿಸುತ್ತಾ ಅವರನ್ನು ತನ್ನ ಮಾರ್ಗದರ್ಶಕರನ್ನಾಗಿ ಮಾಡುವ ತನಕ ಮನುಷ್ಯನು ಅಲ್ಲಾಹನ ಬಗ್ಗೆ ಪ್ರೀತಿಯನ್ನು ತನ್ನಲ್ಲಿ ಪರಿಪೂರ್ಣವಾಗಿ ಉಂಟು ಮಾಡಲಾರನು. ಇದರ ಬಗ್ಗೆ ಅಲ್ಲಾಹನೇ ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿರುವನು: 'ಅಲ್ಲಾಹನ ಪ್ರೀತಿಗೆ ಪಾತ್ರನಾಗಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದು ಅತ್ಯಾವಶ್ಯಕವಾಗಿದೆ.' ಸತ್ಯಸಂಧವಾದ ಅನುಸರಣೆ ಮಾಡುವುದು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವ್ಯ ಸುಸ್ವಭಾವಗುಣಗಳ ಬಣ್ಣವನ್ನು ತನ್ನೊಳಗೆ ಉಂಟುಮಾಡುವ ಮೂಲಕವಾಗಿದೆ. ಆದರೆ ಈಗಿನ ಕಾಲದ ಮುಸ್ಲಿಮರು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದನ್ನು ನಮಾಝ್‌ನಲ್ಲಿ ಅಲ್ಲಾಹು ಅಕ್‌ಬರ್ ಹೇಳುವಾಗ ಕೈ ಎತ್ತುವುದು, ಆಮೀನ್ ಉಚ್ಚ ಸ್ವರದಲ್ಲಿ ಹೇಳುವುದು, ಪ್ರಾರ್ಥಿಸುವಾಗ ಕೈ ಎತ್ತಿಹಿಡಿಯುವುದು ಇವುಗಳಿಗೆ ಸೀಮಿತಗೊಳಿಸಿದ್ದಾರೆ. ಆದರೆ ಸ್ವಭಾವ ಪರಿಶುದ್ಧಿಯನ್ನು ಕೈಬಿಟ್ಟಿರುತ್ತಾರೆ. ಇದು ಖೇದಕರವಾಗಿದೆ."

(ಅಲ್‌ಹಕಮ್ 31.7.1902)

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜೀವಂತ ಮತ್ತು ಜೀವದಾಯಕ ಅನುಗ್ರಹವನ್ನು ಹೊಂದಿದ್ದರು ಎಂಬುದಕ್ಕೆ ಬಹಳ ಪ್ರಬಲವಾದ ಸಾಕ್ಷ್ಯಾಧಾರ

ಇದಾಗಿದೆ: ತನ್ನ ಎಲ್ಲ ಪರಿಪೂರ್ಣವಾದ ಗುಣವಿಶೇಷಗಳೊಂದಿಗೆ ಜೀವಂತನೂ ಸದಾಕಾಲ ಜೀವಂತವಾಗಿ ಇರುವವನೂ ಆಗಿರುವ ಅಲ್ಲಾಹನು ತನ್ನ ಪ್ರಿಯ ಪ್ರವಾದಿ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವ ಕಾರಣದಿಂದ ತನ್ನ ಸಂದೇಶವಾಣಿಯನ್ನು ದಯಪಾಲಿಸುತ್ತಾನೆ. ಅವನು ತನ್ನ ಪ್ರಿಯ ಪ್ರವಾದಿಯನ್ನು ಅನುಸರಿಸುವವರೊಂದಿಗೆ ಈಗಲೂ ಮಾತನಾಡುತ್ತಾನೆ. ಆದರೆ ಅನ್ಯ ಪ್ರವಾದಿಗಳ ಅನುಯಾಯಿಗಳಿಗೆ ತಮ್ಮ ಪ್ರವಾದಿಗಳ ಆಧ್ಯಾತ್ಮಿಕ ಜೀವಂತಿಕೆ ಬಗ್ಗೆ ಸಾಬೀತುಗೊಳಿಸಲು ಸಾಧ್ಯವಾಗುವುದಿಲ್ಲ.

ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪಿಸಲು ಬಯಸುತ್ತೇವೆ. ಹಝ್‌ರತ್ ಈಸಾ ಅಲೈಹಿಸ್ಸಲಾಮರು ಅನ್ಯ ಪ್ರವಾದಿಗಳ ಹಾಗೆ ಮೃತರಾಗಿಲ್ಲ; ಅವರು ಎರಡು ಸಾವಿರ ವರ್ಷಗಳಿಂದ ಈಗಲೂ ಆಕಾಶದಲ್ಲಿ ಕುಳಿತಿದ್ದಾರೆಂದೂ ಲೋಕದ ಅಂತಿಮ ಕಾಲಘಟ್ಟದಲ್ಲಿ ತನ್ನ ದೇಹ ಸಮೇತ ಆಕಾಶದಿಂದ ಇಳಿದು ಬಂದು ಮುಸ್ಲಿಮರನ್ನು ಸುಧಾರಣೆ ಮಾಡಿ ಇಸ್ಲಾಮನ್ನು ಜಯಶಾಲಿಯನ್ನಾಗಿ ಮಾಡುವರೆಂದೂ ಮುಸ್ಲಿಮರು ದುರದೃಷ್ಟಕರವಾಗಿ ನಂಬುತ್ತಾರೆ. ಈ ವಿವೇಕ ರಹಿತ, ಪ್ರಕೃತಿ ವಿರುದ್ಧ, ದೇವನ ನಿಯಮಗಳ ವಿರುದ್ಧ, ಪವಿತ್ರ ಖುರ್‌ಆನ್ ವಿರುದ್ಧ ನಂಬಿಕೆ ಕ್ರೈಸ್ತ ಧರ್ಮದ ಜನರಿಂದ ಮುಸ್ಲಿಮರಿಗೆ ವರ್ಗಾಯಿಸಲ್ಪಟ್ಟಿತು ಮತ್ತು ನೂರಾರು ವರ್ಷಗಳಿಂದ ಈ ನಂಬಿಕೆ ಜಾರಿಯಲ್ಲಿದೆ. ಆದರೆ ಅಲ್ಲಾಹನು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಖಾದಿಯಾನಿನ ಹಝ್‌ರತ್ ಮಿರ್ಝಾ ಗುಲಾಂ ಅಹ್ಮದ್ ಅಲೈಹಿಸ್ಸಲಾಮರನ್ನು ಸಾಂಪ್ರದಾಯಿಕ ವಿಶ್ವಾಸದಲ್ಲಿ ಮುಂದುವರಿಯುವಂತೆ ಮಾಡಿ 1890ರ ಕೊನೆಯ ಭಾಗದಲ್ಲಿ ತನ್ನ ಸಂದೇಶವಾಣಿ ಮೂಲಕ ಹಝ್‌ರತ್ ಈಸಾ ಅಲೈಸ್ಸಲಾಮರು ಮೃತರಾದ ಬಗ್ಗೆ ತಿಳಿಸಿ ಹೀಗೆ ಹೇಳಿದನು: **“**ಸಂದೇಶವಾಹಕನಾದ ಮರ್‌ಯಮ್ ಪುತ್ರ ಈಸಾ ಮೃತನಾಗಿರುವರು. ವಾಗ್ದಾನ ನೀಡಲ್ಪಟ್ಟ ಪ್ರಕಾರ ಅವನ ರೂಪದಲ್ಲಿ ನೀನು ಆಗಮಿಸಿರುವೆ. ಅಲ್ಲಾಹನ ವಾಗ್ದಾನ ಈಡೇರುವಂತಹದ್ದೇ ಆಗಿರುತ್ತದೆ.**”** (ಇಝಾಲೆ ಅವ್‌ಹಾಮ್ – ರೂಹಾನೀ ಖಝಾಇನ್ ಸಂಪುಟ 3 ಪುಟ 412)

ಹಝ್‌ರತ್ ಮಿರ್ಝಾ ಗುಲಾಂ ಅಹ್ಮದ್ ಅಲೈಹಿಸ್ಸಲಾಮರು ಪವಿತ್ರ ಖುರ್‌ಆನಿನ ಮೂವತ್ತು ವಚನಗಳ ಸಾಕ್ಷ್ಯಾಧಾರ ಮೂಲಕ, ಹಝ್‌ರತ್ ಈಸಾ ಅಲೈಹಿಸ್ಸಲಾಮ್ ಇತರ ಎಲ್ಲ ಪ್ರವಾದಿಗಳ ಹಾಗೆ ಮತ್ತು ಮನುಷ್ಯರ ಹಾಗೆ ಸಹಜವಾಗಿ ಮೃತರಾಗಿರುವರು ಎಂದು ಸಾಬೀತುಗೊಳಿಸಿದರು. ಅವರು ಹೀಗೆ ಬರೆದಿದ್ದಾರೆ: **“**ಹಝ್‌ರತ್ ಈಸಾ ಅಲೈಹಿಸ್ಸಲಾಮ್ ಆಕಾಶದಲ್ಲಿ ಜೀವಿಸಿರುವರು ಎಂದು ಅವಿವೇಕಿಗಳು ಹೇಳುತ್ತಾರೆ. ಆದರೆ ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ, ಅವರು ಜೀವಂತವಾಗಿರುವ ಚಿಹ್ನೆಗಳನ್ನು ನಾನು ಕಾಣುತ್ತೇನೆ. ಲೋಕದ ಜನರಿಗೆ ಅದೃಶ್ಯನಾಗಿರುವ ದೇವನನ್ನು ನಾವು ಈ ಪ್ರವಾದಿಯ ಮೂಲಕ ನೋಡಿದೆವು. ಜೀವಂತನಾಗಿರುವ ಆ ದೇವನ ಬಾಗಿಲು ಅನ್ಯ ಜನಾಂಗದವರಿಗೆ ಮುಚ್ಚಲಾಗಿದ್ದರೂ ಈ ಪ್ರವಾದಿಯ ಅನುಗ್ರಹದ ಮೂಲಕ ನಮಗೋಸ್ಕರ ತೆರೆಯಲಾಯಿತು. ಅನ್ಯ ಜನಾಂಗದ ಜನರು ಕಥೆಗಳ ರೂಪದಲ್ಲಿ ವಿವರಿಸುತ್ತಿದ್ದ ಅದ್ಭುತ ಕೃತ್ಯಗಳು ಈ ಪ್ರವಾದಿಯ ಮೂಲಕ ನಾವು ಸ್ವತಃ ಕಣ್ಣಾರೆ ಕಂಡೆವು. ನಾವು ಪ್ರವಾದಿಯನ್ನು ಎಂತಹ ಮಹೋನ್ನತ ಸ್ಥಾನದಲ್ಲಿ ಕಂಡೆವು ಎಂದರೆ ಅಂತಹ ಮಹೋನ್ನತ ಸ್ಥಾನ ಪಡೆದವರು ಬೇರೆ ಯಾರೂ ಇಲ್ಲ. ಆದರೆ ಲೋಕಕ್ಕೆ ಇವರ ಬಗ್ಗೆ ತಿಳಿದಿಲ್ಲ ಎನ್ನುವುದು ಆಶ್ಚರ್ಯಕರವಾಗಿದೆ.**”** (ಚಶ್ಮಯೆ ಮಸೀಹ್ ಪುಟ 22)

ಇನ್ನೊಂದು ಗ್ರಂಥದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಬರೆದಿದ್ದಾರೆ: **“**ನಮ್ಮ ಧರ್ಮದ ಸಾರಾಂಶ **ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್‍ರಸೂಲುಲ್ಲಾಹ್** (ಅಲ್ಲಾಹನ ಹೊರತು ಅನ್ಯ ದೇವನಿಲ್ಲ. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವನ ಸಂದೇಶವಾಹಕರಾಗಿರುವರು.) ನಾವು ಇಹಲೋಕದಲ್ಲಿ ಹೊಂದಿರುವ ನಂಬಿಕೆ ಮತ್ತು ಇಹಲೋಕದಿಂದ ಮೃತರಾಗಿ ಹೋಗುವಾಗಲೂ ಇರುವ ನಂಬಿಕೆ ಇದಾಗಿದೆ. ನಮ್ಮ ಯಜಮಾನರಾದ ಹಝ್‌ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಾತಮುನ್ನಬಿಯ್ಯೀನ್ (ಪ್ರವಾದಿಗಳ ಮುದ್ರೆ) ಮತ್ತು ಖೈರುಲ್ ಮುರ್‌ಸಲೀನ್ (ಸಂದೇಶವಾಹಕರಲ್ಲಿ ಶ್ರೇಷ್ಠ) ಆಗಿರುವರು. ಅವರ ಕೈಗಳಿಂದ ಧರ್ಮವು ಪರಿಪೂರ್ಣವಾಯಿತು. ಅವರಿಗೆ ಅನುಗ್ರಹಗಳು ಅವರ ಉನ್ನತ ಶ್ರೇಣಿಗೆ ಅನುಸಾರವಾಗಿ ಪರಿಪೂರ್ಣವಾಗಿ ಲಭಿಸಿದುವು. ಅವರನ್ನು ಅನುಸರಿಸುವ ಮೂಲಕ ಮನುಷ್ಯನು ನೇರಮಾರ್ಗವನ್ನು ಅವಲಂಬಿಸಿ ಅಲ್ಲಾಹನ ಸಮೀಪ ತಲುಪಬಲ್ಲನು.**”** (ಇಝಾಲೆ ಅವ್‌ಹಾಮ್ – ರೂಹಾನೀ ಖಝಾಇನ್ ಸಂಪುಟ 3 ಪುಟ 170)

ಅಹ್ಮದಿಯೇತರ ವಿದ್ವಾಂಸರಾಗಿದ್ದ ದೇವ್‌ಬಂದ್ ದಾರುಲ್ ಉಲೂಮಿನ ಮುಖ್ಯಸ್ಥರೂ ಅತ್ಯಂತ ವಿಶಾಲ ಮನೋಭಾವ ಹೊಂದಿದವರೂ ಜ್ಞಾನಿಯೂ ಆಗಿದ್ದ ಖಾರೀ ಮುಹಮ್ಮದ್ ತಯ್ಯಿಬ್ ಸಾಹೇಬ್ **“**ಆಫ್‌ತಾಬೆ ನುಬುವ್ವತ್**”** ಎಂಬ ಗ್ರಂಥ ಬರೆದು ಹಝ್‌ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನುಬುವ್ವತಿನ ಸೂರ್ಯ ಆಗಿರುವ ಬಗ್ಗೆ ವಿಶದವಾಗಿ ವಿವರಿಸಿರುವರು. ಈ ಗ್ರಂಥದಲ್ಲಿ ಅವರು ಹೀಗೆ ಬರೆದಿದ್ದಾರೆ: **“** ಹುಝೂರರ (ಎಂದರೆ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ) ಶ್ರೇಷ್ಠತೆ ಇರುವುದು ಕೇವಲ ಅವರ ನುಬುವ್ವತಿನ (ಪ್ರವಾದಿತ್ವದಲ್ಲಿ) ಮಾತ್ರವಲ್ಲ. ಅವರು ನುಬುವ್ವತ್ (ಪ್ರವಾದಿತ್ವ) ದಯಪಾಲಿಸುವವರೂ ಆಗಿದ್ದಾರೆ. ನುಬುವ್ವತ್ ಗಳಿಸಲು ಅರ್ಹತೆ ಹೊಂದಿದ ಯಾರೇ ವ್ಯಕ್ತಿ ಅವರ ಮುಂದೆ ಬಂದರೆ ನಬಿ (ಪ್ರವಾದಿ) ಆಗಿಬಿಡುತ್ತಾನೆ. ಇದೇ ಖಾತಂ ಆಗಿರುವುದರ ವೈಭವವಾಗಿದೆ. ಹಝ್‌ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಇಂತಹ ಅನುಗ್ರಹದಾಯಕ ಗುಣ ಮತ್ತು ಪ್ರವಾದಿತ್ವದ ಪರಿಪೂರ್ಣತೆಯ ಉಗಮಸ್ಥಾನ ಅವರ ಒಂದು ಅದ್ವಿತೀಯ ವೈಶಿಷ್ಟ್ಯವಾಗಿದ್ದು ಮನುಷ್ಯರ ಸೃಷ್ಟಿಯ ಆದಿಯಿಂದ ಪ್ರಾರಂಭವಾಗಿ ಪ್ರಪಂಚದ ಅತ್ಯುನ್ನತ ಮಟ್ಟವನ್ನು ತಲುಪಿತು.**”** (ಆಫ್‌ತಾಬೆ ನುಬುವ್ವತ್ ಪುಟ 9–14)

ಇಂತಹ ಮಹೋನ್ನತ ಸ್ಥಾನ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೊರತು ಬೇರೆ ಯಾವ ಪ್ರವಾದಿಗೂ ಅವರಿಗಿಂತ ಹಿಂದೆ ಎಂದೂ ಲಭಿಸಿರಲಿಲ್ಲ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಹೇಳುತ್ತಾರೆ: "ಅಲ್ಲಾಹನು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಂ (ಮುದ್ರೆ) ಹೊಂದಿರುವವರನ್ನಾಗಿ ಮಾಡಿದನು. ಅನುಗ್ರಹವನ್ನು ನೀಡಲು ಅವರಿಗೆ ಈ ಮುದ್ರೆ ನೀಡಲಾಯಿತು. ಬೇರೆ ಯಾವ ಪ್ರವಾದಿಗೂ ಇದನ್ನು ಖಂಡಿತವಾಗಿಯೂ ನೀಡಿರಲಿಲ್ಲ. ಇದೇ ಕಾರಣದಿಂದ ಅವರನ್ನು ಖಾತಮುನ್ನಬಿಯ್ಯೀನ್ ಎಂದು ಕರೆಯಲಾಯಿತು. ಅಂದರೆ, ಅವರನ್ನು ಪರಿಪೂರ್ಣವಾಗಿ ಅನುಸರಿಸುವ ಮೂಲಕ ನುಬುವ್ವತ್ ಗಳಿಸಬಹುದಾಗಿದೆ. ಅವರ ಆಧ್ಯಾತ್ಮಿಕ ಲಕ್ಷ್ಯ ನೀಡುವಿಕೆ ನಬಿಯನ್ನು ನಿರ್ಮಿಸುವುದಾಗಿದೆ. ಇಂತಹ ಪರಿಶುದ್ಧ ಶಕ್ತಿ ಬೇರೆ ಯಾವ ಪ್ರವಾದಿಗೂ ಲಭಿಸಲಿಲ್ಲ." (ಹಕೀಕತುಲ್ ವಹೀ – ರೂಹಾನೀ ಖಝಾಇನ್ ಸಂಪುಟ 22 ಪುಟ 100 – ಟಿಪ್ಪಣಿ)

ಅಹ್ಮದಿಯಾ ಜಮಾಅತಿನ ಸರ್ವೋನ್ನತ ನಾಯಕರೂ ಪಂಚಮ ಖಲೀಫರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರು ಹೀಗೆ ಹೇಳುತ್ತಾರೆ:

"ನಾವು ಉಚ್ಚಸ್ವರದಲ್ಲಿ ಹೀಗೆ ಪ್ರಕಟಿಸಲು ಬಯಸುತ್ತೇವೆ– ಮುಹಮ್ಮದೀ ಮಸೀಹರ ಆಗಮನದಿಂದ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಾತಮಿಯ್ಯತ್ ಎಂಬ ಸ್ಥಾನ ಉನ್ನತಗೊಳ್ಳುತ್ತದೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿಗೆ ಈ ಉನ್ನತ ಸ್ಥಾನ ದೊರಕುವುದು ಅವರ ಉನ್ನತ ವೈಭವದ ಪ್ರಕಟಣೆ ಆಗಿದೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಪದ್ಯದಲ್ಲಿ ಹೀಗೆ ಹೇಳಿದ್ದಾರೆ:

ಬರ್‌ತರ್ ಗುಮಾನೋ ವಹ್‌ಮ್ ಸೆ ಅಹ್ಮದ್ ಕಿ ಶಾನ್ ಹೆ
ಜಿಸ್‌ಕಾ ಗುಲಾಂ ದೇಖೋ ಮಸೀಹು ಝ್ಝಮಾನ್ ಹೆ

ಹಝ್ರತ್ ಅಹ್ಮದ್ (ಮುಹಮ್ಮದ್) ಸಲ್ಲಲ್ಲಾಹು ಅಲೈಹಿ ವಸಲ್ಲಮರ ವೈಭವ ಊಹಾತೀತವಾಗಿದೆ.

ಅವರ ಗುಲಾಮನಾಗಿರುವ ಈ ಕಾಲಘಟ್ಟದ ಮಸೀಹರನ್ನು ನೋಡಿರಿ.

ನಾವು ಈ ಉಪದೇಶವನ್ನು ಹೃದಯದಲ್ಲಿ ಸ್ಥಾಪಿಸಿಕೊಂಡು ಹಝ್ರತ್ ಮುಹಮ್ಮದ್ ಮುಸ್ತಫಾ ಅಹ್ಮದ್ ಮುಜ್‌ತಬಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಹೋನ್ನತ ವೈಭವವನ್ನು ಸ್ಥಾಪಿಸುವವರಾಗಿದ್ದೇವೆ."

(ದಿನಾಂಕ 27–6–2010, ಜರ್ಮನಿಯ ವಾರ್ಷಿಕ ಸಮ್ಮೇಳನದಲ್ಲಿ ಮಾಡಿದ ಭಾಷಣ.)

ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಹೇಳುತ್ತಾರೆ: "ನಾವು ಸರ್ವಶಕ್ತನೂ ಪರಿಶುದ್ಧನೂ ಆಗಿರುವ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಅವನು ತನ್ನ ಪ್ರಿಯ ಪ್ರವಾದಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವ ಮತ್ತು ಅನುಸರಿಸುವ ಭಾಗ್ಯ ನಮಗೆ ನೀಡಿದನು. ಪ್ರೀತಿ ಮತ್ತು ಅನುಸರಣೆಯ ಮೂಲಕ ದೊರಕುವ ಆಧ್ಯಾತ್ಮಿಕ ಅನುಗ್ರಹಗಳನ್ನು ಸತ್ಯವಾದ ಭಯಭಕ್ತಿ ಮತ್ತು ದೃಷ್ಟಾಂತಗಳ ಮೂಲಕ ದಯಪಾಲಿಸಿದನು. ಇದರ ಮೂಲಕ ಹೀಗೆ ಸಾಬೀತುಗೊಳಿಸಿದನು: ನಮಗೆ ಪ್ರಿಯರಾದ ಶ್ರೇಷ್ಠ ಪ್ರವಾದಿ ಮೃತರಾಗಿಲ್ಲ. ಅವರು ಆಕಾಶದಲ್ಲಿ ಸರ್ವಶಕ್ತನಾದ ಅಲ್ಲಾಹನ ಬಲಭಾಗದಲ್ಲಿ ಹಿರಿಮೆ ಮತ್ತು ವೈಭವದ ಸಿಂಹಾಸನದಲ್ಲಿ ಕುಳಿತಿದ್ದಾರೆ. ಅಲ್ಲಾಹುಮ್ಮ ಸಲ್ಲಿ ಅಲೈಹಿ ವ ಬಾರಿಕ್ ವ ಸಲ್ಲಿಮ್. ಇನ್ನಲ್ಲಾಹ ವ ಮಲಾಯಿಕತಹೂ ಯುಸಲ್ಲೂನ ಅಲನ್ನಬಿಯ್ಯಿ. ಯಾ ಅಯ್ಯುಹಲ್ಲದೀನ ಆಮನೂ ಸಲ್ಲೂ ಅಲೈಹಿ ವ ಸಲ್ಲಿಮೂ ತಸ್ಲೀಮಾ".

(ತಿರ್‌ಯಾಖುಲ್ ಖುಲೂಬ್–ಪುಟ 5)


**ಯುಗರಶ್ಮಿಗೆ ಚಂದಾದಾರರಾಗಿರಿ**

**ವಾರ್ಷಿಕ ಚಂದಾ: ರೂ. 60/–, ಅಂಚೆ ಮೂಲಕ : ರೂ. 70/–**

ಸಂಪರ್ಕಿಸಿರಿ : **99 00 410 789**


**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ**

# ನೋಬೆಲ್ ವಿಜೇತನನ್ನು ತಡವಾಗಿ ಗೌರವಿಸಲಾಯಿತು

**ವಿಶ್ವವಿಖ್ಯಾತ ಭೌತಶಾಸ್ತ್ರಜ್ಞನೂ ನೋಬೆಲ್ ವಿಜೇತನೂ ಆದ ಡಾ। ಮುಹಮ್ಮದ್ ಅಬ್ದುಸ್ಸಲಾಂ ಜನ್ಮ ದೇಶವಾದ ಪಾಕಿಸ್ಥಾನದಲ್ಲಿ, ಅಹ್ಮದಿಯಾದ ಕಾರಣದಿಂದ ತೀವ್ರವಾದ ನಿಂದನೆಗೆ ಗುರಿಯಾಗಿದ್ದರು. 37 ವರ್ಷಗಳ ಬಳಿಕ ಪಾಕ್ ಪ್ರಧಾನಿ ನವಾಝ್ ಶರೀಫ್ ತಪ್ಪು ತಿದ್ದುತ್ತಿದ್ದಾರೆ. ಖ್ಯಾತ ಸಾಮಾಜಿಕ ನಿರೀಕ್ಷಕನೂ ಮಾನವ ಹಕ್ಕು ಕಾರ್ಯಕರ್ತನೂ ಆದ ಲೇಖಕ ಹಮೀದ್ ಚೇನ್ನಮಂಗಲೂರ್ 'ಮಲಯಾಳಂ' ವಾರಪತ್ರಿಕೆಯಲ್ಲಿ (2016 ಡಿಸೆಂಬರ್ 19) 'ಶಬ್ದಮಿಲ್ಲಾತ್ತವರುಡೆ ಶಬ್ದಂ' ಎಂಬ ತನ್ನ ಕಾಲಮ್‌ನಲ್ಲಿ ಬರೆದ ಲೇಖನವಿದು.**

ಭೌತಶಾಸ್ತ್ರಕ್ಕಿರುವ ನೋಬೆಲ್ ಪುರಸ್ಕಾರ ಪಾಕಿಸ್ಥಾನಿಯಾದ ಡಾ। ಮುಹಮ್ಮದ್ ಅಬ್ದುಸ್ಸಲಾಮ್‌ರಿಗೆ ಲಭಿಸಿದ್ದು ಮುವತ್ತೇಳು ವರ್ಷ ಮುಂಚೆ 1979ರಲ್ಲಿ. ಅಮೇರಿಕದವರಾದ ಶೆಲ್ಡನ್ ಗ್ಲಾಸ್‌ಹೋವ್ ಮತ್ತು ಸ್ಟೀವನ್ ವಿನ್‌ಬರ್ಗ್ ಸಲಾಮ್‌ರೊಂದಿಗೆ ಅದೇ ಪುರಸ್ಕಾರದಲ್ಲಿ ಪಾಲು ಪಡೆದವರಾಗಿದ್ದಾರೆ. ಅಮೇರಿಕ ಸರಕಾರವೂ ಜನತೆಯೂ ಸ್ವಾಭಾವಿಕವಾಗಿ ತಮ್ಮ ವಿಜ್ಞಾನ ಪ್ರತಿಭೆಗಳನ್ನು ಹಾರ್ದಿಕವಾಗಿ ಶ್ಲಾಘಿಸಿದರು ಮತ್ತು ಗೌರವಿಸಿದರು. ಆದರೆ ಚರಿತ್ರೆಯಲ್ಲಿ ಮೊತ್ತಮೊದಲಿಗೆ ಮುಸ್ಲಿಂ ಸಮೂಹದಿಂದ ವಿಜ್ಞಾನಕ್ಕಿರುವ ನೋಬೆಲ್ ಬಹುಮಾನ ಪಡೆದ ಅಬ್ದುಸ್ಸಲಾಮ್‌ರಿಗೆ ಸ್ವದೇಶದಲ್ಲಿ ಲಭಿಸಿದ್ದು ಅವಗಣನೆ ಮತ್ತು ಅವಜ್ಞೆ. ಪಾಕ್ ಸರಕಾರವಾಗಲಿ, ಮುಖ್ಯಧಾರೆ ಸುನ್ನಿ ಮುಸ್ಲಿಂ ಸಮೂಹವಾಗಲಿ ಆ ವಿಜ್ಞಾನಿಯ ಪುರಸ್ಕಾರ ಲಬ್ಧಿ ತಿಳಿದ ಭಾವವನ್ನಾಗಲಿ ತೋರ್ಪಡಿಸಲಿಲ್ಲ.

ದಿವಂಗತನಾದ ನಂತರ ಕೂಡ ಡಾ। ಸಲಾಮನ್ನು ಪಾಕಿಸ್ಥಾನದ ವಿಜ್ಞಾನ ವಿರೋಧಿಗಳು ಸುಮ್ಮನೆ ಬಿಡಲಿಲ್ಲ. ಆ ಭೌತ ವಿಜ್ಞಾನಿಯ ಗೋರಿಯನ್ನು ಅವರು ನಿರ್ಲಜ್ಜಿತರಾಗಿ ಹಾಳುಗೆಡವಿದರು. ಪಿಶಾಚಿ ಕೂಡ ನಾಚುವಂಥ ಈ ರೀತಿಯ ಕ್ರೂರತೆಗಳು ತೀರಾ ಸ್ವಾಭಾವಿಕವೆಂಬಂತೆ ಪಾಕಿಸ್ಥಾನದ ಸುನ್ನಿ ಪಂಥದವರೂ ರಾಜಕೀಯ ಪಕ್ಷಗಳೂ ಆಡಳಿತಾಧಿಕಾರಿಗಳೂ ಕಂಡರು. ಏಕೆ ಹಾಗೆ ಸಂಭವಿಸಿತು?

ಈ ಪ್ರಶ್ನೆಗೆ ಉತ್ತರ ಸಿಗುವುದು ಡಾ। ಅಬ್ದುಸ್ಸಲಾಮರ ಧರ್ಮದ ಹಿನ್ನೆಲೆಯಲ್ಲಿ ಮುಸ್ಲಿಮ್ ಪಂಗಡಗಳ ಪೈಕಿ ಅಹ್ಮದಿಯಾ ಸಂಘಟನೆಗೆ ಸೇರಿದ ವ್ಯಕ್ತಯಾಗಿದ್ದರು ಸಲಾಂ. ಆ ಸಂಘಟನೆಗೆ ಸೇರಿದವರು ಮುಸ್ಲಿಮರಲ್ಲವೆಂದೂ ಅವರು ಇಸ್ಲಾಮಿನ ಶತ್ರುಗಳೆಂದೂ ಮುಖ್ಯಧಾರೆ ಮುಸ್ಲಿಂ ಸಂಘಟನೆಗಳನ್ನು ನಿಯಂತ್ರಿಸುವ ಮತಪುರೋಹಿತರು ಪ್ರಚಾರ ಮಾಡುತ್ತಾರೆ. ಸತ್ಯದ ಏಕಸ್ವಾಮ್ಯ ತಮಗಿದೆ ಎಂಬ ಬಹುದೊಡ್ಡ ಮೌಢ್ಯಕ್ಕೆ ಅಡಿಯಾಳಾದ ಅವರು 1953ರಲ್ಲಿ ಪಾಕಿಸ್ಥಾನದಲ್ಲಿ (ಲಾಹೋರ್‌ನಲ್ಲಿ) ಅಹ್ಮದೀ ಮುಸ್ಲಿಮರ ವಿರುದ್ಧ ಚಳವಳ ಹುಟ್ಟು ಹಾಕಿದರು. ಜಮಾಅತೆ ಇಸ್ಲಾಮೀ ಸೇರಿದ ಮುಸ್ಲಿಂ ಮತ ಸಂಘಟನೆಗಳ ನಾಯಕತ್ವದಲ್ಲಾಗಿತ್ತು ಆ ನರಬೇಟೆ. ಅಹ್ಮದೀ ಮುಸ್ಲಿಮರನ್ನು ಅಮುಸ್ಲಿಮರೆಂದು ಘೋಷಿಸಿ ಆಡಳಿತೆಯ ಎಲ್ಲ ವಿಭಾಗಗಳಿಂದ ಅವರನ್ನು ಹೊರಹಾಕಬೇಕೆಂಬ ಬೇಡಿಕೆ ಮೌಲಾನಾ ಮೌದೂದಿ ಸಹಿತ ಮತಪುರೋಹಿತರ ನಾಯಕತ್ವದಲ್ಲಿ ಚಳವಳಿ ಆರಂಭಿಸಲ್ಪಟ್ಟಿತ್ತು.

ಅಹ್ಮದಿಯಾ ವಿರುದ್ಧ ಚಳವಳ ಆರಂಭಿಸಿದವರು ಗೆದ್ದರು. ಅಷ್ಟೊಂದು ತಡವಾಗದೆ ಅವರ ಬೇಡಿಕೆಗಳ ಮುಂದೆ ಆಡಳಿತಾಧಿಕಾರಿಗಳು ಮಣಿಯುವುದಕ್ಕೆ 1974ರಲ್ಲಿ ಲೋಕವು ಸಾಕ್ಷಿಯಾಯಿತು. 40ಲಕ್ಷಕ್ಕೆ ಮಿಕ್ಕಿದ ಜನ ಸಂಖ್ಯೆ ಇರುವ ಅಹ್ಮದೀ ಮುಸ್ಲಿಮರು ಪಾಕಿಸ್ಥಾನದಲ್ಲಿ ಮುಸ್ಲಿಮೇತರರಾಗಿ ಘೋಷಿಸಲ್ಪಟ್ಟರು. ಅವರ ಧರ್ಮ ಸ್ವಾತಂತ್ರ್ಯ, ಮತದಾನ ಹಕ್ಕು ಕಸಿಯುವ ಕ್ರಮಗಳು ಜಾರಿಗೊಂಡವು. ಸ್ವಯಂ ಮುಸ್ಲಿಂ ಎಂದು ಹೇಳಲಿಕ್ಕಾಗಲಿ, ಖುರ್‌ಆನ್ ಪಾರಾಯಣ ಮಾಡಲಿಕ್ಕಾಗಲಿ, ತಮ್ಮ ಪ್ರಾರ್ಥನಾಲಯಗಳನ್ನು ಮಸ್‌ಜಿದ್ ಎಂದು ಕರೆಯಲಿಕ್ಕಾಗಲಿ, ಅಝಾನ್ ಕರೆ ನೀಡಲಿಕ್ಕಾಗಲಿ, ಹಜ್ಜ್ ತೀರ್ಥಾಟನೆಗೆ ಹೋಗಲಿಕ್ಕಾಗಲಿ ಅವರಿಗೆ ಸ್ವಾತಂತ್ರ್ಯ ಇಲ್ಲದಾಯಿತು. ಎಷ್ಟು ಮಿಗಿಲಾದ ಯೋಗ್ಯತೆ ಇದ್ದರೂ ಉದ್ಯೋಗಸ್ಥ ಕ್ಷೇತ್ರದಲ್ಲಿ ಪ್ರಮುಖ ಸ್ಥಾನಗಳೆಲ್ಲ ಅವರಿಗೆ ನಿಷೇಧಿಸಲ್ಪಡುವ ಅವಸ್ಥೆ ಬಂತು. ಅರ್ಧ ಶತಮಾನಕ್ಕೆ ಮಿಕ್ಕಿದ ಕಾಲದಿಂದ ಅಕ್ಷರಾರ್ಥದಲ್ಲಿ ಪಾಕಿಸ್ಥಾನದ ಅತ್ಯಂತ ಪೀಡಿತರಾದ ಜನ ಸಮೂಹ ಅಹ್ಮದೀ ಮುಸ್ಲಿಮರಾಗಿದ್ದಾರೆ.

ಡಾ। ಅಬ್ದುಸ್ಸಲಾಮರಿಗೆ ಮುಂಚೆ ಜಿನ್ನಾರ ನಾಡಿನಲ್ಲಿ ಅತಿ ಕ್ರೂರವಾಗಿ ಅವಹೇಳಿಸಲ್ಪಟ್ಟ ಪ್ರಮುಖನಾದ ಮತ್ತೋರ್ವ ಅಹ್ಮದೀ ಮುಸ್ಲಿಂ ಇದ್ದಾರೆ. ಪಾಕಿಸ್ಥಾನದ ಪ್ರಥಮ ವಿದೇಶಕಾರ್ಯ ಮಂತ್ರಿಯಾಗಿದ್ದ ಸರ್ ಮುಹಮ್ಮದ್ ಝಫರುಲ್ಲಾ ಖಾನ್ (1893–1985). ಯು.ಎನ್. ಜನರಲ್ ಅಸೆಂಬ್ಲಿಯ ಅಧ್ಯಕ್ಷ ಪದವಿ ಅಲಂಕರಿಸಿದ ಪ್ರಥಮ ಮುಸ್ಲಿಂ, ಪ್ರಥಮ ಏಶ್ಯನ್ ಮತ್ತು ಏಕಮಾತ್ರ ಪಾಕಿಸ್ಥಾನಿ ಝಫರುಲ್ಲಾ ಖಾನ್. ಹಾಗಿದ್ದರೂ ಅವರ ರಕ್ತಕ್ಕಾಗಿಯೂ ಪಾಕ್ ಮುಲ್ಲಾಗಳು 1953ರಲ್ಲಿ ರಂಗಪ್ರವೇಶ ಮಾಡಿದರು. ಅಹ್ಮದೀ ಮುಸ್ಲಿಮರಾದ ಝಫರುಲ್ಲಾರನ್ನು ವಿದೇಶಕಾರ್ಯ ಮಂತ್ರಿ ಪದವಿಯಿಂದ ನೀಗಿಸಬೇಕೆಂದು ಅವರು ಬೇಡಿಕೆ ಇಟ್ಟರು. ಪುರೋಹಿತ ವರ್ಗದ ಒತ್ತಡ ಹೆಚ್ಚಾದಾಗ 1954 ಅಕ್ಟೋಬರ್‌ನಲ್ಲಿ ಝಫರುಲ್ಲಾ ಖಾನ್ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಇತ್ತರು.

**ಧರ್ಮ ಸ್ವಾತಂತ್ರ್ಯ ನಿಷೇಧ ಮುಂದುವರಿಯಬೇಕೇ?**

ಡಿಸೆಂಬರ್ 6ರಂದು ಇಸ್ಲಾಮಾಬಾದ್‌ನಿಂದ ಪ್ರಕಟಗೊಂಡ ಒಂದು ವಾರ್ತೆಯ ಹಿನ್ನೆಲೆಯಲ್ಲಿ ಇಷ್ಟು ವಿಷಯವನ್ನು ಇಲ್ಲಿ ಪ್ರಸ್ತಾಪಿಸಲಾಯಿತು. ಪಾಕಿಸ್ಥಾನದ ಯಶಸ್ಸನ್ನು ಗಗನಕ್ಕೇರಿಸಿದ ನೋಬೆಲ್ ಪದವಿ ವಿಜೇತ ಡಾ। ಅಬ್ದುಸ್ಸಲಾಮರೊಡನೆ ಆ ದೇಶ ತೋರಿಸಿದ ಅಕ್ಷಮ್ಯ ಕೃತಘ್ನತೆ ಮತ್ತು ಅಪರಾಧ ತುಂಬಾ ತಡವಾಗಿ ಈಗ ತಿದ್ದಲು ಪಾಕ್ ಸರಕಾರ ಮುಂದೆ ಬರುತ್ತಿದೆ ಎಂಬುದು ವಾರ್ತೆಯ ತಿರುಳು. ಸಲಾಮರನ್ನು ಗೌರವಿಸುವ ಅಂಗವಾಗಿ ಇಸ್ಲಾಮಾಬಾದಿನ ಖಾಯಿದೆ ಆಝಂ ಯುನಿವರ್ಸಿಟಿಯ ಸಯನ್ಸ್ ಸೆಂಟರಿಗೆ 'ಪ್ರೊಫೆಸರ್ ಅಬ್ದುಸ್ಸಲಾಂ ಸೆಂಟರ್ ಫೋರ್ ಫಿಸಿಕ್ಸ್' ಎಂದು ಹೆಸರಿಡಲಾಗುವುದೆಂದು ಪ್ರಧಾನ ಮಂತ್ರಿ ನವಾಝ್ ಶರೀಫ್ ಘೋಷಿಸಿದ್ದಾರೆ. ಪ್ರಮುಖ ವಿದೇಶ ಯುನಿವರ್ಸಿಟಿಗಳಲ್ಲಿ ಅಧ್ಯಯನ ಮಾಡಲಿಕ್ಕೆ ಐದು ವಿದ್ಯಾರ್ಥಿಗಳಿಗೆ ಪ್ರತಿವರ್ಷ 'ಅಬ್ದುಸ್ಸಲಾಂ ಫೆಲೋಶಿಪ್' ನೀಡಲಾಗುವುದೆಂಬುದು ಇನ್ನೊಂದು ತೀರ್ಮಾನ.

ತಡವಾಗಿ ಉದಿಸಿದ ಈ ವಿವೇಕದೊಡನೆ ಸುನ್ನಿ ಮುಸ್ಲಿಂ ಪುರೋಹಿತ ಕೂಟ ಮತ್ತು ಲಷ್ಕರೆ ತಯ್ಯಿಬ ಸೇರಿದ ತೀವ್ರವಾದ ಸಂಘಟನೆಗಳು ಹೇಗೆ ಪ್ರತಿಕ್ರಿಯಿಸುವುವು ಎಂಬುದನ್ನು ಕಾಣಲಿಕ್ಕಿದೆ. ಅಹ್ಮದೀ ಮುಸ್ಲಿಮರನ್ನು ಮಾತ್ರವಲ್ಲ ಶಿಯಾ ಮುಸ್ಲಿಮರನ್ನು ಸಹ ಮುಸ್ಲಿಮೇತರರೆಂದು ಗಣಿಸಬೇಕೆಂದು ಆಗ್ರಹಪಡಿಸುವವರಾಗಿದ್ದಾರೆ ಅವರು. ಶಿಯಾ ಮುಸ್ಲಿಮರನ್ನೂ ಅವರ ಪ್ರಾರ್ಥನಾಲಯಗಳನ್ನೂ ಆಕ್ರಮಿಸುವುದು ಮತ್ತು ಧ್ವಂಸಗೊಳಿಸುವುದು ತಮ್ಮ ಧಾರ್ಮಿಕ ಬಾಧ್ಯತೆ ಎಂಬ ದುರ್ವಿಶ್ವಾಸವನ್ನು ಅವರು ಹೊಂದಿದ್ದಾರೆ.

ಡಾ। ಮುಹಮ್ಮದ್ ಅಬ್ದುಸ್ಸಲಾಂ (ನಿಧನ: 1996) ಫಿಸಿಕ್ಸ್ ನೋಬೆಲ್ ಪ್ರಶಸ್ತಿ ಗಳಿಸಿ 37 ವರ್ಷಗಳು ಮತ್ತು ಅವರು ನಿಧನ ಹೊಂದಿ 20 ವರ್ಷಗಳು ಕಳೆದ ನಂತರ ಅವರನ್ನು ಗೌರವಿಸಲು ಮುಂದೆ ಬಂದ ನವಾಝ್ ಶರೀಫ್, ಅವರ ಪಕ್ಷದವರು ಮತ್ತು ಸಮಾನ ಚಿಂತಾಗತಿಯುವರು ಎರಡು ಸಂಗತಿಗಳನ್ನು ಪುನರಾಲೋಚನೆಗೆ ಗುರಿಪಡಿಸಬೇಕಾಗಿದೆ. ಮೊದಲು ಮುಹಮ್ಮದ್ ಝಫ್‌ರುಲ್ಲಾ ಖಾನ್ ಮತ್ತು ನಂತರ ಮುಹಮ್ಮದ್ ಅಬ್ದುಸ್ಸಲಾಮರೊಡನೆ ತೋರಿಸಿದಂತಹ ಮನುಷ್ಯರಾಹಿತ್ಯವನ್ನು ಭಾವಿಯಲ್ಲಿ ಇತರರೊಡನೆ ತೋರಿಸಲು ತೊಡಗುವವರನ್ನು, ಅದಕ್ಕೆ ಒತ್ತಡ ಹೇರುವವರನ್ನು ಸರಕಾರ ಹೇಗೆ ನಿಭಾಯಿಸುವುದು ಎಂಬುದು ಪ್ರಥಮ ವಿಚಾರ. ಎರಡನೆಯದಾಗಿ, 1974ರಲ್ಲಿ ಅಹ್ಮದೀ ಮುಸ್ಲಿಮರ ಮೇಲೆ ಹೇರಿದ ಧರ್ಮ ಸ್ವಾತಂತ್ರ್ಯ ನಿಷೇಧ ಮುಂದುವರಿಯುವುದೇ ಎಂಬುದು.

ಈ ಹೇಳಿದ ಎರಡು ವಿಷಯಗಳ ಬಗ್ಗೆ ಪುನರಾಲೋಚನೆಯನ್ನು ನಖಶಿಖಾಂತ ವಿರೋಧಿಸಲು ದೇಶದ ಸುನ್ನಿ ಮುಸ್ಲಿಂ ಪೌರೋಹಿತ್ಯ ಮತ್ತು ಸುನ್ನಿ ತೀವ್ರವಾಗಿ ಗುಂಪುಗಳು ಹಾರಿ ಬೀಳುವರೆಂಬುದರಲ್ಲಿ ಸಂಶಯವಿಲ್ಲ. ಪುರೋಹಿತರು ಮತ್ತು ತೀವ್ರವಾದಿಗಳ ಮುಂದೆ ಸೋತುಹೋದ ಚರಿತ್ರೆಯೇ ಪಾಕ್ ಸರಕಾರಕ್ಕಿದೆ. ಆ ಪಾರಂಪರ್ಯವನ್ನು ಮೀರುವ ಎದೆಗಾರಿಕೆ ತೋರಿಸುವವರಿಗೆ ಮಾತ್ರ ದೇಶದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ಬೆಳೆಸಲು ಮೆಲ್ಲಮೆಲ್ಲನೆಯಾದರೂ ಪೌರ ಸಮತ್ವವೆಂಬ ಆಶಯವನ್ನು ಪ್ರಾಯೋಗಿಕಗೊಳಿಸಲು ಸಾಧ್ಯವಾಗುವುದು.

ಹೀಗೆ ಹೇಳುವಾಗ, 1974ರಲ್ಲಿ ಅಹ್ಮದೀ ಮುಸ್ಲಿಮರನ್ನು ಮುಸ್ಲಿಮೇತರ ಅಲ್ಪ ಸಂಖ್ಯಾತರೆಂದು ವರ್ಗೀಕರಿಸುವ ಮಸೂದೆ ಬಹುಸಂಖ್ಯಾತ ಹಿತಾನುಸಾರ ಪಾರ್ಲಿಮೆಂಟ್ ಅಂಗೀಕರಿಸಿದ್ದೆಂದು ಬೊಟ್ಟು ಮಾಡಲು ಉತ್ಸಾಹ ತೋರಿಸುವವರನ್ನು ಆಚೆ ಬದಿಯಲ್ಲಿ ಕಾಣಲು ಸಾಧ್ಯವಿದೆ. ಪಾರ್ಲಿಮೆಂಟಿನ ಬಹುಸಂಖ್ಯಾತರ ಬೆಂಬಲದಿಂದಾಗಿದ್ದರೂ ಯಾವುದಾದರೂ ಜನಸಮೂಹದ ನ್ಯಾಯವಾದ ಹಕ್ಕುಗಳನ್ನು ಮೆಟ್ಟಿ ದಮನಿಸುವುದು ಪ್ರಜಾಪ್ರಭುತ್ವ ಮೌಲ್ಯಗಳಿಗೆ ಸರಿ ಹೊಂದುವುದಿಲ್ಲ. ಹಿಟ್ಲರ್ ಸಹ ಪಾರ್ಲಿಮೆಂಟ್ ಮೂಲಕವೇ ಜರ್ಮನಿಯಲ್ಲಿ ಯಹೂದ್ಯರ ಸರ್ವ ಸ್ವಾತಂತ್ರ್ಯಗಳನ್ನೂ ಸರ್ವ ಹಕ್ಕುಗಳನ್ನೂ ಕಸಿದದ್ದು. ನ್ಯಾಯನ್ಯಾಯಗಳನ್ನು ಪರಿಗಣಿಸದೆ ನಿಯಮ ಸಭೆಗಳ ಬಹುಪಕ್ಷ ಬೆಂಬಲದಲ್ಲಿ ಜನವಿಭಾಗಗಳನ್ನು ದಮನಿಸುವುದರ ಹೆಸರು ಪ್ರಜಾಪ್ರಭುತ್ವವೆಂದಲ್ಲ, ಫ್ಯಾಸಿಸಂ ಎಂದಾಗಿದೆ.

ಡಾ। ಅಬ್ದುಸ್ಸಲಾಮರನ್ನು ಗೌರವಿಸುವ ವಿಷಯದಲ್ಲಿ ಪಾಕ್ ಪ್ರಧಾನಿ ತಡವಾಗಿ ಕೈಗೊಂಡ ತೀರ್ಮಾನ ನಮ್ಮ ದೇಶದ ಮುಖ್ಯಧಾರೆ ಮುಸ್ಲಿಂ ಮತ ಪುರೋಹಿತರ ಮತ್ತು ಸಂಘಟನೆಗಳ ಗಮನಕ್ಕೆ ಬರಬೇಕಾಗಿದೆ. ಇಲ್ಲಿರುವ ಅಹ್ಮದೀ ಮುಸ್ಲಿಮರನ್ನು ಮುಸ್ಲಿಮೇತರನ್ನಾಗಿ ಚಿತ್ರೀಕರಿಸಿ ಅವರನ್ನು ಬಹಿಷ್ಕರಿಸುವುದು ಈ ನಾಡಿನ ಮುಲ್ಲಾ ಮೌಲವಿಗಳ ರೀತಿಯಾಗಿದೆ. 'ಮುಸ್ಲಿಂ ನವೋತ್ಥಾನ' ಎಂಬ ಮಂತ್ರ ಉಚ್ಚರಿಸುವುದರಲ್ಲಿ ಏನೂ ಕೊರತೆ ಮಾಡದ ಮುಜಾಹಿದ್, ಮೌದೂದಿಸ್ಟ್ ಸಂಘಟನೆಗಳು ಕೂಡ ಅಹ್ಮದೀ ಮುಸ್ಲಿಮರನ್ನು 'ಸುಳ್ಳು ಪ್ರವಾದಿ'ಯನ್ನು ಅನುಸರಿಸುವ 'ಕಪಟಿ'ಗಳೆಂದು ಮುದ್ರೆ ಹಾಕಿ ಬಾಗಿಲ ಹೊರಗೆ ನಿಲ್ಲಿಸುತ್ತವೆ. ಪಾಕ್ ಸರಕಾರ ಅಹ್ಮದಿಯರಿಗೆ ಧರ್ಮ ಸ್ವಾತಂತ್ರ್ಯವನ್ನು ನಿಷೇಧಿಸಿ ಅವರನ್ನು ನಿರಂತರ ಪೀಡಿಸುತ್ತಿದ್ದಾಗ ಅದಕ್ಕೆ ಸ್ತುತಿಗಾನ ಹಾಡಿದವರು ನಮ್ಮ ಮುಜಾಹಿದ್, ಮೌದೂದಿಸ್ಟ್ ಪಕ್ಷದವರೆಂದು ಚರಿತ್ರೆ ಹೇಳುತ್ತದೆ. ಆ ಕಪ್ಪು ಚರಿತ್ರೆಯನ್ನು ತಿದ್ದದೆ ನವೋತ್ಥಾನ ಎಂಬ ಮಹತ್ತರ ಪದವನ್ನು ಉಚ್ಚರಿಸಲು ಕೂಡ ಯೋಗ್ಯತೆ ತಮಗಿಲ್ಲವೆಂದು ಅವರು ಮನಗಾಣಬೇಕು.

*****

ಕವನ

# ನಮ್ಮ ಖಲೀಫ

**ಕೆ.ಎಂ. ಉಮರ್. ಮಡಿಕೇರಿ.**

ಹಝ್ರತ್ ಮಸ್‌ರೂರ್ ನಮ್ಮ ಖಲೀಫ
ಅಹ್ಮದ್ ನಬಿಯರ ನಮ್ಮ ಖಲೀಫ

ಪಂಚಮ ಸ್ಥಾನದಿ ಮಿನುಗುವ ತಾರೆ
ಅಮೀರುಲ್ ಮುಅ್‌ಮಿನೀನ್ ನಮ್ಮ ಖಲೀಫ

ಸೂರತುನ್ನೂರಿನ ಪೂರ್ತೀಕರಣ
ಸತ್ಯವಿಶ್ವಾಸಿಗಳವರ ಖಲೀಫ

ನುಬುವ್ವತ್ ರೀತಿಯಲಿ ಅಲ್ಲಾಹು ಕಳಿಸಿದ
ಮುಹಮ್ಮದ್ ನಬಿಯರ ನಮ್ಮ ಖಲೀಫ

ಖುದ್‌ರತೆ ಸಾನಿಯ ಸ್ವರ್ಗದ ತೋಪಲಿ
ಒಟ್ಟಿಗೆ ಸೇರುವ ಖಿಲಾಫತಿನಡಿಯಲಿ

ಸತ್ಯ ನಿಷೇಧಿಯ ನಾಶದ ಕಾಲ
ಸತ್ಯ ಮಹ್‌ದಿಯ ಧೀರ ಖಲೀಫ

ಅಹ್‌ಲನ್ ವ ಸಹ್‌ಲನ್ ಮಸೀಹ್ ಖಲೀಫ
ಮರ್‌ಹಬ ಲಬ್ಬೈಕ್ ನಮ್ಮ ಖಲೀಫ

ಮಹ್‌ದಿ ಮಸೀಹರ ಪೌತ್ರರ ಪುತ್ರ
ಮಾನವ ವಂಶಕೆ ಅಭಯ ಖಲೀಫ

ಸುಲ್ತಾನುಲ್ ಕಲಂ ಎಂಬ ಬಿರುದನು ಗಳಿಸಿದ
ಅಹ್ಮದ್ ನಬಿಯರ ನಮ್ಮ ಖಲೀಫ

ಜಲನಿಧಿಯಾಗಿರೊ ಖುರ್‌ಆನಿನ ಮುತ್ತು
ಜನರಿಗೆ ಬಿತ್ತಿದ ಧೀರ ಖಲೀಫ

ಖಿಲಾಫತಿನೊಳಗಿರೊ ನಮಗೆಲ್ಲರಿಗೂ
ಕಾರುಣ್ಯ ದೇವನ ನಮ್ಮ ಖಲೀಫ

ಹಝ್ರತ್ ಮಸ್‌ರೂರ್ ನಮ್ಮ ಖಲೀಫ
ಅಹ್ಮದ್ ನಬಿಯರ ನಮ್ಮ ಖಲೀಫ

ಪ್ರತಿಭೆ



ಮೊಗ್ರಾಲ್ ಜಮಾಅತಿನ ಮುಹಮ್ಮದ್ ರಫೀ ಹಾಗೂ ಮಡಿಕೇರಿ ಜಮಾಅತಿನ ಜನ್ನತುನ್ನಿಸಾ ದಂಪತಿಯವರ 6 ವರ್ಷ ಪ್ರಾಯದ ಮಗಳು ರಿಯಾ ಸುಲ್ತಾನ 70 ಸಾಲುಗಳ ಅರಬಿಕ್ ಕಸೀದ (ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಶ್ಲಾಘಿಸಿ ಹಝ್ರತ್ ಅಹ್ಮದ್(ಅ) ರಚಿಸಿದ ಸ್ತುತಿಗೀತೆ) ಕಂಠಪಾಠ ಮಾಡಿ ಪ್ರತಿಭೆ ತೋರಿದ್ದಾಳೆ. ಮಾಶಾ ಅಲ್ಲಾಹ್.

"ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ."
–ಹಝ್ರತ್ ಮುಹಮ್ಮದ್ ಪೈಗಂಬರ್(ಸ)

**ಇನ್‌ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

ಓದಿದ್ದು

# ಕ್ರಿಸ್‌ಮಸ್ ಯಾವ ದಿನ?

ಡಿಸೆಂಬರ್ 24ರ ರಾತ್ರಿ, ಡಿಸೆಂಬರ್ 25ರ ಹಗಲಲ್ಲಿ ಕ್ರಿಶ್ಚಿಯನ್ನರು ಆಚರಿಸುವ ಸಂಭ್ರಮದ ಹಬ್ಬ ಕ್ರಿಸ್‌ಮಸ್. ಆದರೆ ಎಲ್ಲ ದೇಶಗಳಲ್ಲೂ ಕ್ರಿಸ್‌ಮಸ್ ಇದೇ ದಿನ ಆಚರಿಸುವುದಿಲ್ಲ ಎಂದರೆ ಅಚ್ಚರಿಯಾಗುತ್ತದೆಯೆ? ಯಹೋವಾನ ಸಾಕ್ಷಿಗಳು, ಅಮೆರಿಕಾದ ಕೆಲವು ಕ್ರಿಶ್ಚಿಯನ್ ಸಂಘಟನೆಗಳ ಅನುಯಾಯಿಗಳು ಕ್ರಿಸ್‌ಮಸ್ ಹಬ್ಬವನ್ನು ಆಚರಿಸುವುದೇ ಇಲ್ಲ. ಯಾಕೆಂದರೆ ಅವರ ಪ್ರಕಾರ ಬೈಬಲ್‌ನಲ್ಲಿ ಕ್ರಿಸ್‌ಮಸ್ ಆಚರಣೆಯ ಬಗ್ಗೆ ಎಲ್ಲೂ ಹೇಳಿಲ್ಲ!

1647ರಲ್ಲಿ ಇಂಗ್ಲೆಂಡಿನ ಪಾರ್ಲಿಮೆಂಟ್, ಕ್ರಿಸ್‌ಮಸ್ ಹಬ್ಬಕ್ಕೆ ನಿಷೇಧ ಹೇರಿತ್ತು. ಪ್ಯೂರಿಟಾನ್ ನಾಯಕ ಆಲಿವರ್ ಕ್ರಾಮ್‌ವೆಲ್ ಪ್ರಕಾರ ಕ್ರಿಸ್‌ಮಸ್ ಪವಿತ್ರ ಹಬ್ಬ. ಆ ದಿನ ಔತಣ ಮತ್ತು ಮೋಜು ನಿಷಿದ್ಧವಾಗಿತ್ತು. 1660ರಲ್ಲಿ ಪ್ಯೂರಿಟಾನ್ ಸರಕಾರ ಉರುಳಿದ ಬಳಿಕವೇ ಕ್ರಿಸ್‌ಮಸ್ ಮತ್ತೆ ಆರಂಭವಾಯಿತು.

ಅಮೆರಿಕಾಗೆ ಆರಂಭದಲ್ಲಿ ವಲಸೆ ಹೋಗಿದ್ದ ಪ್ಯೂರಿಟಾನ್‌ಗಳು ಕ್ರಿಸ್‌ಮಸ್ ಆಚರಣೆ ನಡೆಸುತ್ತಿರಲಿಲ್ಲ. ಯೇಸು ಜನನದ ಖಚಿತ ದಿನಾಂಕ ತಿಳಿದಿರದ ಕಾರಣ ಕ್ರಿಸ್‌ಮಸ್ ಆಚರಿಸುವುದು ತಪ್ಪು ಎಂದು ಅವರ ಅಭಿಪ್ರಾಯವಾಗಿತ್ತು. ಕ್ರಿಸ್‌ಮಸ್ ಆಚರಣೆ ಮಾಡುವುದು ಕಾನೂನುಬಾಹಿರ ಎಂದು 1659ರಲ್ಲಿ ಮೆಸೆಚ್ಯುಸೆಟ್ಸ್‌ನಲ್ಲಿ ಕಾಯಿದೆ ಹೊರಡಿಸಲಾಗಿತ್ತು. ಈ ಕಾಯಿದೆ ಮುರಿದವರಿಗೆ ಐದು ಶಿಲಿಂಗ್‌ಗಳ ಜುಲ್ಮಾನೆ ಹೊರಿಸಲಾಗುತ್ತಿತ್ತು.

ಯೇಸು ಕ್ರಿಸ್ತ ಹುಟ್ಟಿದ ದಿನ ಯಾವುದು ಎಂದು ನಿಖರವಾಗಿ ಯಾರಿಗೂ ತಿಳಿದಿಲ್ಲ. ಕ್ರಿಸ್ತಶಕ ಎರಡನೆಯ ಶತಮಾನದ ವರೆಗೆ ಕ್ರಿಸ್‌ಮಸ್ ಹಬ್ಬ ಆಚರಿಸುವ ಬಗ್ಗೆ ಎಲ್ಲೂ ದಾಖಲೆಗಳಿಲ್ಲ. ಕ್ರಿಸ್‌ಮಸ್ ಹಬ್ಬ ಮೂಲತಃ ಕ್ರಿಶ್ಚಿಯನ್ನರ ಹಬ್ಬ ಅಲ್ಲವೇ ಅಲ್ಲ ಎಂದೂ ವಾದಗಳಿವೆ. ಪ್ರಾಚೀನ ಧರ್ಮಶಾಸ್ತ್ರಜ್ಞರು ಕ್ರಿಸ್ತ ಜನನದ ದಿನವಾಗಿ ವಿಭಿನ್ನ ತಾರೀಕುಗಳನ್ನು ಸೂಚಿಸುತ್ತಿದ್ದರು. ಅಲೆಕ್ಸಾಂಡ್ರಿಯಾದ ಒಬ್ಬ ಬಿಷಪ್ ಪ್ರಕಾರ ಇದು ನವೆಂಬರ್ 18 ಆಗಿತ್ತು. ಉತ್ತರ ಆಫ್ರಿಕಾದಲ್ಲಿ ಸಿಕ್ಕಿದ್ದಡಿ ಪಾಶ್ಚಾ ಎಂಬ ಒಂದು ದಾಖಲೆಯ ಪ್ರಕಾರ ಇದು ಮಾರ್ಚ್ 28 ಆಗಿತ್ತು.

ಪ್ರಾಚೀನ ಕಾಲದಿಂದ ರೋಮ್‌ನ ಜನರು ಚಳಿಗಾಲದ ಒಂದು ದಿನವನ್ನು ಸೂರ್ಯನ ಜನ್ಮದಿನವಾಗಿ ಸಂಭ್ರಮದಿಂದ ಆಚರಿಸುತ್ತಿದ್ದರು. ಸಾಮಾನ್ಯವಾಗಿ ಡಿಸೆಂಬರ್ 25ರಂದು ಮಿತ್ರಾದ ಜನ್ಮದಿನ ಮತ್ತು ಸ್ಯಾಟರ್ನಾಲಿಯಾ ಎಂಬ ದೇವತೆಯ ಉತ್ಸವ ನಡೆಸುತ್ತಿದ್ದರು. ಅವರು ಕ್ರಿಶ್ಚಿಯನ್ ಧರ್ಮ ಸ್ವೀಕರಿಸಿದ ಬಳಿಕವೂ ಈ ಆಚರಣೆಗಳು ಮುಂದುವರಿದಿದ್ದವು. ಈ ಉತ್ಸವದ ಪಾಗನ್ (ಧರ್ಮಬಾಹಿರ) ರೂಪವನ್ನು ಬದಲಿಸಲು ಮತ್ತು ಹಳೆಯ ಕಾಲದ ಮೂಢ ಸಂಪ್ರದಾಯವನ್ನು ತೊಡೆದು ಹಾಕಲು ಚರ್ಚ್ ಅಧಿಕಾರಿಗಳು ನಾಲ್ಕನೆಯ ಶತಮಾನದ ವೇಳೆಗೆ ಈ ಹಬ್ಬಕ್ಕೆ ಕ್ರಿಸ್‌ಮಸ್ ಎಂದು ಹೆಸರು ಕೊಟ್ಟು ಕ್ರಿಶ್ಚಿಯನ್ನರ ಹಬ್ಬವಾಗಿ ಮಾಡಿದರು.

ಆರಂಭದಲ್ಲಿ ಕ್ರಿಸ್‌ಮಸ್ ಹಬ್ಬಕ್ಕೆ ನಿಗದಿತ ದಿನ ಇರಲಿಲ್ಲ. ಯಾವ ಸಮಯದಲ್ಲೂ ಅದನ್ನು ಆಚರಿಸಬಹುದಿತ್ತು. ಪೋಪ್ ಜೂಲಿಯಸ್ (ಮೊದಲನೆಯ) ಕ್ರಿ.ಶ. 320ರಲ್ಲಿ ಆದೇಶದ ಮೇರೆಗೆ ಡಿಸೆಂಬರ್ 25ನ್ನು ಕ್ರಿಸ್‌ಮಸ್ ಹಬ್ಬವಾಗಿ ನಿಗದಿ ಮಾಡಲಾಯಿತು.

ಇಂದಿಗೂ ವಿವಿಧ ಕ್ರೈಸ್ತ ಪಂಥಗಳು ವಿಭಿನ್ನ ದಿನಗಳಲ್ಲಿ ಕ್ರಿಸ್‌ಮಸ್ ಹಬ್ಬ ಆಚರಿಸುತ್ತಾರೆ. ಕೆಲವು ದೇಶಗಳಲ್ಲಿ ಡಿಸೆಂಬರ್ 13ರಂದು ಕ್ರಿಸ್‌ಮಸ್ ಹಬ್ಬ ಆರಂಭವಾದರೆ ಮತ್ತೆ ಕೆಲವು ದೇಶಗಳಲ್ಲಿ ಗ್ರೆಗೊರಿಯನ್ ಕ್ಯಾಲೆಂಡರಿನ ಪ್ರಕಾರ ಜನವರಿ 19ರಂದು ಕ್ರಿಸ್‌ಮಸ್ ಆಚರಿಸುತ್ತಾರೆ!

ದಕ್ಷಿಣ ಗೋಲಾರ್ಧದಲ್ಲಿರುವ ನ್ಯೂಜಿಲಾಂಡ್‌ನಲ್ಲಿ ಕ್ರಿಸ್‌ಮಸ್ ವೇಳೆ ಭಾರೀ ಸೆಕೆ. ಹೀಗಾಗಿ ಅವರು ಜುಲೈ ತಿಂಗಳ ಹಿಮಪಾತದ ವೇಳೆ ಸಂಭ್ರಮದ ಕ್ರಿಸ್‌ಮಸ್ ಆಚರಿಸಿ, ಡಿಸೆಂಬರ್ 25ರಂದು ವರ್ಷದ ಎರಡನೆಯ ಕ್ರಿಸ್‌ಮಸ್ ಆಚರಿಸುತ್ತಾರೆ.

ವರ್ಷಕ್ಕೆ ಮೂರು ಕ್ರಿಸ್‌ಮಸ್ ಆಚರಿಸುವ ಜನರೂ ಇದ್ದಾರೆ! ಇವರು ಆರ್ಮೇನಿಯನ್ನರು.

ಟರ್ಕಿಯ ಪೂರ್ವದಲ್ಲಿ ಏಷ್ಯಾ ಭೂಖಂಡದಲ್ಲಿ ಇರುವ ದೇಶ ಆರ್ಮೇನಿಯಾ. ಇಲ್ಲಿನ ಜನರು ವರ್ಷಕ್ಕೆ ಮೂರು ಬಾರಿ ಕ್ರಿಸ್‌ಮಸ್ ಆಚರಿಸುತ್ತಾರೆ.

ಸಂಪ್ರದಾಯದ ಪ್ರಕಾರ ಇಲ್ಲಿನವರು ಯೇಸುವಿನ ಹಬ್ಬ ಆಚರಿಸುತ್ತಿದ್ದದ್ದು ಜನವರಿ ಆರರಂದು. ಇವರ ಪ್ರಕಾರ ಇದು ಯೇಸು ಕ್ರಿಸ್ತನ ಬ್ಯಾಪ್ಟಿಸಂ ಆದ ದಿನ, ಹುಟ್ಟು ದಿನವಲ್ಲ. ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ ರೋಮಿನ ಚರ್ಚ್ ಅಧಿಕಾರಿಗಳು ಡಿಸೆಂಬರ್ 25ನ್ನು ಅಧಿಕೃತ ಕ್ರಿಸ್‌ಮಸ್ ದಿನವೆಂದು ಘೋಷಿಸಿದರು. ಆದರೆ ಪೌರಸ್ತ್ಯ ಸಾಂಪ್ರದಾಯಿಕ ಪಂಥವನ್ನು ಪಾಲಿಸುತ್ತಿದ್ದ ಆರ್ಮೇನಿಯಾ, ರೋಮನ್ ಕೆಥೋಲಿಕ್ ಚರ್ಚಿನ ಅಧೀನವಾಗಿರಲಿಲ್ಲ. ಇಲ್ಲಿ ಜನವರಿ 6ರಂದು ಕ್ರಿಸ್‌ಮಸ್ ಆಚರಣೆಯ ಸಂಪ್ರದಾಯ ಮುಂದುವರಿಯಿತು.

ಜಗತ್ತಿನ ಎಲ್ಲೆಡೆ ಇಂದು ಗ್ರೆಗೊರಿಯನ್ ಕ್ಯಾಲೆಂಡರ್ ಬಳಸಲಾಗುತ್ತಿದೆ. ಆದರೆ ಪೌರಸ್ತ್ಯ ಸಾಂಪ್ರದಾಯಿಕ ಚರ್ಚುಗಳಲ್ಲಿ ಇಂದಿಗೂ ಹಬ್ಬ ಹುಣ್ಣಿಮೆಗಳನ್ನು ಗುರುತಿಸಲು ಬಳಸುವ ಕಾಲಮಾಪಕ ಪುರಾತನ ಜೂಲಿಯನ್ ಕ್ಯಾಲೆಂಡರ್. ಇದಕ್ಕೂ ನಾವು ಬಳಸುವ

ಗ್ರೆಗೊರಿಯನ್ ಕ್ಯಾಲೆಂಡರಿಗೂ 12 ದಿನಗಳ ವ್ಯತ್ಯಾಸವಿದೆ. ಹೀಗಾಗಿ ಜೂಲಿಯನ್ ಕ್ಯಾಲೆಂಡರ್ ಬಳಸುವ ಆರ್ಮೇನಿಯನ್ನರು ಕ್ರಿಸ್‌ಮಸ್ ಆಚರಿಸುವುದು ನಮ್ಮ ಕ್ಯಾಲೆಂಡರಿನ ಪ್ರಕಾರ ಜನವರಿ 19ರಂದು!

ಪಾಶ್ಚಾತ್ಯ ದೇಶಗಳಲ್ಲಿ ನೆಲೆಸಿರುವ ಆರ್ಮೇನಿಯನ್ ಜನರು ಉಳಿದವರೊಡನೆ ಡಿಸೆಂಬರ್ 25ರಂದು ಕ್ರಿಸ್‌ಮಸ್ ಆಚರಿಸಿ, ಜನವರಿ ಆರರಂದು ತಮ್ಮವರ ಜೊತೆಗೆ ಮತ್ತೊಮ್ಮೆ ಕ್ರಿಸ್‌ಮಸ್ ಆಚರಿಸುತ್ತಾರೆ.

ಆರ್ಮೇನಿಯಾದಲ್ಲಿ ನೆಲೆಸಿರುವ ಗ್ರೀಕ್ ಸಮುದಾಯದ ಜನರು ಗ್ರೆಗೊರಿಯನ್ ಕ್ಯಾಲೆಂಡರ್ ಬಳಸುತ್ತಾರೆ. ಹೀಗಾಗಿ ಇವರು ಜನವರಿ ಏಳರಂದು ಕ್ರಿಸ್‌ಮಸ್ ಹಬ್ಬ ಆಚರಿಸುತ್ತಾರೆ.

ಇವರ ಹಬ್ಬದ ಆಚರಣೆಯೂ ಭಿನ್ನವಾಗಿದೆ. ಹಬ್ಬದ 45ದಿನಗಳ ಹಿಂದಿನಿಂದ, ಅಂದರೆ ನವೆಂಬರ್ 25ರಿಂದ ಜನವರಿ 6ರ ರಾತ್ರಿಯವರೆಗೆ ಇವರು ಸಸ್ಯಾಹಾರ ಮಾತ್ರ ಸೇವಿಸುತ್ತಾರೆ. ಬಡಬಗ್ಗರಿಗೆ ಮೇಣದ ಬತ್ತಿ ಹಂಚುತ್ತಾರೆ. ಜೀಸಸ್ ಹುಟ್ಟಿದ ರಾತ್ರಿ ಮೇರಿಯ ಮುಂದೆ ಜೋಸೆಫ್ ಮೇಣದ ಬತ್ತಿಗಳನ್ನು ಉರಿಸಿದ್ದ ನೆನಪಿಗಾಗಿ ಈ ಮೇಣದ ಬತ್ತಿ ದಾನ ನಡೆಯುತ್ತದೆ.

ಜನವರಿ ಆರರ ರಾತ್ರಿ ಕ್ರಿಶ್ಚಿಯನ್ನರು ಚರ್ಚಿಗೆ ಹೋಗಿ ಪ್ರಾರ್ಥನೆ ಮಾಡುತ್ತಾರೆ. ಕೈರೋದ ಪ್ರಸಿದ್ಧ ಸೈಂಟ್ ಯಾರ್ಕ್ ಕೆಥೆಡ್ರಲ್‌ನಲ್ಲಿ ಮೂರನೆಯ ಪೋಪ್ ಶೆನೌದಾ (ಪೌರಸ್ತ್ಯ ಸಾಂಪ್ರದಾಯಿಕ ಚರ್ಚಿನ ಧರ್ಮಗುರುವಾಗಿರುವ ಅಲೆಕ್ಸಾಂಡ್ರಿಯಾದ ಪೋಪ್) ರಾತ್ರಿ 11 ಗಂಟೆಗೆ ಪೂಜೆ ಆರಂಭಿಸುತ್ತಾರೆ. ಈಜಿಪ್ಟ್‌ನ ಟೆಲಿವಿಶನ್ ಛಾನೆಲ್‌ಗಳು ಇದರ ನೇರ ಪ್ರಸಾರಣೆ ನಡೆಸುತ್ತವೆ.

ಇಲ್ಲಿನ ಚರ್ಚುಗಳಲ್ಲಿ ಪ್ರಾರ್ಥನೆಗೆ ಬಳಸುವುದು ಪುರಾತನ ಕೋಪ್ಟಿಕ್ ಭಾಷೆ. ಅರಬ್ಬರು ಈಜಿಪ್ಟಿಗೆ ಕಾಲಿಡುವ ಮುನ್ನ ಇಲ್ಲಿ ಬಳಕೆಯಲ್ಲಿದ್ದ ಭಾಷೆ ಅದು. ಕ್ರಿಸ್‌ಮಸ್ ದಿನ ಜನರು ಬಡಬಗ್ಗರಿಗೆ ಜಲಾಬ್ಯಾ(ಜಿಲೇಬಿ) ಮತ್ತು ಹೌರಿ(ಮೀನು)ಗಳನ್ನು ಹಂಚುತ್ತಾರೆ. ಪೂಜೆಯ ಬಳಿಕ ಶಿಲುಬೆಯ ಆಕೃತಿಯ ವಿಶೇಷ ಬಿಸ್ಕತ್‌ಗಳನ್ನು ತಿನ್ನುತ್ತಾರೆ. ಮನೆಯಲ್ಲಿ ಮಾಂಸದ ಊಟ ಉಣ್ಣುತ್ತಾರೆ.

ಉತ್ತರ ಆಫ್ರಿಕಾದ ಇಥಿಯೋಪಿಯಾ, ಕ್ರಿಶ್ಚಿಯನ್ ಧರ್ಮ ಸ್ವೀಕರಿಸಿದ್ದ ಪುರಾತನ ದೇಶಗಳಲ್ಲಿ ಒಂದು. ಕ್ರಿ.ಶ. 330ರಲ್ಲೇ ಇಲ್ಲಿನ ಜನರು ಕ್ರಿಶ್ಚಿಯನ್ ಧರ್ಮ ಸ್ವೀಕರಿಸಿದ್ದರು. ಇಲ್ಲಿನವರು ಪೌರಸ್ತ್ಯ ಸಂಪ್ರದಾಯದ ಪ್ರಕಾರ ಕ್ರಿಸ್‌ಮಸ್ ಆಚರಿಸುವುದು ಜನವರಿ 7ರಂದು. ಅದಕ್ಕೆ ಹಿಂದಿನ 40 ದಿನಗಳ ಕಾಲ ಉಪವಾಸ, ಸಸ್ಯಾಹಾರ ಮತ್ತು ಆತ್ಮಶುದ್ಧಿ ನಡೆಸುತ್ತಾರೆ.

**ಬೆತ್ಲೆಹೇಮ್‌ನ ಪ್ರೇರಣೆ**

ಬೆತ್ಲೆಹೇಮ್ ಯೇಸುಕ್ರಿಸ್ತ ಹುಟ್ಟಿದ ಊರು. ಇಲ್ಲೂ ವರ್ಷಕ್ಕೆ ಮೂರು ಬಾರಿ ಕ್ರಿಸ್‌ಮಸ್ ಆಚರಣೆಯಾಗುತ್ತದೆ. ಪಾಶ್ಚಾತ್ಯ ಚರ್ಚಿನ ಅನುಯಾಯಿಗಳು ಡಿಸೆಂಬರ್ 25ರಂದು ಕ್ರಿಸ್‌ಮಸ್ ಆಚರಿಸಿದರೆ, ರಶ್ಯನ್ ಚರ್ಚ್‌ನ ಜನರು ಜನವರಿ 19ರಂದು ಈ ಹಬ್ಬದ ಸಂಭ್ರಮ ನಡೆಸುತ್ತಾರೆ. ಸಾಂಪ್ರದಾಯಿಕ ಕ್ರೈಸ್ತರು ಜನವರಿ 6ರಂದು ಕ್ರಿಸ್ತನ ಹುಟ್ಟು ಹಬ್ಬವನ್ನು ಆಚರಿಸುತ್ತಾರೆ.

ಜೀಸಸ್ ಹುಟ್ಟಿದ್ದು ಎಲ್ಲರೂ ತಿಳಿದಿರುವಂತೆ ಕುರಿಗಳ ಹಟ್ಟಿಯಲ್ಲಿ ಅಲ್ಲ, ಒಂದು ಗುಹೆಯಲ್ಲಿ. ಹಿಂದೆ ಪ್ರಾಣಿಗಳನ್ನು ಕಟ್ಟಿಹಾಕಲು ಗುಹೆಗಳನ್ನು ಬಳಸಲಾಗುತ್ತಿತ್ತು. ಈಗ ಆ ಗುಹೆಯ ಮೇಲ್ಭಾಗದಲ್ಲಿ ಒಂದು ದೊಡ್ಡ ಚರ್ಚ್ ಇದೆ. ಅಲ್ಲಿಂದ ಜೀಸಸ್ ಹುಟ್ಟಿದ ಗುಹೆಗೆ ಇಳಿದು ಹೋಗಬಹುದು.

ಬೆತ್ಲೆಹೇಮ್‌ನ ಚರ್ಚ್ ಆಫ್ ನೇಟಿವಿಟಿಯನ್ನು ರೋಮ್‌ನ ಚಕ್ರವರ್ತಿ ಜಸ್ಟಿನಿಯನ್ ಆರನೆಯ ಶತಮಾನದಲ್ಲಿ ಕಟ್ಟಿಸಿದ್ದ. ಈ ಚರ್ಚು ಇರುವಲ್ಲಿ ಹಿಂದೆ ಚಕ್ರವರ್ತಿ ಕೋನ್‌ಸ್ಟಂಟೈನ್ ಮತ್ತು ಅವನ ತಾಯಿ ಹೆಲೆನಾ ಕಟ್ಟಿಸಿದ್ದ ಪುರಾತನ ಚರ್ಚು ಇತ್ತು. ಅದಕ್ಕೂ ಹಿಂದೆ ಇಲ್ಲಿ ಗ್ರೀಕ್ ದೇವತೆ ಅಡೋನಿಸ್‌ನ ದೇವಾಲಯವಿತ್ತು ಎನ್ನಲಾಗಿದೆ. ಯೇಸುಕ್ರಿಸ್ತನ ಜನ್ಮಸ್ಥಾನವೆನ್ನಲಾದ ಗುಹೆಗಳ ಮೇಲೆ ಈ ಚರ್ಚುಗಳನ್ನು ಕಟ್ಟಲಾಗಿದೆ.

ಏಳನೆಯ ಶತಮಾನದಲ್ಲಿ ಪರ್ಶಿಯನ್ನರು ಬೆತ್ಲೆಹೇಮ್‌ನ ಮೇಲೆ ದಾಳಿ ಮಾಡಿದ್ದರು. ಇಲ್ಲಿದ್ದ 'ಮೇಜೈ' (ಯೇಸುಕ್ರಿಸ್ತನನ್ನು ಭೇಟಿಮಾಡಿದ್ದ ಮೂವರು ಪೌರಸ್ತ್ಯ ರಾಜರು) ಶಿಲ್ಪಗಳನ್ನು ನೋಡಿ ಅವರು, ಈ ಚರ್ಚನ್ನು ಉರುಳಿಸದೆ ಬಿಟ್ಟು ಹೋದರು. ಯಾಕೆಂದರೆ ಈ ಮೇಜೈಗಳು ಪರ್ಶಿಯದ ರಾಜರ ಉಡುಗೆಗಳನ್ನು ತೊಟ್ಟಿದ್ದರು!

ಈ ಚರ್ಚಿನಲ್ಲಿರುವ ಹದಿನಾಲ್ಕು ಮೂಲೆಗಳ ಬೆಳ್ಳಿಯ ನಕ್ಷತ್ರ, ಕ್ರಿಸ್ತ ಹುಟ್ಟಿದ ಹಟ್ಟಿಯ ಜಾಗವನ್ನು ತೋರಿಸುತ್ತದೆ. ಇದನ್ನು ಟರ್ಕಿಯ ಸುಲ್ತಾನ ಉಡುಗೊರೆಯಾಗಿ ಕೊಟ್ಟ ಎನ್ನಲಾಗಿದೆ. ಈ ನಕ್ಷತ್ರದ ಕೆಳಗೆ "ಇಲ್ಲಿ ಕನ್ಯೆ ಮೇರಿಗೆ ಜೀಸಸ್ ಜನಿಸಿದ" ಎಂದು ಲ್ಯಾಟಿನ್ ಭಾಷೆಯಲ್ಲಿ ಬರೆಯಲಾಗಿದೆ.

13ನೆಯ ಶತಮಾನದಲ್ಲಿ ಅಸೀಸಿಯ ಸಂತ ಫ್ರಾನ್ಸಿಸ್ ಇದೇ ಚರ್ಚ್‌ಗೆ ಭೇಟಿ ನೀಡಿ, ಗೋದಲಿಯ ರಚನೆಗೆ ಸ್ಫೂರ್ತಿ ಪಡೆದಿದ್ದರು.

**(ತರಂಗ 29-12-2016)**

----------:::::: ****** ::::::----------

# ರಾಮ, ಕೃಷ್ಣ, ವಾಲ್ಮೀಕಿ ಮಾಂಸಾಹಾರಿಗಳು

## ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಉದ್ಘಾಟಿಸಿ ಸಚಿವ ಪ್ರಮೋದ್

ಉಡುಪಿ, ಅ. 15: ಯಾವುದೇ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆಗಳನ್ನು ಮಾಡಲು ಜಾತಿ ಎಂಬುದು ಮುಖ್ಯ ಅಲ್ಲ. ರಾಮ, ಕೃಷ್ಣ, ವಾಲ್ಮೀಕಿ ಮಾಂಸಾಹಾರಿಗಳಾಗಿದ್ದರು ಎಂದು ಸಚಿವ ಪ್ರಮೋದ್ ಮಧ್ವರಾಜ್ ತಿಳಿಸಿದ್ದಾರೆ.

ಶನಿವಾರ ಜಿಲ್ಲಾ ಆಡಳಿತ, ಜಿ. ಪಂ., ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಸಂಘಟನೆಯ ಸಹಯೋಗದಲ್ಲಿ ಆದಿಉಡುಪಿಯ ಅಂಬೇಡ್ಕರ್ ಸಭಾ ಭವನದಲ್ಲಿ ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು ಈ ವಿಷಯದ ಕುರಿತು ಚರ್ಚಿಸಲು ಸಿದ್ಧ ಎಂದರು.

ವಾಲ್ಮೀಕಿಯ ವ್ಯಕ್ತಿತ್ವ ಮತ್ತು ಜೀವನದ ಕುರಿತು ಉಪನ್ಯಾಸ ನೀಡಿದ ಮೂಡಬಿದಿರೆಯ ಆಳ್ವಾಸ್ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ। ಕೃಷ್ಣರಾಜ ಕರಬ ಮಾತನಾಡಿ, ವಾಲ್ಮೀಕಿ ತನ್ನ ವೈಯಕ್ತಿಕ ಶ್ರಮದ ಮೂಲಕ ಅಸಾಮಾನ್ಯ ಸಾಧನೆ ಮಾಡಿದವರು. ತಳ ಸಮುದಾಯದಿಂದ ಬಂದ ಇವರು, ತಳಸಮುದಾಯದ ವ್ಯಕ್ತಿಗಳಲ್ಲಿನ ಅಂತಃಕರಣದ ಶಕ್ತಿಯನ್ನು ಇಡೀ ಜಗತ್ತಿಗೆ ತೋರಿದವರು. ಯಾವುದೇ ವ್ಯಕ್ತಿಯ ಬದುಕನ್ನು ಜಾತಿ ನಿರ್ಧರಿಸಬಾರದು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಜಿ.ಪಂ. ಸಿಇಒ ಪ್ರಿಯಾಂಕಾ ಮೇರಿ ಫ್ರಾನ್ಸಿಸ್ ಮಾತನಾಡಿ, ಬದಲಾವಣೆ ಎನ್ನುವುದು ಪ್ರತಿಯೊಬ್ಬರ ಜೀವನದಲ್ಲೂ ಅಗತ್ಯವಿದೆ. ವಾಲ್ಮೀಕಿಯವರ ಈ ಬದಲಾವಣೆಯ ಜೀವನ ಪ್ರತಿಯೊಬ್ಬರ ಬದುಕಿನಲ್ಲೂ ಸ್ಫೂರ್ತಿಯಾಗಬೇಕು ಎಂದರು.

**ಸಾಧನೆ ವರ್ಗಕ್ಕೆ ಸೀಮಿತವಲ್ಲ**

ಮೀನುಗಾರ ಜಾತಿಯ ಮದುವೆಯಾಗದ ಹೆಣ್ಣು ಸತ್ಯವತಿಯ ಮಗ ವೇದವ್ಯಾಸರು. ಜಾತಿ ವ್ಯವಸ್ಥೆಯಲ್ಲಿ ಕೆಳ ವರ್ಗದ ವ್ಯಾಧ ಸಮುದಾಯದಿಂದ ಬಂದ ವಾಲ್ಮೀಕಿ, ರಾಮಾಯಣದಂತಹ ಮಹಾನ್ ಕಾವ್ಯ ರಚನೆ ಮಾಡಿದರು. ಸಾಧನೆ ಎನ್ನುವುದು ಯಾವುದೇ ವರ್ಗಕ್ಕೆ ಸೀಮಿತವಾಗಿಲ್ಲ, ಸಾಧನೆಗಳು ಯಾವುದೇ ಜಾತಿಯ ವ್ಯಕ್ತಿಗಳಿಂದ ಬರಬಹುದು. ಸಾಧನೆಗಳಿಗೆ ಜಾತಿ ಮುಖ್ಯವಾಗುವುದಿಲ್ಲ. ವಾಲ್ಮೀಕಿಯವರ ಜೀವನ ಸಾಧನೆ, ಜಾತಿ ಪದ್ಧತಿಯ ನಿವಾರಣೆಗೆ ಮಾದರಿಯಾಗಿದೆ ಎಂದು ಸಚಿವ ಪ್ರಮೋದ್ ಹೇಳಿದರು.

**(ಉದಯವಾಣಿ 16–10–2016)**

––––––––––:::::: ****** ::::::––––––––––

# ಮಾಂಸಾಹಾರ: ಬನ್ನಂಜೆಯವರೇ ಸಮರ್ಥಿಸಿಲ್ಲವೇ?

ಶ್ರೀರಾಮ, ಶ್ರೀಕೃಷ್ಣ ಮಾಂಸಾಹಾರಿ ಎಂದು ವಾಲ್ಮೀಕಿ ಜಯಂತಿಯಲ್ಲಿ ಸಚಿವರು ಸತ್ಯವನ್ನೇ ಹೇಳಿದ್ದಾರೆ. ಅದನ್ನು ವಿದ್ವಾಂಸರೇ ಸಮರ್ಥಿಸಿದ್ದಾರೆ. ಧಾರ್ಮಿಕ ಭಾವನೆ ಕೆಣಕುವ ಇರಾದೆ ಸಚಿವರಿಗಿಲ್ಲ. ರಘುಪತಿ ಭಟ್ ಹೇಳಿದಂತೆ ಅವರೆಲ್ಲರೂ ಹಿಂದುಳಿದ ವರ್ಗದವರು ಎನ್ನಬಹುದಿತ್ತು ಎಂದು ಹೇಳುವುದಾದರೆ ಉಳಿದವರು ಮಾಂಸಾಹಾರಿ ಎಂದು ಅರ್ಥವೇ? ನಮ್ಮ ಸಚಿವರು ಯಾವತ್ತೂ ಹಿಂದೂ ದೇವರ ಬಗ್ಗೆ ಆಕ್ಷೇಪಣ ಹೇಳಿಕೆಯನ್ನು ನೀಡಿಲ್ಲ. ಜನರ ಮನಸ್ಸನ್ನು ಬೇರೆಡೆಗೆ ತಿರುಗಿಸುವ ಮಾಜಿ ಶಾಸಕರ ಪ್ರಯತ್ನ ಯಶಸ್ವಿಯಾಗಲಾರದು. ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯ ಅವರೇ ಸಚಿವರ ಹೇಳಿಕೆಯನ್ನು ಸಮರ್ಥನೆ ಮಾಡಿರುವಾಗ ಮಾಜಿ ಶಾಸಕರು ಹೇಳಿಕೆ ವಿಪರ್ಯಾಸ ಎಂದು ಪ್ರತಿಕ್ರಿಯಿಸಿದ್ದಾರೆ. **(ಉದಯವಾಣಿ 19–10–2016)**

––––––––––:::::: ****** ::::::––––––––––

# ಸದ್ದಾಂ ಇದ್ದಿದ್ದರೆ ಐಸಿಸ್ ಹುಟ್ಟುತ್ತಿರಲಿಲ್ಲ: ಸಿಐಎ ಸಿಬಂದಿ

ವಾಷಿಂಗ್ಟನ್, ಡಿ. 17: ಜಾರ್ಜ್ ಬುಶ್ ಅವಧಿಯಲ್ಲಿ ಇರಾಕ್ ಮೇಲೆ ಮಾಡಿದ ಯುದ್ಧದ ವಿರುದ್ಧ ಎಲ್ಲೆಡೆ ವಿರೋಧ ವ್ಯಕ್ತವಾಗಿದ್ದರೂ ಅಮೆರಿಕ ಸಮರ್ಥಿಸಿಕೊಂಡಿತ್ತು. ಆದರೆ, ಇದು ಅಮೆರಿಕ ಮಾಡಿದ ತಪ್ಪು ಎಂದು ಸ್ವತಃ ಅಂದು ಸಿಐಎ ಅಧಿಕಾರಿಯಾಗಿದ್ದ ಜಾನ್ ನಿಕ್ಸನ್ ಅಭಿಪ್ರಾಯಪಟ್ಟಿದ್ದಾರೆ.

ಇರಾಕ್ ಮೇಲೆ ಅಮೇರಿಕ ದಾಳಿ ಮಾಡಬಾರದಿತ್ತು. ಸದ್ದಾಂ ಹುಸೇನ್‌ಗೆ ಸರಕಾರ ಮುನ್ನಡೆಸಲು ಅವಕಾಶ ನೀಡಬೇಕಿತ್ತು. ಹೀಗೆ ಮಾಡಿದ್ದರೆ ಇಂದು ಅಪಾಯಕಾರಿಯಾಗಿರುವ ಐಸಿಸ್(ಇಸ್ಲಾಮಿಕ್ ಸ್ಟೇಟ್) ಉಗ್ರ ಸಂಘಟನೆ ಬೆಳೆಯುತ್ತಿರಲಿಲ್ಲ ಎಂದು ತಮ್ಮ ಹೊಸ ಪುಸ್ತಕದಲ್ಲಿ ಬರೆದಿದ್ದಾರೆಂದು ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ. ತಮ್ಮನ್ನು ಬಂಧನದ ವೇಳೆ ವಿಚಾರಣೆಗೆ ಒಳಪಡಿಸಿದ್ದ ನಿಕ್ಸನ್‌ರಿಗೆ 'ನೀವು ಇರಾಕ್ ಆಡಳಿತ ನಡೆಸಲು ವಿಫಲರಾಗುತ್ತೀರಿ. ಏಕೆಂದರೆ ನೀವು ಇರಾಕಿ ಭಾಷೆ, ಇತಿಹಾಸ ಮತ್ತು ಅರಬ್ ಜನರ ಮನಸ್ಥಿತಿ ಅರ್ಥ ಮಾಡಿಕೊಂಡಿಲ್ಲ ಎಂದು ಸದ್ದಾಂ ಹುಸೇನ್ ಹೇಳಿದ್ದ' ಎಂದು ಅವರು ತಿಳಿಸಿದ್ದಾರೆ. **(ಉದಯವಾಣಿ 18–12–2016)**

———————:::::: ****** ::::::———————

## ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಪಾದ್ರಿಗೆ ಇಮ್ಮಡಿ ಜೀವಾವಧಿ ಶಿಕ್ಷೆ

ಕೊಚ್ಚಿ ಡಿ.8: ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಧರ್ಮಗುರು ಫಾದರ್ ಎಡ್ವಿನ್ ಫಿಗರೆಝ್‌ಗೆ (41) ಎರ್ನಾಕುಳಂ ನ್ಯಾಯಾಲಯ ಇಮ್ಮಡಿ ಜೀವಾವಧಿ ಶಿಕ್ಷೆ ವಿಧಿಸಿದೆ. ಕೇರಳದಲ್ಲಿ ಧರ್ಮಗುರುವೊಬ್ಬರು ಪೊಸ್ಕೊ ಕಾಯಿದೆಯಡಿ ಶಿಕ್ಷೆಗೊಳಗಾಗಿರುವ ಮೊದಲ ಪ್ರಕರಣವಿದು.

ಶಿಕ್ಷೆಗೊಳಗಾಗಿರುವ ಫಾದರ್ ಫಿಗರೆಝ್ ಕೊಟ್ಟಪ್ಪುರಂ ಕ್ಯಾಥೊಲಿಕ್ ಧರ್ಮಪ್ರಾಂತದ ವ್ಯಾಪ್ತಿಗೊಳಪಟ್ಟ ಚರ್ಚ್‌ನಲ್ಲಿ ಪಾದ್ರಿಯಾಗಿದ್ದರು. ಇಮ್ಮಡಿ ಜೀವಾವಧಿ ಶಿಕ್ಷೆಯನ್ನು ಏಕಕಾಲಕ್ಕೆ ಅನುಭವಿಸಲು ನ್ಯಾಯಾಲಯ ಹೇಳಿದೆ. ಜತೆಗೆ 2.15 ಲ. ರೂ. ದಂಡವನ್ನೂ ವಿಧಿಸಿದೆ. ಪಾದ್ರಿಗೆ ತಲೆಮರೆಸಿಕೊಳ್ಳಲು ಸಹಾಯ ಮಾಡಿದ ಅವರ ಸಹೋದರನಿಗೆ ಒಂದು ವರ್ಷ ಶಿಕ್ಷೆಯಾಗಿದೆ. ಪ್ರಕರಣವನ್ನು ಪೊಲೀಸರಿಗೆ ತಿಳಿಸದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯೆ ಅಜಿತಾ ಎಂಬವರಿಗೆ ನ್ಯಾಯಾಲಯ 5000 ದಂಡ ವಿಧಿಸಿದೆ. ಅಜಿತಾ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತರಬೇತಿ ನಿರತ ವೈದ್ಯೆಯಾಗಿದ್ದ ಕಾರಣ ಜೈಲು ಶಿಕ್ಷೆಯಿಂದ ವಿನಾಯಿತಿ ಸಿಕ್ಕಿದೆ.

**ಏನಿದು ಪ್ರಕರಣ?** ಎರ್ನಾಕುಳಂ ಜಿಲ್ಲೆಯ ಪುತ್ತೇನ್‌ವೆಲ್ಲಿಕ್ಕರದ ಲಾರ್ಡ್ ಮಾತಾ ಚರ್ಚ್‌ನಲ್ಲಿ ಪಾದ್ರಿಯಾಗಿದ್ದ ಫಾದರ್ ಫಿಗರೆಝ್ ಉತ್ತಮ ಗಾಯಕರೂ ಆಗಿದ್ದರು. ಕ್ರೈಸ್ತ ಧಾರ್ಮಿಕ ಹಾಡುಗಳನ್ನು ಇಂಪಾಗಿ ಹಾಡುತ್ತಿದ್ದರು. ಅವರ ಕೆಲವು ಆಲ್ಬಂಗಳು ಕೂಡ ಬಂದಿದ್ದವು. ಚರ್ಚ್‌ಗೆ ಬರುತ್ತಿದ್ದ 14 ವರ್ಷದ ಬಾಲಕಿಗೆ ಸಂಗೀತದ ಮೇಲೆ ಆಸಕ್ತಿಯಿರುವುದನ್ನು ಗಮನಿಸಿ ಸಂಗೀತ ಕಲಿಸುವ ನೆಪದಲ್ಲಿ ಬುಟ್ಟಿಗೆ ಹಾಕಿಕೊಂಡಿದ್ದರು.

ಚರ್ಚ್ ಸಮೀಪದಲ್ಲೇ ಇದ್ದ ಪಾದ್ರಿ ನಿವಾಸದಲ್ಲಿ ಬಾಲಕಿ ಮೇಲೆ ಅತ್ಯಾಚಾರ ಎಸಗುತ್ತಿದ್ದರು. ಕೆಲವು ತಿಂಗಳು ಈ ಹಿಂಸೆಯನ್ನು ಸಹಿಸಿದ ಬಾಲಕಿ ಕೊನೆಗೆ ಹೆತ್ತವರಿಗೆ ವಿಷಯ ತಿಳಿಸಿದಾಗ ಪಾದ್ರಿಯ ದುಷ್ಕೃತ್ಯ ಬಯಲಾಯಿತು. ಕಳೆದ ಎಪ್ರಿಲ್ 1ರಂದು ಕೇಸ್ ದಾಖಲಾದ ಬಳಿಕ ಪಾದ್ರಿ ತಲೆಮರೆಸಿಕೊಂಡಿದ್ದರು. ಬಳಿಕ ಅವರು ನ್ಯಾಯಾಲಯಲಕ್ಕೆ ಶರಣಾಗಿದ್ದರು. ಆರೋಪ ದೃಢಪಟ್ಟ ಬಳಿಕ ಅವರನ್ನು ಪಾದ್ರಿ ಕರ್ತವ್ಯದಿಂದ ಬಿಡುಗಡೆಗೊಳಿಸಿದೆ. **(ಉದಯವಾಣಿ 9–12–2016)**

## ಪ್ರತಿಕ್ರಿಯೆ

WhatsApp

ಪ್ರಿಯ ಸಹೋದರರೇ, ಅಸ್ಸಲಾಮು ಅಲೈಕುಂ.

7–12–2016ರಂದು ಒಂದು ವಾಟ್ಸ್‌ಆ್ಯಪ್ ಗ್ರೂಪಿನಲ್ಲಿ **"ಝೀ"** ಎಂಬವರ ಒಂದು ಲೇಖನ ನೋಡಿದೆ. ಅದರಲ್ಲಿ ಅವರು ಅಹ್ಮದೀ ಮುಸ್ಲಿಮರ (ಅವರ ಮಾತಿನಲ್ಲಿ ಖಾದಿಯಾನಿಗಳ) ಬಗ್ಗೆ ಕೆಲವು ಸಾಲುಗಳನ್ನು ಓದಿದೆ. ಅವರ ಅಜ್ಞಾನವನ್ನು ಹೋಗಲಾಡಿಸಲು ಅಹ್ಮದೀ ಮುಸ್ಲಿಮರ ಬಗ್ಗೆ ಕೆಲವು ಸತ್ಯಾಂಶಗಳನ್ನು ಹೇಳಲು ಬಯಸುತ್ತೇನೆ.

1. ಅಹ್ಮದೀ ಮುಸ್ಲಿಮರು ಜಗತ್ತಿನ ಯಾವ ದೇಶದಲ್ಲಿ ವಾಸಿಸುವವರಾದರೂ ಅವರು ಇಸ್ಲಾಂ ಧರ್ಮದ ಉಪದೇಶ ಪ್ರಕಾರ ದೇಶಪ್ರೇಮಿಗಳಾಗಿರುತ್ತಾರೆ. ಏಕೆಂದರೆ, ದೇಶ ಪ್ರೇಮ ಈಮಾನಿನ ಅಂಶವಾಗಿದೆ ಎಂದು ಹಝ್ರತ್ ಮುಹಮ್ಮದ್ ಪೈಗಂಬರ್[ಸ] ನುಡಿದಿದ್ದಾರೆ. ಅವರೆಂದಿಗೂ ದೇಶದ್ರೋಹಿಗಳಾಗುವುದಿಲ್ಲ. ಆದುದರಿಂದ ಓರ್ವ ಅಹ್ಮದೀ ಮುಸ್ಲಿಂ ಜಗತ್ತಿನ ಎಲ್ಲೇ ಆಗಲಿ ಆ ದೇಶದ ಸತ್ಪ್ರಜೆ ಆಗಿರುತ್ತಾನೆ. ಇದು ಇಸ್ರಾಯೇಲ್ ರಾಷ್ಟ್ರಕ್ಕೂ ಅನ್ವಯಿಸುತ್ತದೆ.

2. ಜಲಾಲುದ್ದೀನ್ ಶಮ್ಸ್ ಎಂಬ ಅಹ್ಮದೀ ಮೌಲವಿ ಮೃತಪಟ್ಟು ಎಷ್ಟೋ ದಶಕಗಳು ಕಳೆದಿದೆ. ಹೀಗಿರುವಾಗ, ಈ ಲೇಖನ ಬರೆದ **"ಝೀ"** ಎಂಬ ವ್ಯಕ್ತಿಗೆ ಏನೂ ತಿಳುವಳಿಕೆ ಇಲ್ಲವೆಂದು ಸಾಬೀತಾಗುತ್ತದೆ.

3. ಫೆಲೆಸ್ತೀನಿನ ಅರಬಿ ಮುಸ್ಲಿಮರು ಯಹೂದಿಗಳಿಗೆ ಭೂಸೊತ್ತುಗಳನ್ನು ಮಾರುತ್ತಿದ್ದಾಗ, ಮಣ್ಣಿಗೆ ಹೊನ್ನಿನ ಬೆಲೆ ದೊರೆತರೂ ಭೂಸೊತ್ತು ಮಾರಬಾರದೆಂದು ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರು ಆ ಕಾಲದಲ್ಲಿ ನಿರ್ದೇಶಿಸಿದ್ದರು. ಆದರೆ ಅರಬಿ ಮುಸ್ಲಿಮರು ಅವರ ಮಾತಿಗೆ ಬೆಲೆ ಕೊಡಲಿಲ್ಲ.

4. ಇಸ್ರಾಯೇಲ್ ರಾಷ್ಟ್ರ ಸ್ಥಾಪಿಸಲ್ಪಡುವುದಕ್ಕಿಂತ ಮುಂಚೆ 1947ರಲ್ಲಿ ಇಸ್ರಾಯೇಲಿನ ವಿರುದ್ಧವಾಗಿ ಮತ್ತು ಫೆಲೆಸ್ತೀನಿಯರ ಪರವಾಗಿ ಖ್ಯಾತ ಅಹ್ಮದೀ ಮುಸ್ಲಿಂ ಸರ್ ಮುಹಮ್ಮದ್ ಝಫರುಲ್ಲಾ ಖಾನ್ (ಜಾಗತಿಕ ನ್ಯಾಯಾಲಯದ ಮಾಜಿ ಅಧ್ಯಕ್ಷರು ಹಾಗೂ ವಿಶ್ವ ಸಂಸ್ಥೆಯ ಜನರಲ್ ಅಸೆಂಬ್ಲಿಯ ಮಾಜಿ ಅಧ್ಯಕ್ಷರು) ವಿಶ್ವಸಂಸ್ಥೆಯಲ್ಲಿ ವಾದಿಸಿದ್ದರು. ಆಗ ಅವರು ಅರಬಿಗಳ ಕಣ್ಮಣಿಯಾಗಿದ್ದರು. ಅವರ ಭಾಷಣ ಆಲಿಸಿ ಸಂತೋಷಗೊಂಡ ಸೌದಿ ಅರೇಬಿಯಾದ ಫೈಝಲ್ ದೊರೆ ಅವರನ್ನು ಅತಿಥಿಯಾಗಿ ಆಮಂತ್ರಿಸಿದರು. ಅವರಿಗೆ ನಮಾಝ್ ಮಾಡಲು ಕಅ್‌ಬದ ಬಾಗಿಲನ್ನು ತೆರೆದು ಕೊಟ್ಟಿದ್ದರು. ಆ ಕಾಲದಲ್ಲಿ ಅರಬ್ ದೇಶಗಳಲ್ಲಿ ಜನಿಸಿದ ಅನೇಕ ಶಿಶುಗಳಿಗೆ ಝಫರುಲ್ಲಾಹ್ ಎಂದು ಹೆಸರಿಡಲಾಗಿತ್ತು.

5. ಕಬಾಬೀರ್‌ನಲ್ಲಿ ಅಹ್ಮದಿಯಾ ಜಮಾಅತ್ ಇಸ್ರಾಯೇಲ್ ರಾಷ್ಟ್ರ ಹುಟ್ಟುವ ಎಷ್ಟೋ ಮುಂಚೆ 1928ರಲ್ಲಿ ಸ್ಥಾಪಿತವಾಗಿದೆ.

6. ಇಸ್ರಾಯೇಲ್‌ನಲ್ಲಿ ಸುಮಾರು 20 ಲಕ್ಷ ಅರಬಿಗಳಿದ್ದಾರೆ. ಅಲ್ಲಿರುವ ಮುಸ್ಲಿಮರಿಗೆ ಅನೇಕ ಮಸೀದಿಗಳಿವೆ. ಅಲ್ಲಿನ ಮಸೀದಿ ಇಮಾಮರಿಗೆ ಇಸ್ರಾಯೇಲ್ ಸರಕಾರವೇ ಸಂಬಳ ಕೊಡುತ್ತದೆ. ಅವರ ಮಸೀದಿ ನಿರ್ಮಾಣ, ಜೀರ್ಣೋದ್ಧಾರ ಇತ್ಯಾದಿಗಳಿಗೆ ಸರಕಾರ ಧನಸಹಾಯ ಮಾಡುತ್ತದೆ. ಅಲ್ಲಿರುವ ಅಹ್ಮದೀ ಮುಸ್ಲಿಮರ ಜನಸಂಖ್ಯೆ 2 ಸಾವಿರ ಮಾತ್ರ. ಅಹ್ಮದಿಯಾ ಮಸೀದಿ ಇಮಾಮರಿಗೆ ಸರಕಾರದಿಂದಲ್ಲ, ಅಹ್ಮದಿಯಾ ಜಮಾಅತಿನಿಂದ ಸಂಬಳ ಸಿಗುತ್ತದೆ. ಇಸ್ರಾಯೇಲ್ ಸೈನ್ಯದಲ್ಲಿ ಮತ್ತು ಪೊಲೀಸ್ ವಿಭಾಗದಲ್ಲಿ ಬಹಳಷ್ಟು ಮುಸ್ಲಿಮರಿದ್ದಾರೆ. ಆದರೆ ಒಬ್ಬ ಅಹ್ಮದೀ ಮುಸ್ಲಿಂ ಕೂಡ ಆ ವಿಭಾಗದಲ್ಲಿಲ್ಲ.

7. ಕೊನೆಯದಾಗಿ, ಅಹ್ಮದೀ ಮುಸ್ಲಿಮರ ಯಾವ ಲೇಖನ ಮತ್ತು ಪುಸ್ತಕಗಳು ಇಸ್ಲಾಂ ಧರ್ಮವನ್ನು ನಾಶಮಾಡುತ್ತದೆ ಎಂಬುದನ್ನು **"ಝೀ"** ರವರು ತೋರಿಸಿಕೊಡಬೇಕಾಗಿ ಅವರನ್ನು ಕೇಳಿಕೊಳ್ಳುತ್ತೇನೆ.

**"ಲಅ್‌ನತುಲ್ಲಾಹಿ ಅಲಲ್ ಕಾಧಿಬೀನ್."**

**ಮುಹಮ್ಮದ್ ಯೂಸುಫ್, ಮಂಗಳೂರು.**

**ವಾರ್ತೆಗಳು**

## ಬೆಂಗಳೂರಿನಲ್ಲಿ ಶಾಂತಿ ವಿಚಾರಗೋಷ್ಠಿ

ಬೆಂಗಳೂರು: ಜನವರಿ 29ರಂದು ಅಹ್ಮದಿಯಾ ಮುಸ್ಲಿಂ ಜಮಾಅತ್ ವತಿಯಿಂದ ಬೆಂಗಳೂರಿನಲ್ಲಿ ಶಾಂತಿ ವಿಚಾರಗೋಷ್ಠಿ ಜರಗಿತು. "ಪರಿಪೂರ್ಣ ನ್ಯಾಯಶೀಲತೆ ಶಾಶ್ವತ ಶಾಂತಿಗೆ ಬುನಾದಿ" ಎಂಬುದಾಗಿತ್ತು ವಿಷಯ.

ಗ್ರಾಂಡ್ ಮಗ್ರತ್ ಹೋಟೆಲ್‌ನಲ್ಲಿ ಜರಗಿದ ಸಮಾರಂಭದಲ್ಲಿ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ವಜೂಭಾಯಿ ರುದಾಭಾಯಿ ವಾಲಾ ಅವರು ಮುಖ್ಯಾತಿಥಿಯಾಗಿದ್ದರು. ಅಡಿಶನಲ್ ನಾಝಿರ್ ಅಅ್‌ಲಾ ಖಾದಿಯಾನ್ ಜನಾಬ್ ಶಿರಾಝ್ ಅಹ್ಮದ್ ಸಾಹಿಬ್ ಮುಖ್ಯ ಭಾಷಣ ಮಾಡಿದರು.

ಪ್ರೊ। ಡಾ। ಬರಗೂರು ರಾಮಚಂದ್ರಪ್ಪ, ಜಸ್ಟಿಸ್ ಎಚ್.ಎನ್. ನಾಗಮೋಹನ್ ದಾಸ್, ಡಾ। ಕೆ.ಬಿ. ಲಿಂಗೇಗೌಡ (ಕಿದ್ವಾಯಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಡೈರೆಕ್ಟರ್) ಗೌರವಾನ್ವಿತ ಅತಿಥಿಗಳಾಗಿ ಆಗಮಿಸಿದ್ದರು.

ಧಾರ್ಮಿಕ ಗುರುಗಳಾದ ಡಾ। ಫಾ। ವಿಕ್ಟರ್ ಲೋಬೋ, ಪ್ರೊ। ಹರಿಂದರ್ ಸಿಂಘ್ ಭಾಟಿಯಾ, ಶ್ರೀ ಕಾಸ್ಸಪ ಮಹಾತೆರ, ಮೌಲವಿ ಫಝ್ಲುಲ್ ರಹ್ಮಾನ್ ಭಟ್ಟಿ ಸಾಹಿಬ್, ಮೌಲವಿ ಮೀರ್ ಅಬ್ದುಲ್ ಹಮೀದ್ ಸಾಹಿಬ್ ಮತ್ತು ಸ್ಥಳೀಯ ಅಹ್ಮದಿಯಾ ಘಟಕದ ಅಧ್ಯಕ್ಷ ಮುಸದ್ದಿಖ್ ಅಹ್ಮದ್ ಸಾಹಿಬ್ ಉಪಸ್ಥಿತರಿದ್ದರು.

ಲೋಕದಲ್ಲಿ ಶಾಂತಿ ಸ್ಥಾಪನೆಗೋಸ್ಕರ ಅಹ್ಮದಿಯಾ ಜಮಾಅತ್ ಮಾಡುವ ಪ್ರಯತ್ನದ ಬಗ್ಗೆ ರಾಜ್ಯಪಾಲರು ಸಂತೋಷ ವ್ಯಕ್ತಪಡಿಸಿದರು. ಸಮಾಜದ ವಿವಿಧ ಧರ್ಮಾನುಯಾಯಿಗಳನ್ನು ಒಂದೇ ವೇದಿಕೆಯಲ್ಲಿ ಸೇರುವಂತೆ ಮಾಡಿದ ಪರಿಶ್ರಮವನ್ನು ಅವರು ಶ್ಲಾಘಿಸಿದರು. ಎಲ್ಲ

ಧರ್ಮಗಳು ಪ್ರೀತಿ ಮತ್ತು ಶಾಂತಿಯನ್ನು ಉಪದೇಶಿಸುತ್ತವೆ; ಮೂಲಭೂತ ಮಾನವ ಹಕ್ಕುಗಳನ್ನು ನಾವು ಗೌರವಿಸಬೇಕು ಎಂದು ಅವರು ಹೇಳಿದರು. ಶಾಂತಿಯನ್ನು ಪೋಷಿಸುವಂಥ ಇಂತಹ ಕಾರ್ಯಕ್ರಮಗಳು ಎಲ್ಲ ಕಡೆಗಳಲ್ಲೂ ವ್ಯಾಪಿಸಬೇಕೆಂದು ಅವರು ಹಾರೈಸಿದರು.

ಪವಿತ್ರ ಖುರ್‌ಆನಿನ ಗುಜರಾತಿ ಅನುವಾದ ಪ್ರತಿಯನ್ನೂ ನೆನಪಿನ ಕಾಣಿಕೆಯನ್ನೂ ಶಿರಾಝ್ ಸಾಹಿಬರು ರಾಜ್ಯಪಾಲರಿಗೆ ನೀಡಿದರು.

ಅಹ್ಮದಿಯಾ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರ ಶಾಂತಿ ಸಂದೇಶದ ಡಾಕ್ಯುಮೆಂಟರಿ ಚಲನಚಿತ್ರವನ್ನು ಪ್ರದರ್ಶಿಸಲಾಯಿತು.

ಜನಾಬ್ ಶಿರಾಝ್ ಅಹ್ಮದ್ ಸಾಹಿಬರು ಮಾಡಿದ ಮುಖ್ಯ ಭಾಷಣದಲ್ಲಿ ಶಾಶ್ವತ ಶಾಂತಿಗೆ ಬುನಾದಿಯು ಸೃಷ್ಟಿಕರ್ತನಿಗೆ ನಾವು ಸಲ್ಲಿಸಬೇಕಾದ ವಿಧೇಯತೆ ಮತ್ತು ಅವನ ಸೃಷ್ಟಿಗಳಿಗೆ ನಾವು ಸಲ್ಲಿಸಬೇಕಾದ ಸೇವೆಗಳ ಮೇಲೆ ಆಧಾರಿತವಾಗಿವೆ ಎಂದರು. ಎಲ್ಲ ವಿಧ ಭೀಕರ ಕೃತ್ಯಗಳನ್ನು ಇಸ್ಲಾಂ ವಿರೋಧಿಸುತ್ತದೆ ಎಂದು ಅವರು ಹೇಳಿ, **"**ನಿರಪರಾಧಿಯಾದ ಒಬ್ಬನನ್ನು ಯಾರಾದರೂ ಕೊಂದರೆ ಅವನು ಮನುಷ್ಯರೆಲ್ಲರನ್ನೂ ಕೊಂದಂತಾಗುತ್ತದೆ**"** ಎಂಬ ಖುರ್‌ಆನ್ ವಚನವನ್ನು(5:33) ಉದ್ಧರಿಸಿದರು.

ಈ ಸಮಾರಂಭದಲ್ಲಿ ಅನೇಕ ವಿದ್ವಾಂಸರೂ ಬುದ್ಧಿ ಜೀವಿಗಳೂ ರಾಜಕಾರಣಿಗಳೂ ಡಾಕ್ಟರ್‌ಗಳೂ ಜಡ್ಜ್‌ಗಳೂ ವಕೀಲರೂ ಪೊಲೀಸ್ ಅಧಿಕಾರಿಗಳೂ ವಿವಿಧ ಸಮಾಜಗಳ ಗಣ್ಯರೂ ಭಾಗವಹಿಸಿದರು.

——————————:::::: ****** ::::::——————————

# ಉಚಿತ ವೈದ್ಯಕೀಯ ಶಿಬಿರ

ಮಂಜೇಶ್ವರ : ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮಹಿಳಾ ಶಾಖೆಯಾದ ಲಜ್‌ನಾ ಇಮಾಇಲ್ಲಾಹ್ ಮಂಜೇಶ್ವರ ಘಟಕವು, ದಿನಾಂಕ 14–1–2017 ರಂದು, ಮಂಜೇಶ್ವರ ರೈಲ್ವೇ ಸ್ಟೇಶನ್ ಬಳಿ ಇರುವ ಕುನ್ನಿಲ್ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಒಂದು ಉಚಿತ ಹೋಮಿಯೋಪತಿ ವೈದ್ಯಕೀಯ ಶಿಬಿರವನ್ನು ಯಶಸ್ವಿಯಾಗಿ ನಡೆಸಿತು. ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಶಾಲೆಯ ಮೀಟಿಂಗ್ ಹಾಲ್‌ನಲ್ಲಿ ಸೇರಿದ ಶಿಬಿರ ಉದ್ಘಾಟನಾ ಸಭೆಯಲ್ಲಿ ಸ್ಥಳೀಯ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಘಟಕದ ಅಧ್ಯಕ್ಷರಾದ ಕೆ. ಅಬ್ದುಲ್ ರಝಾಕ್‌ರವರು ಅಧ್ಯಕ್ಷತೆ ವಹಿಸಿದರು. ಖುರ್‌ಆನ್ ಪಠನದ ನಂತರ ಎಂ.ಪಿ. ಇಬ್ರಾಹೀಮ್‌ರವರು ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಮಾನವ ಸ್ನೇಹ ಮತ್ತು ಮಾನವರ ಸೇವೆಯು ಇಸ್ಲಾಮ್ ಧರ್ಮದ ಪ್ರಾಮುಖ್ಯ ಉಪದೇಶಗಳಲ್ಲೊಂದಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಒಂದು ಅಂತರ್‌ರಾಷ್ಟ್ರೀಯ ಸಂಘಟನೆಯಾಗಿದ್ದು ಲೋಕದ ವಿವಿಧ ಭಾಗಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಾನವರ ಸೇವೆ ಮಾಡುತ್ತಿದೆ. ವಿಶ್ವಸಂಸ್ಥೆಯಲ್ಲಿ ನೋಂದಣಿ ಹೊಂದಿರುವ **ಹ್ಯೂಮಾನಿಟಿ ಫಸ್ಟ್** ಎಂಬ ಘಟಕವು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಅಧೀನದಲ್ಲಿ ಮಾನವರ ಸೇವೆ ಕಾರ್ಯದಲ್ಲಿ ತೊಡಗಿರುವ ಒಂದು ಸಂಸ್ಥೆಯಾಗಿದೆ ಎಂದು ಹೇಳಿ ಅದರ ಕಾರ್ಯಕ್ರಮಗಳನ್ನು ಅವರು ವಿವರಿಸಿದರು. ಸ್ಥಳೀಯ ಕುನ್ನಿಲ್ ಇಂಗ್ಲಿಷ್ ಮಾಧ್ಯಮ ಶಾಲೆಯ ಆಡಳಿತ ವೃಂದ ಹಾಗೂ ಸಿಬ್ಬಂದಿ ವರ್ಗದವರು ಈ ಕಾರ್ಯಕ್ರಮಕ್ಕೆ ನೀಡಿದ ಸಹಕಾರವನ್ನು ಅವರು ಶ್ಲಾಘಿಸಿದರು.

ನಂತರ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪರವಾಗಿ ಅಧ್ಯಕ್ಷರಾದ ಕೆ. ಅಬ್ದುಲ್ ರಝಾಕ್‌ರವರು ನೀಡಿದ ಗೌರವ ಪತ್ರವನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಮುಹಮ್ಮದ್ ಝಾಹಿದ್‌ರವರು ಸ್ವೀಕರಿಸಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶಾಲೆಯ ಮುಖ್ಯೋಪಾಧ್ಯಾಯರಾದ ಮುಹಮ್ಮದ್ ಝಾಹಿದ್‌ರವರು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಮಾಡುತ್ತಿರುವ ಇಂತಹ ಮನುಷ್ಯ ಕುಲಕ್ಕೆ ಹಿತಕರವಾದ ಸೇವೆಯು ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು. ಮೌನ ಪ್ರಾರ್ಥನೆಯೊಂದಿಗೆ ಸಭೆ ಮುಕ್ತಾಯವಾಯಿತು.

ನಂತರ ಅಪರಾಹ್ನ 2:30ರವರೆಗೆ ವೈದ್ಯಕೀಯ ಶಿಬಿರ ಮುಂದುವರಿಯಿತು. ಈ ಶಿಬಿರದಲ್ಲಿ ಡಾ॥ ಸಿದ್ದೀಕ್ ಅಶ್ರಫ್ ಅಲಿ ಮತ್ತು ಡಾ॥ (ಮಿಸೆಸ್) ವಸೀಮ ಸಲಾಮ್, ಇವರು ಅಂದಾಜು 165 ರೋಗಿಗಳನ್ನು ತಪಾಸಣೆ ನಡೆಸಿ ಉಚಿತ ಔಷಧಿ ನೀಡಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮಹಿಳಾ ಶಾಖೆಯಾದ ಲಜ್‌ನಾ ಇಮಾಇಲ್ಲಾಹ್ ಧನ್ಯವಾದಗಳನ್ನೂ ಆಯುರಾರೋಗ್ಯವನ್ನೂ ಹಾರೈಸುತ್ತದೆ.

**ವರದಿ: ರಹ್‌ಮತ್ ರಫೀಕ್,** ಸೃಷ್ಟಿ ಸೇವೆ (ಖಿದ್‌ಮತೆ ಖಲ್‌ಖ್) ವಿಭಾಗದ ಕಾರ್ಯದರ್ಶಿ

——————————:::::: ****** ::::::——————————

# ಅನಾಥಾಶ್ರಮಕ್ಕೆ ಸಹಾಯ

ಮಂಗಳೂರು: ಅಹ್ಮದಿಯಾ ಮುಸ್ಲಿಂ ಜಮಾಅತ್ ಮಂಜೇಶ್ವರದ ಮಹಿಳಾ ಘಟಕ (ಲಜ್‌ನಾ ಇಮಾಇಲ್ಲಾಹ್) ವತಿಯಿಂದ ಕಳೆದ ನವೆಂಬರ್ 5ರಂದು ಖಿದ್ಮತೆ ಖಲ್ಕ್ (ಸೃಷ್ಟಿಸೇವೆ) ಕಾರ್ಯಕ್ರಮ ಜರಗಿತು.

ಮಂಗಳೂರಿನ ಭಗಿನಿ ಸಮಾಜ ಅನಾಥಾಶ್ರಮಕ್ಕೆ ಅವರು ಭೇಟಿ ನೀಡಿ 45 ಮಕ್ಕಳಿಗೆ ಮತ್ತು 8 ಮಂದಿ ಸಿಬ್ಬಂದಿಗಳಿಗೆ ಮಧ್ಯಾಹ್ನದ ಊಟ, ಸಿಹಿತಿಂಡಿಗಳು ಮತ್ತು ಆಹಾರ ಧಾನ್ಯಗಳನ್ನು ನೀಡಿದರು.

ಲಜ್‌ನಾ ಅಧ್ಯಕ್ಷೆ ಡಾ। ವಸೀಮ ಸಲಾಂ ತನ್ನ ಭಾಷಣದಲ್ಲಿ, ಅಹ್ಮದಿಯಾ ಮುಸ್ಲಿಂ ಜಮಾಅತ್ ಶಾಂತಿಪ್ರಿಯ ಸಂಘಟನೆಯೆಂದೂ ಸಮಾಜದಲ್ಲಿ ಶಾಂತಿ–ಸೌಹಾರ್ದ ಹರಡಿಸಲು ಲೋಕದಲ್ಲೆಡೆ ಪರಿಶ್ರಮಿಸುತ್ತದೆಯೆಂದೂ ಹೇಳಿದರು. ಮಹಿಳೆಯರಿಗೆ ಶಿಕ್ಷಣ ನೀಡದೆ ಯಾವುದೇ ಸಮಾಜ ಪ್ರಗತಿ ಹೊಂದಲಾರದು ಎಂಬುದು ತಮ್ಮ ಧ್ಯೇಯವಾಕ್ಯವೆಂದೂ ಮಾನವ ಸೇವೆ ತಮ್ಮ ಲಕ್ಷ್ಯವೆಂದೂ ಅವರು ಹೇಳಿದರು. ಭಗಿನಿ ಸಮಾಜ ಅನಾಥಾಶ್ರಮದ ಮೇಲ್ನೋಟಗಾರ್ತಿಗೆ ಅವರು ನೆನಪಿನ ಕಾಣಿಕೆ ನೀಡಿದರು.

ರಹ್ಮತ್ ರಫೀಕ್ (ಸೆಕ್ರೆಟರಿ, ಖಿದ್ಮತೆ ಖಲ್ಕ್) "ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆ", "ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿಮಾರ್ಗ" ಮತ್ತಿತರ ಸಾಹಿತ್ಯಗಳನ್ನು ಅನಾಥಾಶ್ರಮಕ್ಕೆ ಕೊಡುಗೆ ಇತ್ತರು.

———————::::: ****** :::::———————

# ರೋಗಿಗಳಿಗೆ ಹಣ್ಣು ಹಂಪಲು ವಿತರಣೆ

ಮಂಗಳೂರು: ಅಹ್ಮದಿಯಾ ಮುಸ್ಲಿಂ ಜಮಾಅತಿನ ಉಪ ಘಟಕವಾದ ಮಜ್ಲಿಸ್ ಅನ್ಸಾರುಲ್ಲಾಹ್ ವತಿಯಿಂದ ಮಾರ್ಚ್ 5ರಂದು ಮಂಗಳೂರಿನ ಲೇಡಿ ಗೋಷನ್ ಆಸ್ಪತ್ರೆಯ ಸುಮಾರು 250 ರೋಗಿಗಳಿಗೂ ಸಿಬ್ಬಂದಿಗಳಿಗೂ ಹಣ್ಣು ಹಂಪಲು, ಖರ್ಜೂರ ಮತ್ತು ಬಿಸ್ಕೆಟ್ ಹಂಚಲಾಯಿತು.

ಲೋಕದಲ್ಲೆಡೆ ಇರುವ ಅಹ್ಮದಿಯಾ ಮುಸ್ಲಿಂ ಜಮಾಅತ್ ಹಮ್ಮಿಕೊಂಡಿರುವ ಖಿದ್ಮತೆ ಖಲ್ಕ್ (ಸೃಷ್ಟಿ ಸೇವೆ) ಅಂಗವಾಗಿ ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ.

ಸ್ಥಳೀಯ ಜಮಾಅತ್ ಪ್ರೆಸಿಡೆಂಟ್ ಮುಹಮ್ಮದ್ ಯೂಸುಫ್, ಝಈಂ ಅನ್ಸಾರುಲ್ಲಾ ಬಿ.ಎಸ್. ಅಬ್ದುರ್ರಹೀಂ, ಖಾಯಿದ್ ಖುದ್ದಾಮುಲ್ ಅಹ್ಮದಿಯಾ ಎಂ. ಅಬ್ದುಸ್ಸಲಾಂ ಮತ್ತು 5 ಮಂದಿ ಖಾದಿಮ್‌ಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

———————::::: ****** :::::———————

# ಅಹ್ಮದಿಯಾ ಕಿರುಹೊತ್ತಗೆ ವಿತರಣೆ

ಮಂಗಳೂರು: ಅಹ್ಮದಿಯಾ ಮುಸ್ಲಿಂ ಜಮಾಅತ್ ಮಂಗಳೂರು ವತಿಯಿಂದ ಕಳೆದ ಫೆಬ್ರವರಿ 19ರಂದು ಅಹ್ಮದಿಯಾ ಕಿರುಹೊತ್ತಗೆ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಸ್ಥಳೀಯ ಜಮಾಅತ್ ಪ್ರೆಸಿಡೆಂಟ್ ಮುಹಮ್ಮದ್ ಯೂಸುಫ್, ವೈಸ್ ಪ್ರೆಸಿಡೆಂಟ್ ಬಿ.ಎಸ್. ಅಬ್ದುರ್ರಹೀಂ, ಪ್ರಚಾರ ಕಾರ್ಯ ಸೆಕ್ರೆಟರಿ ವಿ.ಎ. ರಶೀದ್, ಮೌಲವಿ ಆಸಿಫ್ ಅಹ್ಮದ್ ಖಾದಿಂ ಸಹಿತ 10 ಮಂದಿ ಮಣಿಪಾಲ ಮತ್ತು ಉಡುಪಿಯ ಸಾರ್ವಜನಿಕರಿಗೆ ಇಸ್ಲಾಂ ಮತ್ತು ಅಹ್ಮದಿಯ್ಯತ್ ಸಾರುವ ಶಾಂತಿ ಸಂದೇಶದ ಕಿರುಹೊತ್ತಗೆಗಳನ್ನು ವಿತರಣೆ ಮಾಡಿದರು.

———————::::: ****** :::::———————

## ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

**ಜನಾಬ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್** **ರೂ. 1000/–**
(ನಿವೃತ್ತ ಮುಖ್ಯೋಪಾಧ್ಯಾಯರು, ಬೆಂಗಳೂರು)

## ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ......

**ಸಂಪಾದಕರಿಗೆ**

### (ಜೂನ್ 1979ರ ಸಂಚಿಕೆಯಿಂದ)

ಮಾನ್ಯ ಸಂಪಾದಕರಿಗೆ,

ತಮ್ಮ ತ್ರೈಮಾಸಿಕ ಪತ್ರಿಕೆಯಾದ "ಯುಗರಶ್ಮಿ" ಓದಿ ನನಗೆ ಬಹಳ ಆನಂದವಾಯಿತು. ನಾನು ಹಿಂದೂ ಧರ್ಮದವನಿದ್ದರೂ ಎಲ್ಲ ಧರ್ಮಗಳ ಬಗ್ಗೆ ಗೌರವಭಾವನೆಯುಳ್ಳವನಾಗಿರುತ್ತೇನೆ. ಇಸ್ಲಾಮ್ ಧರ್ಮದ ಬೋಧನೆ, ಮುಹಮ್ಮದ್ ಪೈಗಂಬರರು ಹೇಳಿದ ದೇವವಾಣಿ ಹಾಗೂ ಅವರು ಅಂದಿನ ಕಾಲದಲ್ಲಿ ನಡೆದು ತೋರಿಸಿದ, ನುಡಿದಂತಹ ವಚನಗಳ ಸಮಗ್ರಸಾರವನ್ನು ಕನ್ನಡದಲ್ಲಿ ಪ್ರಕಟಿಸಿ ಇಸ್ಲಾಮ್ ಧರ್ಮದ ಮಹತ್ವವನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತಿರುವ ತಮಗೆ ನನ್ನ ಅಭಿನಂದನೆಗಳು. ತಮ್ಮ ಪತ್ರಿಕೆ ಹೀಗೆಯೇ ಇಸ್ಲಾಮ್ ಧರ್ಮದ ಮಹತ್ವವನ್ನು ಹಾಗೂ ಅದಕ್ಕಾಗಿ ಪ್ರವಾದಿಗಳು ಪಟ್ಟ ಪರಿಶ್ರಮದ ಇತಿಹಾಸವನ್ನು ಇನ್ನೂ ಹೆಚ್ಚಿಗೆ ತಿಳಿಸುವಂತಾಗಲಿ ಎಂದು ಹಾರೈಸುತ್ತೇನೆ. ಇಸ್ಲಾಮ್ ಧರ್ಮ ಹಾಗೂ ಹಿಂದೂ ಧರ್ಮ ಇವೆರಡರ ಉಪದೇಶ, ಗುರಿ ಏನೆಂಬುದನ್ನು ಹಾಗೂ ನಡೆದು ಬರುತ್ತಿರುವ ದಾರಿಯನ್ನು ತಮ್ಮ ಪತ್ರಿಕೆ ತಿಳಿಸಿಕೊಡಬೇಕೆಂದು ನಾನು ಇಚ್ಛಿಸುತ್ತೇನೆ. ಮುಹಮ್ಮದ್ ಪೈಗಂಬರರು ಹಾಗೂ ಶ್ರೀ ಜಗಜ್ಯೋತಿ ಬಸವೇಶ್ವರರು ಹೇಳಿದ ತತ್ವ ವಚನಗಳು ಒಂದೇ ಎಂದು ನಾನು ಭಾವಿಸಿದ್ದೇನೆ.

ಯಾವ ಧರ್ಮವಾದರೂ ಇಡೀ ಮಾನವ ಕುಲಕ್ಕೆ ಒಳ್ಳೆಯದಾಗಲಿ, ಸುಖವಾಗಿ ಬಾಳಲಿ, ಪರಸ್ಪರರು ಪ್ರೀತಿಯಿಂದ ಇರಲಿ, ಎಲ್ಲರೂ ದೇವರ ಅಧೀನ, ಎಲ್ಲರೂ ಅವನ ಅಪ್ಪಣೆಯಂತೆ ನಡೆಯಬೇಕೆಂದು ಹೇಳುತ್ತವೆ. ಅದರಂತೆ ಇಸ್ಲಾಮ್ ಧರ್ಮವು ಸಕಲರ ಒಳಿತಿಗಾಗಿಯೇ ಹುಟ್ಟಿ ಬಂದಿರುತ್ತದೆ. ಅದರ ತತ್ವವನ್ನು ಎಲ್ಲರೂ ತಿಳಿದುಕೊಂಡು ಅದರಂತೆ ನಡೆದುಕೊಂಡು ಹೋಗಲು ದೇವರು ನಮಗೆ ಬುದ್ಧಿ ಕೊಡಲಿ ಎಂದು ನಾನು ಬೇಡಿಕೊಳ್ಳುತ್ತೇನೆ.

ತಮ್ಮ ಪತ್ರಿಕೆ ಜನತೆಗೆ, ಅದರಲ್ಲಿಯೂ ತಮ್ಮ ಮತಾವಲಂಬಿಗಳಿಗೆ ಹೆಚ್ಚಿನ ಮಾರ್ಗದರ್ಶನ ಮಾಡಿ, ಅವರನ್ನು ಸನ್ಮಾರ್ಗಿಗಳನ್ನಾಗಿ ಮಾಡಲಿ ಎಂದು ತಮ್ಮ ಪತ್ರಿಕೆಗೆ ಶುಭಕೋರುತ್ತೇನೆ.

**ಬೈಲಹೊಂಗಲ.** ತಮ್ಮ ಆತ್ಮೀಯ ವಾಚಕ,

**ಮೋಹನ ಮುರಗೋಡ.**

-----------:::::: ****** ::::::-----------

ಪ್ರಿಯ ಸಂಪಾದಕರೇ,

ಯುಗರಶ್ಮಿಯ ಒಂದು ಸಂಚಿಕೆಯನ್ನು ನನಗೆ ಯಾರೋ ಕೊಟ್ಟಿದ್ದರು. ಅದನ್ನು ಓದಿ ತುಂಬಾ ಸಂತೋಷವಾಯಿತು. ಅಹ್ಮದಿಯಾ ಸಂಘಟನೆಯ ಕುರಿತು ಅದರ ಸರಿಯಾದ ತತ್ವಜ್ಞಾನಗಳನ್ನು ತಿಳಿದುಕೊಳ್ಳಲು ಸ್ನೇಹಪೂರ್ವಕವಾಗಿ ನಾನು ಬಯಸಿದ್ದೇನೆ. ತಾವು ನನ್ನ ಆಶೆಯನ್ನು ಪೂರೈಸಿಕೊಡುವಿರಾದರೆ ತುಂಬಾ ಸಂತೋಷ.

**ಸಜೀಪ.** **ಓರ್ವ ಮೌಲವಿ ಸಾಹೇಬರು.**

-----------:::::: ****** ::::::-----------

### (ಸಪ್ಟೆಂಬರ್ 1979ರ ಸಂಚಿಕೆಯಿಂದ)

ಪ್ರಿಯರೇ,

ತಮ್ಮ ಜೂನ್ 1979ರ 'ಯುಗರಶ್ಮಿ' ಸಿಕ್ಕಿತು. ಅದರಲ್ಲಿರುವ 'ಇಸ್ಲಾಂ ಮತ ತತ್ವಜ್ಞಾನ' ಎಂಬ ಲೇಖನವನ್ನು ನಾನು ಬಹಳವಾಗಿ ಮೆಚ್ಚಿದ್ದೇನೆ. ಇಸ್ಲಾಂ ಮತದ ತತ್ವಗಳನ್ನು ಸರಳವಾಗಿ ವಿವರಿಸುವ ಲೇಖನಗಳು ತಮ್ಮ ಪತ್ರಿಕೆಯಲ್ಲಿ ಬಹಳಷ್ಟು ಬಂದು, ಅದನ್ನು ಸರ್ವರೂ ತಿಳಿಯುವಂತಾಗಲಿ ಎಂದು ಹಾರೈಸುತ್ತೇನೆ.

**ಸಿದ್ಧಕಟ್ಟೆ.** **ಟಿ. ಚಂದ್ರರಾಜ ಶೆಟ್ಟಿ**

-----------:::::: ****** ::::::-----------


ಪ್ರಿಯ ಸಂಪಾದಕರಿಗೆ,

ತ್ರೈಮಾಸಿಕ ಪತ್ರಿಕೆ **"ಯುಗರಶ್ಮಿ"**ಯಲ್ಲಿ ಸರ್ ಮುಹಮ್ಮದ್ ಝಫರುಲ್ಲಾ ಖಾನರವರ "Wisdom of the Holy Prophet Muhammad" ಎಂಬ ಪುಸ್ತಕದಿಂದ ಆಯ್ದುಕೊಂಡ **"ಮುಹಮ್ಮದ್ ಪೈಗಂಬರರ ನುಡಿಮುತ್ತುಗಳ"**ನ್ನು ಓದಿ ಬಹಳ ಸಂತೋಷವಾಯಿತು. ನೈತಿಕ ಮೌಲ್ಯಗಳನ್ನು ಓದಿ ಅದರಂತೆ ನಾವು ಸಹ ಜೀವನದಲ್ಲಿ ನಡೆದುಕೊಂಡು ಹೋದರೆ ಒಂದು ಒಳ್ಳೆಯ ದಡವನ್ನು ಸೇರಿದಂತೆಯಾಗುತ್ತದೆ ಎಂದು ಊಹಿಸಿಕೊಳ್ಳುತ್ತೇನೆ.

**ಮೆವುಂದಿ.** **ಡಿ. ಜಿ. ಕಡಕೊಲ್**

**ನಿಧನ ವಾರ್ತೆಗಳು**

## ಮೌಲಾನಾ ಹಕೀಂ ಮುಹಮ್ಮದುದ್ದೀನ್ ಸಾಹೇಬ್




ಖಾದಿಯಾನ್: ಕಳೆದ ಮಾರ್ಚ್ 15ರಂದು ಮೌಲಾನಾ ಹಕೀಂ ಮುಹಮ್ಮದುದ್ದೀನ್ ಸಾಹೇಬ್ ನಿಧನರಾದರು. (**"ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್".**) ಅವರಿಗೆ 97 ವರ್ಷ ಪ್ರಾಯವಾಗಿತ್ತು. ಅವರು ಹಝ್ರತ್ ಮಸೀಹ್ ಮೌಊದರ(ಅ) ಸಹಾಬಿ ಮೌಲವಿ ವಝೀರುದ್ದೀನ್ ಸಾಹೇಬರ ಮೊಮ್ಮಗ.

ಸದರ್ ಅಂಜುಮನ್ ಅಹ್ಮದಿಯಾ ಪ್ರೆಸಿಡೆಂಟ್, ಜಾಮಿಅ ಅಹ್ಮದಿಯಾ ಖಾದಿಯಾನ್ ಪ್ರಿನ್ಸಿಪಾಲ್ ಮತ್ತು ಸುಮಾರು 25 ವರ್ಷಗಳ ಕಾಲ ಅವರು ಭಾರತದ ವಿವಿಧ ಕಡೆಗಳಲ್ಲಿ ಮುಬಲ್ಲಿಗ್ ಆಗಿ ಸೇವೆ ಸಲ್ಲಿಸಿದ್ದಾರೆ. 1968ರಲ್ಲಿ ಅವರು ಬೆಂಗಳೂರಿನಲ್ಲಿ ಮುಬಲ್ಲಿಗ್ ಆಗಿದ್ದಾಗ, ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) 1967ನೇ ಇಸವಿ ಜುಲಾಯಿ 28ರಂದು ಲಂಡನಿನ ವಾಂಡ್ಸ್‌ವರ್ತ್ ಟೌನ್‌ಹಾಲ್‌ನಲ್ಲಿ ಮಾಡಿದ ಭಾಷಣ "A MESSAGE OF PEACE AND A WORD OF WARNING" ಇದರ ಕನ್ನಡಾನುವಾದ **"ಶಾಂತಿ ಸಂದೇಶವೂ ಮುನ್ನೆಚ್ಚರಿಕೆಯೂ"** (ಅನುವಾದಕ: ಮುಹಮ್ಮದ್ ಯೂಸುಫ್) ಎಂಬ ಪುಸ್ತಕದ 5000 ಪ್ರತಿಗಳನ್ನು ಪ್ರಕಟಿಸುವ ಏರ್ಪಾಡು ಮಾಡಿದ್ದರು. ಅವರಿಗೆ ಹಜ್ಜ್ ತೀರ್ಥಾಟನೆಯ ಭಾಗ್ಯವೂ ಲಭಿಸಿದೆ. ಅವರು ಬಹಳ ವಿನಯ ಸ್ವಭಾವದವರಾಗಿದ್ದರು. ಅವರು 6 ಮಂದಿ ಪುತ್ರಿಯರನ್ನೂ ಇಬ್ಬರು ಪುತ್ರರನ್ನೂ ಅಗಲಿದ್ದಾರೆ.

ಅಲ್ಲಾಹು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ – ಆಮೀನ್.

-----------:::::: ****** ::::::-----------

## ಜನಾಬ್ ಎನ್. ಕುಞ್ಞಹ್ಮದ್ ಮಾಸ್ಟರ್ ಸಾಹೇಬ್



ಪಯಂಗಾಡಿ: ಜ। ಎನ್. ಕುಞ್ಞಹ್ಮದ್ ಮಾಸ್ಟರ್ ಸಾಹೇಬ್ ಕಳೆದ ಮಾರ್ಚ್ 15ರಂದು ನಿಧನ ಹೊಂದಿದರು. (**'ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್'.**) ಅವರಿಗೆ 80 ವರ್ಷ ಪ್ರಾಯವಾಗಿತ್ತು. 1962ರಲ್ಲಿ ಅವರು ಅಹ್ಮದಿಯಾ ಜಮಾಅತಿಗೆ ಸೇರಿದರು. ಜಮಾಅತಿಗೆ ಸೇರಿದ ಕಾರಣದಿಂದ ಅವರು ತನ್ನ ಕುಟುಂಬದವರಿಂದ ದೌರ್ಜನ್ಯಕ್ಕೆ ಗುರಿಯಾಗಿದ್ದರು.

ಅವರು ಖಾಯಿದ್ ಖುದ್ದಾಮುಲ್ ಅಹ್ಮದಿಯಾ, ಝಈಂ ಅನ್ಸಾರುಲ್ಲಾಹ್, ಸ್ಥಳೀಯ ಅಮೀರ್, ಕಣ್ಣೂರ್ ಝೋನಲ್ ಅಮೀರ್, ಅನ್ಸಾರುಲ್ಲಾಹ್ ಸ್ಟೇಟ್ ನಾಝಿಂ ಇತ್ಯಾದಿ ಹುದ್ದೆಗಳನ್ನು ವಹಿಸಿ ಜಮಾಅತಿಗೆ ಸೇವೆ ಸಲ್ಲಿಸಿದ್ದಾರೆ. ಸುಮಾರು 50 ವರ್ಷ ಕಾಲ ಅವರು ಪಯಂಗಾಡಿ ಸ್ಥಳೀಯ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾಗಿದ್ದರು. 1989ರಲ್ಲಿ ಕೊಡಿಯತ್ತೂರ್‌ನಲ್ಲಿ ನಡೆದ ಐತಿಹಾಸಿಕ ಮುಬಾಹಲದಲ್ಲಿ ಭಾಗವಹಿಸಿದ 40 ಮಂದಿ ಅಹ್ಮದಿಯರಲ್ಲಿ ಅವರು ಒಬ್ಬರಾಗಿದ್ದರು.

ಮಲಯಾಳಂ ಖುರ್‌ಆನ್ ಭಾಷಾಂತರ ಕಾರ್ಯದಲ್ಲಿ ಮೌಲಾನಾ ಅಬುಲ್ ವಫಾ ಸಾಹೇಬರಿಗೆ ಅವರು ನೆರವಿತ್ತಿದ್ದಾರೆ. ಅವರು ಇಂಪಾಗಿ ಖುರ್‌ಆನ್ ಪಠಣ ಮಾಡುತ್ತಿದ್ದರು. **"ತಜ್‌ವೀಝ್"** ಮತ್ತು **"ಅದ್ದುವಾ"** ಎಂಬ ಪುಸ್ತಕಗಳನ್ನು ಅವರು ರಚಿಸಿದ್ದಾರೆ. **"ಅಲ್ ಖಸೀದ"**ವನ್ನು ಅವರು ಮಲಯಾಳಮಿಗೆ ಅನುವಾದಿಸಿದ್ದಾರೆ.

1994ರಲ್ಲಿ ಅವರು ಹೆಡ್‌ಮಾಸ್ಟರ್ ಹುದ್ದೆಯಿಂದ ನಿವೃತ್ತರಾದರು. 2009ರಲ್ಲಿ ಅವರು ಕುಟುಂಬ ಸಮೇತ ಉಮ್ರ ಮಾಡಿದರು. ಅವರ ದ್ವಿತೀಯ ಪುತ್ರ ಮುಸದ್ದಿಖ್ ಅಹ್ಮದ್ ಸಾಹೇಬ್ ಬೆಂಗಳೂರು ಅಹ್ಮದಿಯಾ ಜಮಾಅತಿನ ಅಮೀರ್ ಆಗಿದ್ದಾರೆ.

ಜ। ಕುಞ್ಞಹ್ಮದ್ ಮಾಸ್ಟರ್ ಸಾಹೇಬ್, ಪತ್ನಿ, ಇಬ್ಬರು ಪುತ್ರರು, ಒಬ್ಬ ಪುತ್ರಿ ಮತ್ತು ಅನೇಕ ಬಂಧುಮಿತ್ರಾದಿಗಳನ್ನು ಅಗಲಿದ್ದಾರೆ. ಮೃತದೇಹವನ್ನು ಪಯಂಗಾಡಿ ಅಹ್ಮದಿಯಾ ಖಬರಸ್ತಾನದಲ್ಲಿ ದಫನ ಮಾಡಲಾಯಿತು.

ಅಲ್ಲಾಹನು ಅವರಿಗೆ ಮಗ್‌ಫಿರತ್ ಮತ್ತು ಜನ್ನತನ್ನು ದಯಪಾಲಿಸಲಿ – ಆಮೀನ್.

## ಜನಾಬ್ ಮುಹಮ್ಮದ್ ಇರ್ಫಾನುಲ್ಲಾಹ್ ಅಹ್ಮದಿ ಸಾಹೇಬ್



ಬೆಂಗಳೂರು: ಕಳೆದ ಜನವರಿ 7 ಶನಿವಾರದಂದು ಸೆಕ್ರಿಟರಿ ವಸಾಯ ಬೆಂಗಳೂರು, ಜನಾಬ್ ಮುಹಮ್ಮದ್ ಇರ್ಫಾನುಲ್ಲಾಹ್ ಅಹ್ಮದಿ ಸಾಹೇಬ್ ನಿಧನರಾದರು. (ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್). ಅವರಿಗೆ 67 ವರ್ಷ ಪ್ರಾಯವಾಗಿತ್ತು. ಅವರು ಬೆಂಗಳೂರಿನ ಪ್ರಥಮ ಅಹ್ಮದಿ ಜನಾಬ್ ಮೂಸಾ ರಝಾ ಸಾಹೇಬರ ಪುತ್ರರಾದ ಜನಾಬ್ ಬಿ.ಎಂ. ಅಬ್ದುರಹೀಮ್ ಸಾಹೇಬರ ಮೊಮ್ಮಗ ಹಾಗೂ ಜನಾಬ್ ಸಿಬ್ಗತುಲ್ಲಾಹ್ ಸಾಹೇಬರ ಜೇಷ್ಠ ಪುತ್ರರಾಗಿದ್ದರು.

ಖಾದಿಯಾನ್ ಮದರಸಾ ಅಹ್ಮದಿಯಾದಲ್ಲಿ ಒಂದು ವರ್ಷ ಮೌಲ್ವಿ ಕೋರ್ಸ್ ಕಲಿತರು. ಹಝ್ರತ್ ಖಲೀಫತುಲ್ ಮಸೀಹ್ ತೃತೀಯರು, ಚತುರ್ಥರು ಹಾಗೂ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬ್ (ಅಯ್ಯದಹುಲ್ಲಾಹ್)ರೊಡನೆ ಮುಖತಃ ಭೇಟಿ ಮಾಡುವ ಭಾಗ್ಯ ಪಡೆದಿದ್ದರು. ಕೆಲವು ಸಮಯ ಪ್ಯಾರಿಸ್ ಮತ್ತು ಲಂಡನಿನಲ್ಲಿಯೂ ವಾಸವಾಗಿದ್ದರು.

ಇಸ್ಲಾಂ ಅಹ್ಮದಿಯತಿನ ಪ್ರಚಾರ ಎಂದರೆ ಅವರಿಗೆ ಎಲ್ಲಿಲ್ಲದ ಉತ್ಸಾಹ ತುಂಬಿ ಬರುತ್ತಿತ್ತು. **"ಹಫ್ತಾ ತಬ್ಲೀಗ್"** ಇನ್ನಿತರ ಜಮಾಅತಿನ ಕೆಲಸ ಕಾರ್ಯಗಳಲ್ಲಿ ತಪ್ಪದೆ ಮೊದಲಿಗರಾಗಿ ಭಾಗವಹಿಸುತ್ತಿದ್ದರು. ಉರ್ದು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪರಿಣತಿ ಹೊಂದಿದ್ದರು. ಫ್ರೆಂಚ್ ಭಾಷೆಯನ್ನೂ ಅರಿತಿದ್ದರು. ಅವರು ಕ್ರೈಸ್ತರು, ಹಿಂದು, ಯಹೂದಿಯರಲ್ಲಿಯೂ ಪ್ರಚಾರ ಮಾಡಿದ್ದುಂಟು. ಜಮಾಅತಿನ ವಿವಿಧ ಹುದ್ದೆಯಲ್ಲಿದ್ದುಕೊಂಡು ಸೇವೆಯನ್ನು ಸಲ್ಲಿಸಿದ್ದಾರೆ. ತುಂಬಾ ಚಾರಿತ್ರ್ಯವಂತರು, ಮೃದು ಸ್ವಭಾವದವರು.

ಅವರು ಒಂದು ಹೊಸ ಕಾರನ್ನು ಖರೀದಿಸಿಕೊಂಡು ನೇರವಾಗಿ ಮಸೀದಿಗೆ ಬಂದರು. ಮೌಲ್ವಿ ಕಲೀಮ್ ಖಾನ್ ಸಾಹೇಬರಿಗೆ ಸಿಹಿಯನ್ನು ನೀಡುತ್ತಾ ಹೇಳಿದರು– ಇದು ನಾನು ಫಜ್ರ್ ನಮಾಝ್‌ಗೆ ಬರುವ ಉದ್ದೇಶದಿಂದ ಪಡಕೊಂಡಿರುತ್ತೇನೆ. ಅಂದಿನಿಂದ ಅವರು ಎಂದೂ ಫಜ್ರ್ ನಮಾಝ್ ತಪ್ಪಿಸಲಿಲ್ಲ.

ಮೃತರು ಪತ್ನಿ (ಅಸೌಖ್ಯದಿಂದ ಬಳಲುತ್ತಿದ್ದಾರೆ; ಅವರ ಆರೋಗ್ಯಕ್ಕಾಗಿ ಪ್ರಾರ್ಥಿಸಬೇಕಾಗಿದೆ), ಇಬ್ಬರು ಪುತ್ರರು, ಓರ್ವ ಪುತ್ರಿ ಮತ್ತು ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ. ಜನವರಿ 8ರಂದು ಖಾದಿಯಾನಿನ ಬಿಹಿಶ್ತಿ ಮಖ್‌ಬರದಲ್ಲಿ ಮೃತದೇಹವನ್ನು ದಫನ ಮಾಡಲಾಯಿತು. ಮೃತರಿಗೆ ಅಲ್ಲಾಹನು ಮಗ್‌ಫಿರತ್ ಮತ್ತು ಜನ್ನತನ್ನು ಅನುಗ್ರಹಿಸಲಿ – ಆಮೀನ್.

**–ಹಷ್ಮತುಲ್ಲಾಹ್ ಅಹ್ಮದಿ, ನಾಇಬ್ ಅಮೀರ್, ಜಮಾಅತ್ ಅಹ್ಮದಿಯಾ ಬೆಂಗಳೂರು.**


## Statement about ownership and other particulars about the Newspaper Yugarashmi Quarterly (Form IV see Rule 8)

| | | |
|---|---|---|
| 1. Place of publication | : | Mangalore |
| 2. Period of its publication | : | Quarterly |
| 3. Printer's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore – 575001 |
| 4. Publisher's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore – 575001 |
| 5. Editor's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore - 575001 |
| 6. Name and address of individuals who own the newspaper and partners or shareholders holding more than one percent of the Capital | : | Jamath Ahmadiyya, "Darussalam", Near Railway Level Crossing, Pandeshwar, Mangalore – 575001 |

I, Muhammad Yusuf hereby declare that the particulars given above are true to the best of my knowledge and belief.

Sd/-

Date : 1-4-2017

Muhammad Yusuf

**ಅಹ್ಮದಿಯರಿಗೆ ಸುತ್ತೋಲೆ**

## ತಅ್‌ಲೀಮುಲ್ ಖುರ್‌ಆನ್

ತಅ್‌ಲೀಮುಲ್ ಖುರ್‌ಆನ್ ಸಂಬಂಧಿಸಿ, ಸಯ್ಯಿದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್, ಮಜ್‌ಲಿಸ್ ಅನ್ಸಾರುಲ್ಲಾಹ್‌ದ ಸದಸ್ಯರನ್ನು ಸಂಬೋಧಿಸಿ ಹೇಳುತ್ತಾರೆ:

'ಇದಕ್ಕೆ ಸಂಬಂಧಿಸಿ ಪ್ರಯತ್ನಿಸಬೇಕೆಂದು ನಾನು ಎಲ್ಲ ಶಾಖಾ ಸಂಘಟನೆಗಳೊಂದಿಗೆ ಹೇಳುತ್ತೇನೆ. ಆದರೂ ಅನ್ಸಾರುಲ್ಲಾಹ್‌ರೊಂದಿಗೆ ವಿಶೇಷವಾಗಿ ಹೇಳುತ್ತೇನೆ. ಏಕೆಂದರೆ ಈ ಕೆಲಸದ ಹೊಣೆಗಾರಿಕೆ ಅವರಿಗೆ ನೀಡಲಾಗಿತ್ತು. ಆದ್ದರಿಂದಲೇ 'ತಅ್‌ಲೀಮುಲ್ ಖುರ್‌ಆನ್' ಎಂಬ ಹೆಸರಿನ ಒಂದು ನೇತೃತ್ವ ಅವರಿಗಾಗಿ ಇದೆ. ಅನ್ಸಾರ್ ಸಹೋದರರು ಪರಿಪೂರ್ಣವಾಗಿ ಶ್ರದ್ಧೆವಹಿಸುವುದಾದರೆ, ಪ್ರತಿ ಮನೆಯಲ್ಲಿ ನಿಯತವಾಗಿ ಪವಿತ್ರ ಖುರ್‌ಆನ್ ಪಾರಾಯಣ ಮಾಡಿಸುವ ಮತ್ತು ಅದನ್ನು ಮನವರಿಕೆ ಮಾಡಿಸುವ ಕ್ಲಾಸುಗಳನ್ನು ಸಂಘಟಿಸಬಹುದು ................ ತೃತೀಯ ಖಿಲಾಫತ್ ಕಾಲದಲ್ಲಿ ಪವಿತ್ರ ಖುರ್‌ಆನ್‌ನ ಪಾಠವನ್ನು ಪ್ರಚಲಿತಗೊಳಿಸುವ ಹೊಣೆಗಾರಿಕೆ ಅನ್ಸಾರುಲ್ಲಾಹ್‌ಗೆ ನೀಡಲಾಗಿತ್ತು. ಪವಿತ್ರ ಖುರ್‌ಆನ್‌ನ ಪಾರಾಯಣದ ಕಡೆಗೆ ಗಮನ ಹರಿಸಿರಿ, ಮನೆಗಳನ್ನು ಸಹ ಅದರ ಪ್ರಕಾಶದಿಂದ ಬೆಳಗಿಸಿರಿ.' (ಜುಮುಅ ಖುತ್‌ಬ 24 ಡಿಸೆಂಬರ್, 2004)

ಬಹುಮಾನ್ಯ ಮಜ್‌ಲಿಸ್ ಅನ್ಸಾರುಲ್ಲಾಹ್‌ದ ಸದಸ್ಯರೇ,

ತಮ್ಮ ಪ್ರಿಯ ಇಮಾಮರ ಧ್ವನಿಗೆ ಕಿವಿಗೊಡುತ್ತಾ, ವಖ್‌ಫೆ ಆರ್‌ಝೀಯ ಮಹತ್ತಾದ ದೈವಿಕ ಯೋಜನೆಯ ಅಡಿಯಲ್ಲಿ ಎರಡರಿಂದ ಆರು ವಾರಗಳ ವರೆಗಿನ ಸಮಯವನ್ನು ತ್ಯಾಗ ಮಾಡುತ್ತಾ ಮುಂದಕ್ಕೆ ಹೆಜ್ಜೆ ಹಾಕಿರಿ. ಪವಿತ್ರ ಖುರ್‌ಆನ್ ಪಾರಾಯಣ ಮಾಡುವ ಮತ್ತು ಮಾಡಿಸುವ ಮಹಾ ಜಿಹಾದಿನಲ್ಲಿ ಭಾಗವಹಿಸಿರಿ. ಅಲ್ಲಾಹನು ಅದರ ಸೌಭಾಗ್ಯ ದಯಪಾಲಿಸಲಿ – ಆಮೀನ್.

**– ನಝಾರತ್ ಇಸ್‌ಲಾಹ್ ವ ಇರ್ಶಾದ್ ತಅ್‌ಲೀಮುಲ್ ಖುರ್‌ಆನ್ ವಖ್‌ಫೆ ಆರ್‌ಝೀ**

ಸಂಪರ್ಕಿಸಿರಿ: 09872022708, 09417411702, 01872220861

## ತಹ್‌ರೀಕ್ ಜದೀದಿನ ವೈಶಿಷ್ಟ್ಯಗಳು

ಸಯ್ಯಿದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ದೃಢಸಂಕಲ್ಪ, ದೇವದತ್ತ ಸೂಕ್ಷ್ಮಗ್ರಹಿಕೆ ಮತ್ತು ವಿವೇಕದ ಕನ್ನಡಿಯಾದ ಕ್ರಾಂತಿಕಾರಿ ಯೋಜನೆ 'ತಹ್‌ರೀಕ್ ಜದೀದ್'ಗೆ ಜಮಾಅತಿನ ಎಲ್ಲ ಐಚ್ಛಿಕ ಯೋಜನೆಗಳ ಮೇಲೆ ಹಲವು ವಿಧದಲ್ಲಿ ಒಂದು ವಿಶಿಷ್ಟ ಮತ್ತು ಪ್ರತ್ಯೇಕವಾದ ಸ್ಥಾನವಿದೆ. ಉದಾ:–

ತಹ್‌ರೀಕ್ ಜದೀದಿನ ಕಾರ್ಯವಲಯ ಲೋಕದ ಎಲ್ಲ ಕೋನಗಳವರೆಗೆ ಹರಡಿದೆ. ಇದರ ಜಾರಿಯಾಗುವಿಕೆಯ ಅತಿ ಮುಖ್ಯ ಮೂಲಭೂತ ಉದ್ದೇಶ ಲೋಕದೆಲ್ಲೆಡೆ ಅಲ್ಲಾಹನ ಆಧ್ಯಾತ್ಮಿಕ ಪ್ರಭುತ್ವ ಸ್ಥಾಪಿಸುವುದಾಗಿದೆ.

ತಹ್‌ರೀಕ್ ಜದೀದ್ ಜಾಗತಿಕ ಮಟ್ಟದಲ್ಲಿ ತರ್‌ಬಿಯತ್(ತರಬೇತಿ), ಇಸ್‌ಲಾಹ್(ಸುಧಾರಣೆ) ಮತ್ತು ದಅ್‌ವತ್ ಇಲಲ್ಲಾಹ್‌ದ(ತಬ್ಲೀಗ್) ಮಹಾ ಜಿಹಾದ್‌ಗಳ ಸಮ್ಮಿಶ್ರವಾಗಿದೆ.

ತಹ್‌ರೀಕ್ ಜದೀದಿನ ಕಾರಣದಿಂದ ಅಹ್ಮದಿಯಾ ಜಮಾಅತಿಗೆ ಇಸ್ಲಾಮಿನ ಮತ್ತೆಲ್ಲ ಪಂಗಡಗಳಿಗಿಂತ ಅಧಿಕ ಸತ್ಯಸಂದೇಶ ತಲುಪಿಸಿದ ವಿಶಿಷ್ಟವಾದ ಪದವಿ ಲಭಿಸಿದೆ.

ತಹ್‌ರೀಕ್ ಜದೀದ್ ಮೂಲಕ ಇಸ್ಲಾಮಿನ ವಿಶ್ವವ್ಯಾಪಿ ಆಧ್ಯಾತ್ಮಿಕ ವಿಜಯ ಮತ್ತು ಪ್ರಭುತ್ವದ ಸ್ಥಾಪನೆಯ ಸುವಾರ್ತೆ ನೀಡಲಾಗಿದೆ.

ತಹ್‌ರೀಕ್ ಜದೀದ್‌ನ ಮಹಾ ಜಿಹಾದಿನಲ್ಲಿ ಸೇರುವುದು ದೇವ ಸಾಮೀಪ್ಯ ಲಭ್ಯತೆಯ ಮಾರ್ಗವಾಗಿದೆ.


ತಹ್‌ರೀಕ್ ಜದೀದ್‌ನಲ್ಲಿ ಮಾಡಲಾಗುವ ಪ್ರತಿಯೊಂದು ತ್ಯಾಗ ಸದ್‌ಖ ಜಾರಿಯಃದ ಪುಣ್ಯ ಸಿಗುವಂತದ್ದಾಗಿದೆ.

ತಹ್‌ರೀಕ್ ಜದೀದ್‌ನ ಮಹಾ ಜಿಹಾದಿನಲ್ಲಿ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ಭಾಗಿಯಾಗುವುದು ಅತ್ಯಗತ್ಯವೆಂದು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳಿದ್ದಾರೆ.

ತಹ್‌ರೀಕ್ ಜದೀದ್‌ಗಾಗಿ ಅಲ್ಲಾಹನ ಆಸ್ಥಾನದ ಫಕೀರಾಗಲು ತಾಕೀತು ಮಾಡಲಾಗಿದೆ.

ತಹ್‌ರೀಕ್ ಜದೀದ್‌ಗೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರು(ರಹ್) ಎಲ್ಲ ಐಚ್ಛಿಕ ಚಂದಾಗಳ ತಾಯಿಯ ಸ್ಥಾನ ನೀಡಿದ್ದಾರೆ ಮತ್ತು ಆಮ್ ಚಂದಾದ ನಂತರ ಚಂದಾ ತಹ್‌ರೀಕ್ ಜದೀದ್ ಅತ್ಯಂತ ಮುಖ್ಯ ಮತ್ತು ಆವಶ್ಯಕ ಚಂದಾ ಎಂದು ನಿರ್ಣಯಿಸಿದ್ದಾರೆ.

**– ತಹ್‌ರೀಕ್ ಜದೀದ್ ಖಾದಿಯಾನ್.**





## ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

## ಕನ್ನಡ ಭಾಷಾಂತರ

**ಬೆಲೆ : ರೂ. 200/-**




# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

**ಗ್ರಂಥಕರ್ತ : ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್**

**ಪುಟಗಳು - 320. ಬೆಲೆ : 100/-**

## ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

**National Toll Free Number : 1800 3010 2131**
**National Website : ahmadiyyamuslimjamaat.in**
**International Website : alislam.org**
**Email : info@ahmadiyyamuslimjamaat.in**

# Ahmadiyya Muslim Community

## Apps for mobile devises

Download free apps developed by Ahmadiyya Muslim Community for your iphone,ipode, and Android




**Quran**
Read the Holy Quran in easy Yassarnal Quran Font




**Conditions of Bai'at**
A pocket reference of Shara't-e-Bai'at in 7 languages



**Sermons**
Huzoor's Friday Sermons In 15 languages




**MTA**
Watch MTA Live, view Schedule and much more



**Ahmadiyya News**
Stay up to date with the Latest jama'at news

View these apps at alislam.org/apps or scan the QR code below










ಖಾದಿಯಾನ್:
ಡಿಸೆಂಬರ್ 26, 27, 28 ರಂದು
ಜರಗಿದ 122ನೇ ಜಲ್ಸಾ ಸಾಲಾನ
(ವಾರ್ಷಿಕ ಸಮ್ಮೇಳನ)






ಬೆಂಗಳೂರು:
ಜನವರಿ 29 ರಂದು
ಜರಗಿದ
ಶಾಂತಿ ವಿಚಾರ ಗೋಷ್ಠಿ 2017





Registered with the Registrar of Newspapers for India No. R.N. 27354/75
**Yugarashmi** Kannada Quarterly, **April - 2017.** Price : **Rs. 15/-**























## NEW PUBLICATIONS




**Contact:**

**NAZARAT NASHRO-ISHA'AT**
**Sadr Anjuman Ahmadiyya**
**Qadian-143516 (Punjab)**
**Phone: 01872- 500970**

Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore